ಸಂಪುಟ 20 ಸಂಚಿಕೆ 30 ಜುಲೈ 19-25, 1999 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ



ಸಿಹಿಯಾದ ಬೆಳೆ-ಕಹಿಯಾದ ಬದುಕು



ಜಾತ್ಯಾತೀತ ತತ್ವದ ಬೆನ್ನಿಗೆ ಪಟೇಲರಿಂದ ಚೂರಿ



ದಿಲೀಪ್‌ಕುಮಾರ್-ಕಾರ್ಗಿಲ್-ಸರ್ಫರೋಷ್

ಕಾರ್ಗಿಲ್ ಸಮರದಿಂದ ಚುನಾವಣಾ ಸಮರದತ್ತ

ಸಂಪಾದಕೀಯ

ಇಡೀ ದೇಶದ ಜನರು ಕಾರ್ಗಿಲ್ ಪ್ರದೇಶವನ್ನು ಆಕ್ರಮಣದಿಂದ ತೆರವು ಗೊಳಿಸಲು ತಮ್ಮ ಜೀವಗಳನ್ನು ಬಲಿಕೊಡುತ್ತಿರುವ ಭಾರತದ ಸೈನ್ಯಕ್ಕೆ ಬೆಂಬಲಿಸುವ ಸ್ಫೂರ್ತಿಯಲ್ಲಿ ವಿವಿಧ ಚಟುವಟಿಕೆಗಳಲ್ಲಿ ಲೋಕಸಭೆಯ ವಿಸರ್ಜನೆ ಹಾಗೂ ಚುನಾವಣೆಗಳ ಅನಿವಾರ್ಯತೆ ಜನರ ಮನಸ್ಸಿನಲ್ಲಿ ಪಕ್ಕಕ್ಕೆ ಸರಿದಿರುವಾಗ ಚುನಾವಣೆಗಳು ಘೋಷಿತವಾಗಿವೆ. ನಿರೀಕ್ಷೆಗಿಂತ ಸ್ವಲ್ಪ ಮೊದಲೇ ದಿನಾಂಕಗಳು ನಿಗದಿಗೊಳಿಸಲ್ಪಟ್ಟಿರುವುದು ಚುನಾವಣೆ ದಿಢೀರನೆ ಘೋಷಿತವಾದಂತೆ ಕಾಣಿಸುತ್ತದೆ. ಎಲ್ಲಾ ರಾಜಕೀಯ ಪಕ್ಷಗಳಲ್ಲಿ, ದೇಶದ ರಾಜಕೀಯ ಈಗಾಗಲೇ ಸಾಗುತ್ತಿದ್ದ ತುಮುಲಗಳು, ತಿಕ್ಕಾಟಗಳಿಗೆ ಇದ್ದಕ್ಕಿದ್ದಂತೆ ಒಂದು ವೇಗ ಪ್ರಾಪ್ತವಾಗಿದೆ.


ದೇಶದ ಗಡಿಯೊಳಗೆ ನುಗ್ಗಿದ ಪಾಕಿಸ್ತಾನಿ ಆಕ್ರಮಣಕೋರರನ್ನು ಸದೆಬಡಿಯುವ ಹಿಮ್ಮೆಟ್ಟಿಸುವ ಈ ರಭಸದ ಭರದಲ್ಲಿಯೇ ಚುನಾವಣೆಗಳು ನಡೆಯುತ್ತಿರುವುದು ಈ ಯುದ್ಧವನ್ನು ಚುನಾವಣೆಯ ಒಂದು ಪ್ರಮುಖ ಪ್ರಶ್ನೆಯಾಗಿಸಿದೆ. ಕಾರ್ಗಿಲ್‌ನಲ್ಲಿ ಪರದೇಶದ ಆಕ್ರಮಣಕಾರರನ್ನು ಹಿಮ್ಮೆಟ್ಟಿಸುವುದರಲ್ಲಿ ಭಾರತದ ಸೈನ್ಯ ಯಶಸ್ವಿಯಾದಂತೆ ಹಾಗೂ ಅದಕ್ಕೆ ದೇಶದ ಜನವೆಲ್ಲಾ ಒಗ್ಗಟ್ಟಿನಿಂದ ಬೆಂಬಲಿಸಿದಂತೆ ಈಗ ಮುಂದೆ ನಡೆಯುವ ಚುನಾವಣೆ ಸಮರದಲ್ಲಿ ದೇಶದ ಜನವೆಲ್ಲಾ ಒಗ್ಗಟ್ಟಾಗಿ ದೇಶದೊಳಗಿನ, ದೇಶ ವಿಭಜಕ- ದ್ವೇಷ ಹುಟ್ಟಿಹಾಕುವ ಶಕ್ತಿಗಳನ್ನು ಎದುರಿಸಬೇಕಾದ, ಸೋಲಿಸಬೇಕಾದ ಸವಾಲು ನಮ್ಮ ಮುಂದಿದೆ. ಆದ್ದರಿಂದ ಮುಂಬರುವ ಚುನಾವಣೆಗಳು ದೇಶದ ಐಕ್ಯತೆಯನ್ನು ಸ್ವಾತಂತ್ರ್ಯವನ್ನು ರಕ್ಷಿಸುವ ಸಮರವಾಗಲಿದೆ. ಅದಕ್ಕೆ ರಾಜಕೀಯ ಪಕ್ಷಗಳು ಮಾತ್ರವೇ ಅಲ್ಲ ಇಡೀ ದೇಶ ಅಣಿಯಾಗಬೇಕಿದೆ.

ಈ ಚುನಾವಣಾ ಸಮರದಲ್ಲಿ ಈಗ ಆಳುತ್ತಿರುವ ಸರ್ಕಾರ ಕಾರ್ಗಿಲ್ ಸಮರವನ್ನು ತನ್ನ ಸ್ವಾರ್ಥದ ರಾಜಕೀಯಕ್ಕೆ ಬಳಸಿಕೊಳ್ಳುವ ಎಲ್ಲಾ ಸನ್ನಾಹವನ್ನು ನಡೆಸುತ್ತಿದೆ. ಹೀಗಾಗಿ ಈ ಸಮರ ಚುನಾವಣೆಗಳ ಒಂದು ಪ್ರಮುಖ ವಿಷಯ. ದೇಶದ ಗಡಿಯೊಳಕ್ಕೆ ೧೦-೧೨ ಕಿ.ಮೀ ಒಳಗೆ ನುಗ್ಗುವವರೆಗೂ ನಿಷ್ಕ್ರಿಯವಾಗಿದ್ದು ಹಾಗೂ ಈ ಬಗ್ಗೆ ಪಾಕಿಸ್ತಾನ ಹಲವು ತಿಂಗಳುಗಳ ಮೊದಲೇ ಸಿದ್ಧತೆ ನಡೆಸುತ್ತಾ ಇದ್ದರೂ ಅದರ ಬಗ್ಗೆ ಮಾಹಿತಿ ಪಡೆಯದೆ ತನ್ನ ಅಜಾಗರೂಕತೆಯಿಂದ ಸಮರಕ್ಕೆ ದೂಡಿದ, ನೂರಾರು ಸೈನಿಕರ ಜೀವಹಾನಿಗೆ ಕಾರಣವಾದ ಸರ್ಕಾರ ನಮ್ಮ ಸೈನಿಕರ ತ್ಯಾಗ ಬಲಿದಾನವನ್ನು ತನ್ನ ವಿಜಯದವೆಂದು ಬಣ್ಣಿಸಿಕೊಳ್ಳುವ ತುತ್ತೂರಿ ಊದಲಿದೆ. ಇದರ ಬಗ್ಗೆ ಜನಕ್ಕೆ ಎಚ್ಚರಿಸಬೇಕಾಗಿದೆ.

ಒಟ್ಟಿನಲ್ಲಿ ದೊಡ್ಡ ಸವಾಲುಗಳು ದೇಶದ ಮುಂದಿರುವಾಗಲೇ ಇವೆಲ್ಲವನ್ನೂ ಕಡೆಗಣಿಸಿ ಕೇವಲ ತಮ್ಮ ಅಧಿಕಾರದ ದೃಷ್ಟಿಯಿಂದಲೇ ಎಲ್ಲವನ್ನೂ ಅಳೆಯುತ್ತಾ ಪಕ್ಷದಿಂದ ಪಕ್ಷಕ್ಕೆ ನೆಗೆಯುವ ಯೋಚನೆಯಲ್ಲಿದ್ದಾರೆ.

ಇನ್ನೇನು ಅಧಿಕಾರದ ಗದ್ದುಗೆ ಹಿಡಿಯದೇ ಬಿಡೆವು ಎನ್ನುವವರು- ಅವರೊಂದಿಗೆ ದಡ ಸೇರಬಹುದೇ ಎಂಬ ಲೆಕ್ಕಚಾರದ ಪ್ರಯತ್ನಗಳೀಗ ನೂರ್ಮಡಿಗೊಂಡಿವೆ. ಕೆಲವು 'ಸಂವೇದನಾ ಶೀಲರು' ಈ ಮೊದಲಿದ್ದ ಪಕ್ಷಗಳಿಂದ ಜಾರಿಕೊಂಡು, ಹೊಸ ಪಕ್ಷಗಳಲ್ಲಿ ಆಶ್ರಯ ಪಡೆಯತೊಡಗಿದ್ದಾರೆ. ಸಾಧ್ಯವಾಗದಿರುವ 'ಸಮಾನ ಮನಸ್ಕರು' ಇಡಿಯಾಗಿಯೇ ವಲಸೆ ಹೋಗುವ ತರಾತುರಿಯಲ್ಲಿದ್ದು ಅದಕ್ಕೆ ಹೊಂದಿಕೊಂಡು ಹೊಸ ರಾಗ ಹೊಸೆಯ ತೊಡಗಿದ್ದಾರೆ. ರಾಜ್ಯದ ರಾಜಕೀಯವೀಗ ಅತ್ಯಂತ ಕ್ಷಿಪ್ರ ಬದಲಾವಣೆಯತ್ತ ಸಾಗುತ್ತಿದೆ. ಈ ಬೆಳವಣಿಗೆಗಳು ರಾಜ್ಯದ ರಾಷ್ಟ್ರದ ರಾಜಕಾರಣದಲ್ಲಿ ಗಂಭೀರ ಸ್ವರೂಪದ ದೀರ್ಘಾವಧಿಯ ಪರಿಣಾಮಗಳನ್ನೇ ಬೀರಲಿವೆ. ಆದರೆ ಬಹುತೇಕ ಬಲಪಂಥೀಯ ಪಕ್ಷಗಳ ಅನೇಕ ನಾಯಕರುಗಳಿಗೆ ಇದರ ಅರಿವು ಇಲ್ಲವಾಗಿದೆ. ಅಧಿಕಾರಗಳಿಸಲು, ಗಳಿಸಿರುವ ಸಂಪತ್ತು ಉಳಿಸಿಕೊಳ್ಳುವ, ಹೊಸ ಸುಲಿಗೆಗೆ ಸಾಧ್ಯವಾಗುವ ಹುನ್ನಾರದಲ್ಲಿ ದೇಶದ, ಜನತೆಯ ಹಿತಾಸಕ್ತಿಗಳಿಗೆ ಕವಡೆಯ ಕಿಮ್ಮತ್ತೂ ನೀಡದಂತಹ ಹಂತಕ್ಕೆ ಸಾಗುತ್ತಿದ್ದಾರೆ. ಜೆ.ಹೆಚ್. ಪಟೇಲರ ರಾಜಕೀಯ ತಿಪ್ಪರಲಾಗಗಳು ಜನತಾದಳವನ್ನು ವಿಭಜನೆಯತ್ತ ದೂಡುತ್ತಿದೆ. ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳಿಗೆ, ಅವರ ಸರಕಾರಕ್ಕೆ ಆಧಾರ ಸ್ತಂಭವಾಗಿರುವವರಿಗೆ ನೆರವಾಗುವ ತಮ್ಮ ರಾಜಕೀಯ ಜೀವನದಲ್ಲಿ ಸಮಯಸಾಧಕತೆಯ ಉತ್ತುಂಗವನ್ನು ತಲುಪುವ ಮೂಲಕ ಅವರು ಅವರ ಜೊತೆಯವರು ಅಪಚಾರ ಎಸಗಿದ್ದಾರೆ. ಇಂತಹ ಸಮಯಸಾಧಕ ಶಕ್ತಿಗಳನ್ನು ಬಳಸಿ, ಕೋಮುವಾದಿಗಳು ಕರ್ನಾಟಕದಲ್ಲಿ ನೆಲೆಯೂರಲು ಹವಣಿಸುತ್ತಿದ್ದಾರೆ. ಕೋಮುವಾದಿಗಳ ನೆಲೆಯಾಗಿ ಕರ್ನಾಟಕ ಪರಿವರ್ತನೆಯಾಗದಂತೆ ನೋಡಿಕೊಳ್ಳುವುದು ಅತ್ಯಗತ್ಯ.

ಇಲ್ಲಿಯವರೆಗೂ ಜಾತ್ಯಾತೀತ ಧರ್ಮನಿರಪೇಕ್ಷ ಶಕ್ತಿಗಳ ನೆಲೆವನೆಯಾಗಿರುವ ಕರ್ನಾಟಕ ಧರ್ಮನಿರಪೇಕ್ಷವಾಗಿ ಉಳಿಯಬೇಕು. ಕರ್ನಾಟಕದಲ್ಲಿ ಈಗ ಕೆಲವು ವರ್ಷಗಳಲ್ಲಿ ಗಲಭೆ, ಗೊಂದಲ ವಿವಾದಗಳನ್ನು ಸೃಷ್ಟಿಸಿ ಜನರನ್ನು, ಪರಸ್ಪರ ವಿರುದ್ಧ ಧಾರ್ಮಿಕ ಗುಂಪುಗಳನ್ನು ವಿಭಜಿಸಿ ಸಾವು ನೋವುಗಳಿಗೆ ಕಾರಣವಾಗಿರುವ ಕೋಮುವಾದಿ ಶಕ್ತಿಗಳಿಗೆ ತಮ್ಮ ಈ ಜನದ್ವೇಷಿ, ಪ್ರಜಾಪ್ರಭುತ್ವ ವಿರೋಧಿ ಕುಟಿಲ ಕೆಲಸಗಳನ್ನು ಕರ್ನಾಟಕದಲ್ಲಿ ವಿಸ್ತರಿಸಲು ಅವಕಾಶ ಸಿಗದಂತೆ ಹಾಗೂ ಕರ್ನಾಟಕದಲ್ಲಿ ಪಡೆಯ ಬಯಸುವ ವಿಜಯವನ್ನು ಆಧಾರವಾಗಿಟ್ಟುಕೊಂಡು, ದೇಶದ ಶಿಕ್ಷಣ, ನ್ಯಾಯಾಂಗ, ಸೈನ್ಯ, ಇತಿಹಾಸ ಸಂಶೋಧನೆಗಳನ್ನು , ಇಡಿ ದೇಶವನ್ನು ಕೋಮುಮಯವಾಗಿಸಲು ಸಹಕಾರಿಯಾಗದಂತೆ ಕರ್ನಾಟಕದ ಜನತೆ ಎಚ್ಚರ ವಹಿಸಬೇಕು. ಕೋಮುದ್ವೇಷದ ಬೆಂಕಿ ಹಚ್ಚಲು ಕರ್ನಾಟಕ ಮೆಟ್ಟಿಲಾಗಬಾರದು. ಇದಕ್ಕಾಗಿ ಜಾತ್ಯಾತೀತ ಶಕ್ತಿಗಳೆಲ್ಲರೂ ಪಣತೊಡಬೇಕು.



ಕೃಪೆ: ಜನವಾಹಿನಿ

ನಿಮ್ಮ ಪ್ರಶ್ನೆ ? ನಮ್ಮ ಉತ್ತರ

1987 ರಲ್ಲಿ ಹಿಂದಿನ ಜನಸಂಘದವರು ಇದ್ದ ಜನತಾ ಪಕ್ಷದ ಸರ್ಕಾರಕ್ಕೆ ಸಿಪಿಐ(ಎಂ) ಪಕ್ಷ ಬೆಂಬಲನೀಡಿತ್ತು. ಮತ್ತು ಅಂದಿನಿಂದಲೂ ಕಾಂಗ್ರೆಸ್ ನ ವಿರುದ್ಧವಾಗಿ ರಾಜ್ಯ ಮಟ್ಟದಲ್ಲಿಯೂ, ರಾಷ್ಟ್ರಮಟ್ಟದಲ್ಲಿಯೂ ವಿವಿಧ ಸರ್ಕಾರಗಳಿಗೆ ಬಿಜೆಪಿಯ ಬೆಂಬಲವಿದ್ದರೂ ಸಿಪಿಐ(ಎಂ) ಕೂಡ ಬೆಂಬಲ ನೀಡಿದೆ. ಮತ್ತು ನಂತರ ಬಿಜೆಪಿ ಮತ್ತು ಕಾಂಗ್ರೆಸ್‌ಗಳ ವಿರುದ್ಧ ಮೂರನೇ ರಂಗವನ್ನು ರಚಿಸಲು ಸಿಪಿಐ(ಎಂ) ಮೂಂಚೂಣಿಯಲ್ಲಿರುವುದು ದೇಶಕ್ಕೆ ತಿಳಿದಿದೆ. ಆದರೆ ಜೂನ್ 3 ನೇ ವಾರದ ಐಕ್ಯರಂಗ ಸಂಚಿಕೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ಗಳಿಗೆ ಸಮಾನ ದೂರದಲ್ಲಿರವುದು ವಂಚನೆ ಎಂದು ತಿಳಿಸಿದ್ದೀರಿ ಏಕೆ ವಿವರಿಸಿ?

ಅರ್ಗೆ ಹರೀಶ್ ನಾಯಕ್
ನಾಗರಕಟ್ಟೆ, ದಾಂಡೇಲಿ

ಹೌದು, ನೀವು ಹೇಳುತ್ತಿರುವುದು ನಿಜ. 1977ರಲ್ಲಿ ಜನಸಂಘದವೂ ಸೇರಿದ್ದ ಜನತಾಪಕ್ಷಕ್ಕೆ ಸಿಪಿಐ(ಎಂ) ಹೊರಗಿನಿಂದ ಬೆಂಬಲ ನೀಡಿತ್ತು. ನಂತರವೂ ಕಾಂಗ್ರೆಸ್ ವಿರುದ್ಧ ಜಯಗಳಿಸಿದ್ದ ಪಕ್ಷಗಳ ಸರ್ಕಾರಗಳಿಗೆ ಸಿಪಿಐ(ಎಂ) ಹೊರಗಿನಿಂದ ಬೆಂಬಲ ನೀಡಿದೆ.

1947 ರಿಂದ 1977 ರವರೆಗೆ 30 ವರ್ಷಗಳ ಕಾಲ ಕಾಂಗ್ರೆಸ್ ನಿರಂತರವಾಗಿ ಕೇಂದ್ರದಲ್ಲಿ ಹಾಗೂ ಬಹುತೇಕ ರಾಜ್ಯಗಳಲ್ಲಿ ಆಡಳಿತ ನಡೆಸಿತ್ತು. ಯಾವುದೇ ಪಕ್ಷ ರಾಜ್ಯಗಳಲ್ಲಿ ಗೆದ್ದರೂ ಸಹಿಸದೆ ಪ್ರಜಾ ಪ್ರಭುತ್ವ ವಿರೋಧಿ, ಸಂವಿಧಾನ ವಿರೋಧಿ ಕ್ರಮಗಳಿಂದ ಆ ಸರ್ಕಾರಗಳನ್ನು ದಮನ ಮಾಡುತ್ತಿತ್ತು. ಇದು 1952 ರಲ್ಲಿ, 1957 ರಲ್ಲಿ, 1967ರಲ್ಲಿ ದೇಶಕ್ಕೆ ಅನುಭವವಾಗಿದೆ. ಈ ಸರ್ಕಾರಗಳನ್ನು ಉರುಳಿಸಲು, ಪಕ್ಷಗಳನ್ನು ಒಡೆಯಲು ಪ್ರಯತ್ನಿಸಿದೆ. ಈ ಸರ್ಕಾರಗಳ ವಿರುದ್ಧ ಚಳುವಳಿಗಳನ್ನು, ಗಲಭೆಗಳನ್ನು ಉಂಟುಮಾಡಲು ದೇಶದ ಜನಜೀವನವನ್ನು ಕದಡಲು ಪ್ರಯತ್ನಿಸಿದೆ. 1957 ರಲ್ಲಿ ಸಿಪಿಐ(ಎಂ)ನ ಪ್ರಪ್ರಥಮ ಸರ್ಕಾರವನ್ನು ಉರುಳಿಸಲು, ಶಾಸಕರಿಗೆ ಆಮಿಷ, ಪಕ್ಷಾಂತರ ಮುಂತಾದ ಮಾರ್ಗಗಳು ಫಲನೀಡದಿದ್ದಾಗ ಎಲ್ಲಾ ಧರ್ಮಗಳ ಧಾರ್ಮಿಕ ಮುಖಂಡರು, ಅಂಧಶ್ರದ್ಧೆ, ಮೂಲಭೂತವಾದವನ್ನು ಬೆಳೆಸುವ ಶಕ್ತಿಗಳೊಂದಿಗೆ ಸೇರಿ ಚಳುವಳಿ ನಡೆಸಿ ಅದೂ ಫಲ ನೀಡದಿದ್ದಾಗ 356ನೇ ವಿಧಿಯನ್ನು ಮೊದಲ ಬಾರಿಗೆ ಸಂವಿಧಾನ ವಿರೋಧಿಯಾಗಿ ಬಳಸಿ ಸರ್ಕಾರವನ್ನು ಕಿತ್ತೊಗೆಯಿತು. ನಂತರ ಪಂಜಾಬ್‌ನಲ್ಲಿ ಅಕಾಲಿದಳದ ಸರ್ಕಾರ ಬಂದಾಗ ಅದರ ಬಲವನ್ನುಡುಗಿಸಲು ಭಿಂದ್ರನ್‌ವಾಲೆಯಂತಹ ಭಯೋತ್ಪಾದಕರಿಗೆ ಬೆಂಬಲ ನೀಡಿತು. ಅದು ದೇಶಕ್ಕೆ ಎಂತಹ ವಿಷ ಫಲವನ್ನು ನೀಡಿತು ಎಂಬುದನ್ನು ದೇಶ ಹಲವು ದಶಕಗಳಿಂದ ಅನುಭವಿಸಿದೆ. 1967 ರಲ್ಲಿ ದೇಶದ ಎಂಟು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳು ಅಧಿಕಾರಕ್ಕೆ ಬಂದಾಗ ಉಳಿದೆಲ್ಲಾ ಸರ್ಕಾರಗಳನ್ನು ಭ್ರಷ್ಟ ಮಾರ್ಗಗಳಿಂದ ಪಕ್ಷಾಂತರವನ್ನು ಪ್ರಚೋದಿಸಿ ಆಯಾರಾಂ ಗಯಾರಾಂಗಳನ್ನು, ದೇಶದ ಪ್ರಜಾಸತ್ತೆಗೆ ಗಂಡಾಂತರಕಾರಿಯಾದ ವಿಧಾನಗಳನ್ನು ಸೃಷ್ಟಿಸಿತು. ಪ. ಬಂಗಾಳದಲ್ಲಿ ಅದು ಹಿಡಿಯದೆ ಇದ್ದ ದುರ್ಮಾರ್ಗವಿಲ್ಲ. ಪ.ಬಂಗಾಳ ಸರ್ಕಾರವನ್ನು 1969 ರಲ್ಲಿ, 1970ರಲ್ಲಿ, 1971ರಲ್ಲಿ, ಮೂರು ಬಾರಿ 356 ನೇ ವಿಧಿ ಬಳಸಿ ಕಿತ್ತುಹಾಕಿತ್ತು. ನಂತರ 1972ರಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಇಡೀ ರಾಜ್ಯಾದ್ಯಂತ ಗೂಂಡಾಪಡೆಗಳನ್ನು ಬಳಸಿ, ಕೇಂದ್ರ ಸರ್ಕಾರದ ಪೋಲೀಸು ಪಡೆಗಳನ್ನೂ ಅವರ ಬೆಂಬಲಕ್ಕೆ ನೀಡಿ ಮತಗಟ್ಟೆಗಳನ್ನು ವಶಪಡಿಸಿಕೊಳ್ಳುವುದು, ಮತಪೆಟ್ಟಿಗೆಗಳಿಗೆ ಮತಗಳನ್ನು ತುರುಕುವುದು ಮುಂತಾದ ಕ್ರಮಗಳಿಂದ ಸರ್ಕಾರ ಹಿಡಿಯಿತು. ನಂತರ 5 ವರ್ಷಗಳ ಕಾಲ ಪ.ಬಂಗಾಳದಲ್ಲಿ ಗೂಂಡಾ ರಾಜ್ಯ ಹತ್ತಾರು ಸಾವಿರಾರು ಮಂದಿ ರಾಜ್ಯವನ್ನೇ ಬಿಟ್ಟು ಹೊರರಾಜ್ಯಗಳಿಗೆ ಹೋಗಬೇಕಾಯಿತು. 20,000 ಕ್ಕೂ ಹೆಚ್ಚು ಜನರನ್ನು ಜೈಲಿಗೆ ಹಾಕಲಾಯಿತು. 1100 ಜನರನ್ನು ಕೊಂದರು.

ಇದು ಒಂದೆಡೆಯಾದರೆ ಇಡೀ ದೇಶದಲ್ಲಿ ಕಾಂಗ್ರೆಸ್ ದುರಾಡಳಿತದ ವಿರುದ್ಧ ಚಳುವಳಿ ಬೆಳೆದಾಗ, ಕೇಂದ್ರ ಸರ್ಕಾರಕ್ಕೆ ಕುತ್ತು ಬಂದು ತುರ್ತುಪರಿಸ್ಥಿತಿಯನ್ನು ಹೇರಿ ಪ್ರಜಾಸತ್ತೆಯ ಕತ್ತು ಹೊಸಕಿಹಾಕಿತು. ಈ ಎಲ್ಲಾ ಇತಿಹಾಸವನ್ನು ಇಲ್ಲಿ ವಿವರಿಸುವ ಉದ್ದೇಶವಿಷ್ಟೆ. ಅಂದು ಕಾಂಗ್ರೆಸ್ ತನ್ನ ಏಕಪಕ್ಷ ಸರ್ವಾಧಿಕಾರವನ್ನು ಹೇರಿ ದೇಶದ ಜನಗಳಿಗೆ ಒಂದು ದೊಡ್ಡ ಕುತ್ತಾಗಿತ್ತು ಎಂಬುದನ್ನು ನಿರೂಪಿಸಲು, ಇನ್ನು ಅವರ ಆರ್ಥಿಕ ನೀತಿಗಳು ಅಭಿವೃದ್ಧಿ, ಭ್ರಷ್ಟಾಚಾರ ಇವುಗಳ ವಿವರ ನೀಡಹೋಗುವುದಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ವಿರುದ್ಧ ಉಳಿದೆಲ್ಲಾ ಪಕ್ಷಗಳು ಪ್ರಜಾಸತ್ತೆಯನ್ನು ಉಳಿಸಲು ಒಂದಾಗುವ ಪರಿಸ್ಥಿತಿ ಉಂಟಾಯಿತು. 1977ರ ಜನತಾ ಪಕ್ಷದ ಅಧಿಕಾರಕ್ಕೆ ಸಿಪಿಐ(ಎಂ) ಬೆಂಬಲ ಇದೇ ಹಿನ್ನೆಲೆಯಲ್ಲಿ ಈ ಸರ್ಕಾರದಿಂದ ನಾವು ಬಯಸಿದ್ದು ತುರ್ತು ಪರಿಸ್ಥಿತಿಯ ಕಾಲದ ಪ್ರಜಾ ಪ್ರಬುತ್ವ ವಿರೋಧಿ ಸಂವಿಧಾನ ತಿದ್ದುಪಡಿ, ಇತರ ಕಾನೂನುಗಳ ಆಡಳಿತಾತ್ಮಕ ಕ್ರಮಗಳನ್ನು ಕಿತ್ತುಹಾಕಬೇಕೆಂಬುದು. ಅದನ್ನು ಈ ಸರ್ಕಾರ ಸಾಧಿಸಿತು. ಆದರೆ ಜನತಾ ಪಕ್ಷದೊಳಗೆ ಜನಸಂಘ, ಸಂಘಪರಿವಾರ ತನ್ನ ವಿಷದ ಹೆಡೆಯೆತ್ತಿದಾಗ ಆ ಸರ್ಕಾರ ಉರುಳಿತು. ಸಿಪಿಐ(ಎಂ) ಕೂಡ ಆ ಸಂದರ್ಭದಲ್ಲಿ ಆರೆಸ್ಸೆಸ್ ಅನ್ನು ಸರ್ಕಾರದಿಂದ ಹೊರಗಿಡುವ ಪ್ರಯತ್ನಕ್ಕೆ ಸಹಕರಿಸಿತು. ಅಂದಿನಿಂದ ಕಾಂಗ್ರೆಸ್ ವಿರೋಧಿ ಸರ್ಕಾರಗಳಿಗೆ ಸಿಪಿಐ(ಎಂ) ಬೆಂಬಲಿಸಿದೆ. ಆದರೆ ನಂತರ ಉದಿಸಿದ ಬಿಜೆಪಿ ಆ ಸರ್ಕಾರಗಳಲ್ಲಿ ಕೇಂದ್ರದಲ್ಲಿ ಹಾಗೂ ರಾಜ್ಯಗಳಲ್ಲಿ ಭಾಗವಹಿಸದಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ಆಗೆಲ್ಲಾ ಕಾಂಗ್ರೆಸ್‌ನ ಶಕ್ತಿಯನ್ನು ಕುಗ್ಗಿಸುವುದೇ ದೇಶದಲ್ಲಿ ಜನತೆಗೆ ಹಾಗೂ ಪ್ರಜಾಪ್ರಭುತ್ವಕ್ಕೆ ಉಳಿವಿನ ದಾರಿ.

ಇಂದು ಆ ಉದ್ದೇಶ ಬಹುತೇಕ ಸಫಲವಾಗಿದೆ. ಈಗ ಮತ್ತೆ ಕಾಂಗ್ರೆಸ್ ಕೇಂದ್ರದಲ್ಲಿ ಏಕ ಪಕ್ಷ ಸರ್ಕಾರವನ್ನಾಗಲೀ, ಎಲ್ಲಾ ರಾಜ್ಯಗಳಲ್ಲಿಯೂ ಆಳುವ ಕನಸನ್ನಾಗಲಿ ಬಿಡುವ ಪರಿಸ್ಥಿತಿ ಉಂಟಾಗಿದೆ.

ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ವಿರುದ್ಧ ಜನರ ಅತೃಪ್ತಿ ಮೂರು ರಾಜ್ಯಗಳಲ್ಲಿ ಎಡ ಶಕ್ತಿಗಳ ನೇತೃತ್ವದಲ್ಲಿ ಸಂಘಟಿತವಾಗಿದೆ. ಆಂಧ್ರ, ಕರ್ನಾಟಕ, ತಮಿಳುನಾಡು, ಪಂಜಾಬ್ ಮೊದಲಾದ ಕೆಲವು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳಲ್ಲಿ ಹಿಂದೆ ಸಂಘಟಿತವಾಗಿದೆ. ಆದರೆ ಅನೇಕ ರಾಜ್ಯಗಳಲ್ಲಿ ಕಾಂಗ್ರೆಸ್‌ನ ವಿರುದ್ಧ ಬೇರೆ ಯಾವುದೇ ಪಕ್ಷಗಳಿಲ್ಲದಾಗ ಬಿಜೆಪಿಯನ್ನೇ ಜನ ಗೆಲ್ಲಿಸುವ ಸ್ಥಿತಿ ಬಂದಿದೆ. ಬಿಜೆಪಿ ಈ ಸಂದರ್ಭವನ್ನು ಬಳಸಿ ತನ್ನ ಕೋಮುವಾದಿ ಮುಖವನ್ನು ಬಿಚ್ಚಿ ದೇಶಾದ್ಯಂತ ಕೋಮುದಂಗೆಗಳನ್ನು ಸೃಷ್ಟಿಸಿ, ಧಾರ್ಮಿಕ ಮತಾಂಧತೆಯ ಪ್ರಚಾರದ ಆಧಾರದ ಮೇಲೆ, ಎಲ್ಲ ಜನರ ಸಮಾನತೆಗೆ ಪ್ರಜಾಪ್ರಭುತ್ವ ವಿರೋಧಿಯಾದ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಂಬ ಭೇದಗಳನ್ನು ಸೃಷ್ಟಿಸುತ್ತಾ ಅಧಿಕಾರಕ್ಕೆ ಬಂದಿದೆ, ಅಧಿಕಾರಕ್ಕೆ ಬರಲು ಹವಣಿಸುತ್ತಿದೆ. ಅಧಿಕಾರದಲ್ಲಿದ್ದಾಗ ಆರ್ಥಿಕ ನೀತಿಗಳಲ್ಲಿ, ಭ್ರಷ್ಟಾಚಾರದಲ್ಲಿ ಕಾಂಗ್ರೆಸ್‌ಗಿಂತ ಯಾವುದೇ ರೀತಿಯಲ್ಲಿ ಭಿನ್ನವಿಲ್ಲ ಮಾತ್ರವಲ್ಲ ಅದಕ್ಕಿಂತ ಜನವಿರೋಧಿ ಎಂಬುದನ್ನು ಪ್ರಕಟಪಡಿಸಿದೆ. ಜೊತೆಗೆ ಸಂವಿಧಾನ ಪ್ರಜಾಪ್ರಭುತ್ವಗಳಿಗೆ ಕುತ್ತು ತರುವಂತೆ ಕಾರ್ಯವೆಸಗಿದೆ. ಸಂವಿಧಾನವನ್ನೇ ತಿರುಚಬಯಸುತ್ತಿದೆ.

ಹೀಗಾಗಿ ಅಂದು ಕಾಂಗ್ರೆಸ್ ದೇಶದ ಜನರ ಏಕಮೇವ ಬಲಾಢ್ಯ ಶತ್ರುವಾಗಿದ್ದಂತೆ ಇಂದು ಆರೆಸ್ಸೆಸ್ ನೇತೃತ್ವದ ಬಿಜೆಪಿ ಹಾಗೂ ಅದು ಪ್ರತಿಪಾದಿಸುವ ಕೋಮುವಾದ, ಫ್ಯಾಸಿಸ್ಟ್ ಕ್ರಮಗಳು ದೇಶದ ಜನರ ಪ್ರಧಾನ ಶತ್ರುವಾಗಿದೆ. ಇಂತಹ ಸಂದರ್ಭದಲ್ಲಿ ಪ್ರಜಾಪ್ರಭುತ್ವವನ್ನುಳಿಸಲು, ಕೋಮುವಾದ ದೇಶಕ್ಕೆ ತರಲಿರುವ ವಿಭಜನೆ, ವಿಘಟನೆ, ಸಾವು ನೋವುಗಳನ್ನು ತಪ್ಪಿಸಲು ಜಾತ್ಯಾತೀತ ಶಕ್ತಿಗಳೆಲ್ಲವೂ ಒಗ್ಗಟ್ಟಿನ ಪ್ರಯತ್ನ ಮಾಡಬೇಕಾದ ಪರಿಸ್ಥಿತಿ ಬಂದೊದಗಿದೆ. ಶತಾಯಗತಾಯ ಬಿಜೆಪಿ ಕೂಟ ಕೇಂದ್ರದಲ್ಲಿ ಮತ್ತೆ ಅಧಿಕಾರಕ್ಕೆ ಬರದಂತೆ ಮಾಡಬೇಕು ಎಂಬುದೇ ಇಂದಿನ ರಾಜಕೀಯ ಕರ್ತವ್ಯ. ಆದರೆ 1996 ರಲ್ಲಿ ಆದಂತೆ ಕಾಂಗ್ರೆಸ್ ಅನ್ನು ಹೊರತು ಪಡಿಸಿದ ಮೂರನೇ ರಂಗ ಅಧಿಕಾರಕ್ಕೆ ಬರುವ ಸಂದರ್ಭ ಇಂದು ಇಲ್ಲ. ಬಿಜೆಪಿ ನೇತೃತ್ವದ ಸರ್ಕಾರವನ್ನು ಹೊಂದೂಡಲು ಇಂದು ಇರುವ ಪರ್ಯಾಯ ಕಾಂಗ್ರೆಸ್ ನೇತೃತ್ವದ ಪರ್ಯಾಯವೇ. ಅಂತಹ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಸಮಾನ ದೂರವೆಂಬುದು ಹೆಸರಿಗೆ ಬಿಜೆಪಿ ವಿರೋಧವೆನಿಸಿದರೂ ಪರಿಣಾಮದಲ್ಲಿ ಬಿಜೆಪಿಯ ಅಧಿಕಾರಕ್ಕೆ ಅನುಕೂಲವಾಗುವ ಸ್ಥಿತಿ. ಮುಲಾಯಂ ಸಿಂಗ್ ಆಗಲೇ ಅದನ್ನು ಮಾಡಿ ತೋರಿಸಿದ್ದಾರೆ.

ಆದ್ದರಿಂದ ಇಂದಿನ ಕ್ಲಿಷ್ಟ ಪರಿಸ್ಥಿತಿಯಲ್ಲಿ ಸಿಪಿಐ(ಎಂ) ಕಾಂಗ್ರೆಸ್ ಪಕ್ಷದ ಆರ್ಥಿಕ ನೀತಿ ಧೋರಣೆಯನ್ನು ವಿರೋಧಿಸಿದರೂ ಅದು ಜಾತ್ಯಾತೀತ ಪಕ್ಷವೆಂಬುದನ್ನು ಮಾನ್ಯ ಮಾಡುತ್ತದೆ. ಆದ್ದರಿಂದ ಮೂರನೇ ಪರ್ಯಾಯಕ್ಕಾಗಿ ಪ್ರಯತ್ನ ನಡೆಸಿದರೂ ಇಂದಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಮಾತ್ರವೇ ಜಾತ್ಯಾತೀತ ಸರ್ಕಾರವನ್ನು ಪಡೆಯುವ ದಾರಿ ಎಂಬುದನ್ನು ಮನಗಂಡಿದೆ. ಆದ್ದರಿಂದ ಸಮಾನದೂರವೆಂಬ ಮಾತು ದೇಶದ ಜನರನ್ನು ಮತ್ತೆ ಕೋಮುವಾದಿಗಳ ಆಡಳಿತಕ್ಕೆ ಮರಳಿಸುವ, ನರಳಿಸುವ ದಾರಿ ಎಂದು ಪರಿಗಣಿಸುತ್ತದೆ.

ಸಿಪಿಐ(ಎಂ) ರಾಜ್ಯಸಮಿತಿ ಸಭೆ

ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸಭೆಯು ಜುಲೈ 30 ಮತ್ತು 31 ರಂದು ಬೆಂಗಳೂರಿನ ಪಕ್ಷದ ಕಛೇರಿಯಲ್ಲಿ ಜರುಗಲಿದೆ. ಕಾರ್ಯದರ್ಶಿ ಮಂಡಳಿ ಸಭೆ ಜುಲೈ 30 ರಂದು(ಶುಕ್ರವಾರ) ಬೆಳಿಗ್ಗೆ 10.30 ಕ್ಕೆ ನಡೆಯಲಿದ್ದು ರಾಜ್ಯ ಸಮಿತಿ ಸಭೆ ಮಧ್ಯಾಹ್ನ 2.30 ಕ್ಕೆ ಆರಂಭವಾಗುತ್ತದೆ ಎಂದು ತಿಳಿಸಲಾಗಿದೆ.

ಜಾತ್ಯಾತೀತ ತತ್ವದ ಬೆನ್ನಿಗೆ ಚೂರಿ ಹಾಕಿದ ಜೆ.ಹೆಚ್.ಪಟೇಲ್

ಲೋಕಸಭೆಯಲ್ಲಿ ವಿಶ್ವಾಸವನ್ನು ಬಿಜೆಪಿ ಕೂಟದ ಸರ್ಕಾರ ಕಳೆದುಕೊಳ್ಳುವ ಸಂದರ್ಭದಲ್ಲಿ ಒಬ್ಬೊಬ್ಬ ಲೋಕಸಭಾ ಸದಸ್ಯನ ಮತವನ್ನು ಸೆಳೆದುಕೊಳ್ಳಲು ಕೋಮುವಾದಿ ಶಕ್ತಿಗಳು ಎಲ್ಲಾ ಬಗೆಯ ಕುತಂತ್ರಗಳನ್ನು ಪ್ರಯೋಗಿಸುತ್ತಿದ್ದ ಹಿನ್ನೆಲೆಯಲ್ಲಿ 'ಐಕ್ಯರಂಗ' "ಸಾಗಿದೆ ಸಮರ, ಹೇಳಿ ನೀವು ಯಾರ ಕಡೆ? ಎನ್ನುವ ಪ್ರಶ್ನೆ ಇಂದು ದೇಶದೆಲ್ಲಾ ವ್ಯಕ್ತಿ, ಶಕ್ತಿ, ಪಕ್ಷಗಳ ಮುಂದೆ ಮತ್ತೆ ಮತ್ತೆ ಎದುರಾಗುತ್ತಿದೆ" ಎಂದು ಬರೆದಿತ್ತು. ದೇಶದಲ್ಲಿ ಸಾಗಿರುವ ರಾಜಕೀಯ ಸಮರ ವಿವಿಧ ರಾಜಕೀಯ ಪಕ್ಷ, ವ್ಯಕ್ತಿ, ಶಕ್ತಿಗಳನ್ನು ರಾಷ್ಟ್ರಹಿತವೆಂಬ ಅಗ್ನಿಪರೀಕ್ಷೆಗೆ ಒಡ್ಡುತ್ತಿದೆ. ಕೋಮುವಾದ ಮತ್ತು ಜಾತ್ಯಾತೀತತೆ(ಧರ್ಮನಿರಪೇಕ್ಷತೆ ಎನ್ನುವುದೇ ಸರಿಯಾದ ಪದ) ನಡುವೆ ಸಾಗಿದೆ ಸಮರ. ಸಮರದಲ್ಲಿ ಇತಿಹಾಸ ಒಡ್ಡಿರುವ ಸವಾಲಿದು - ಹೇಳಿ ನೀವು ಯಾರ ಕಡೆ? ಒಂದೊಂದು ಅಗ್ನಿಪರೀಕ್ಷೆಯಲ್ಲಿಯೂ ಕೆಲವು ಪಕ್ಷಗಳು, ವ್ಯಕ್ತಿಗಳು ಕಳಚಿ ಬೀಳುತ್ತಿದ್ದಾರೆ. ಅಧಿಕಾರ, ಹಣ, ದ್ವೇಷ, ಪಕ್ಷ, ಪ್ರದೇಶಗಳ ಹಿತದ ನೆಪವೊಡ್ಡಿ ದೇಶದ ಹಿತವನ್ನು ಮಾರುತ್ತಿದ್ದಾರೆ. ಈ ಮಾರಾಟದಲ್ಲಿ ಈಗ ಜೆ.ಹೆಚ್.ಪಟೇಲರ ಸರದಿ ಬಂದಿದೆ. ಈ ಸರಕು ಮೊನ್ನೆ ಮಾರಾಟವಾಗಿದೆ. ಹಲವು ತಿಂಗಳುಗಳಿಂದಲೂ ತೂಗುಯ್ಯಾಲೆಯಲ್ಲಿದ್ದು, ಮಾರಾಟಕ್ಕೆ ಒಡ್ಡಿಕೊಳ್ಳಲೋ ಬೇಡವೋ ಎಂದು ಚಿಂತೆ ಮಾಡಿ ಕೊನೆಗೆ ತಮ್ಮನ್ನು ಮಾರಿಕೊಂಡೇ ಬಿಟ್ಟಿದ್ದಾರೆ.

ಜೆ.ಹೆಚ್.ಪಟೇಲರ ಡೊಂಬರಾಟದ ಬಗ್ಗೆ 'ಐಕ್ಯರಂಗ' ಬರೆದಿರುವಂತೆ "ಮಹಾ ಸಮಾಜವಾದಿ, ಬುದ್ಧಿವಂತ ಎಂದೆಲ್ಲಾ ಕೀರ್ತಿಪಡೆದು ಅದರ ಒಂದೂ ಅಂಶವನ್ನು ತಮ್ಮ ಜೀವನದಲ್ಲಿ ಹಾರಿಗೆ ತರದ ಪಟೇಲರು ಕರ್ನಾಟಕದ ಮುಖ್ಯಮಂತ್ರಿಯಾಗಿ ಕರ್ನಾಟಕದ ಜನತೆಗೆ ಮಾಡುತ್ತಿರುವ ದ್ರೋಹದ ತುತ್ತತುದಿಗೆ ಅವರು ಈ ಮೂಲಕ ಏರಿದ್ದಾರೆ". ಈ ಮಾತು ಜೆ.ಹೆಚ್.ಪಟೇಲರು ಲೋಕಶಕ್ತಿ, ಸಮತಾ ಪಕ್ಷಗಳೊಡನೆ ಬಿಜೆಪಿ ಕೂಟವನ್ನು ಸೇರುವ ತೀರ್ಮಾನದ ಬಗ್ಗೆ ಮತ್ತಷ್ಟು ನಿಜ. ಈ ಜೆ.ಹೆಚ್.ಪಟೇಲರು ಹಾಗೂ ಪಟೇಲರ ಮೇಲೆ ಈ ಒತ್ತಾಯವನ್ನು ತಂದಿರುವ ಅವರ ಸಹೋದ್ಯೋಗಿಗಳು - ಬೈರೇಗೌಡ, ಬಚ್ಚೇಗೌಡ, ಎಂ.ಎಸ್.ಪಾಟೀಲ್, ಎ.ಬಿ.ಪಾಟೀಲ್ ಮೊದಲಾದವರು ರಾಜ್ಯದ ಹಿತಕ್ಕೆ ಹಾಗೂ ದೇಶದ ಹಿತಕ್ಕೆ ದೊಡ್ಡ ವಿದ್ರೋಹವನ್ನೆಸಗಿದ್ದಾರೆ.

1977 ರಿಂದಲೂ ಜನತಾಪಕ್ಷ ಹಾಗೂ ಜನತಾದಳಕ್ಕೆ ಮತ ನೀಡಿದ, 1983, 1985, 1994 ರಲ್ಲಿ ರಾಜ್ಯದಲ್ಲಿ ಅವರನ್ನು ಅಧಿಕಾರಕ್ಕೆ ತಂದ ಕರ್ನಾಟಕದ ಮತದಾರರು ಕಾಂಗ್ರೆಸ್ ವಿರುದ್ಧ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಲು ಆಗಿನಿಂದಲೂ ಅಸ್ತಿತ್ವದಲ್ಲಿದ್ದ ಭಾರತೀಯ ಜನತಾ ಪಕ್ಷವನ್ನು ಬಿಟ್ಟು ಜನತಾಪಕ್ಷ/ಜನತಾದಳವನ್ನು ಆರಿಸಿಕೊಂಡಿದ್ದು ಜನತೆಗೆ ಕಾಂಗ್ರೆಸ್ಸನ್ನು ಸೋಲಿಸುವುದು ಮುಖ್ಯವಾಗಿರುವಾಗಲೇ ಕೋಮುವಾದಿ ಶಕ್ತಿಯನ್ನು ಬೆಳೆಸುವುದು ಬೇಕಾಗಿರಲಿಲ್ಲ ಎಂಬ ಕಾರಣಕ್ಕಾಗಿಯೇ. ಮತದಾರರ ಈ ಮೂಲ ಆಶಯವೇ ಜನತಾದಳದ ಅಸ್ತಿತ್ವಕ್ಕೆ, ಬೆಳವಣಿಗೆಗೆ ಕಾರಣ. ಈಗ ಜೆ.ಹೆಚ್.ಪಟೇಲರು, ಅವರ ಬಣ ಮತದಾರರ ಈ ಆಶಯಕ್ಕೆ ದ್ರೋಹವೆಸಗಿದ್ದಾರೆ.

1983 ರಲ್ಲಿ, 1985 ರಲ್ಲಿ ಅಧಿಕಾರಕ್ಕೆ ಬಂದಾಗ ಜನರ ಪ್ರೀತಿಯನ್ನು ಗಳಿಸಿಕೊಳ್ಳಲು ಈ ಪಕ್ಷದ ಮಂತ್ರಿವರ್ಯರುಗಳೆಲ್ಲರೂ ತೋರಿದ್ದ ಆತುರ, ಅದಕ್ಕಾಗಿ ಸಂಸುಮಾರು ಪ್ರತಿ ಮಂತ್ರಿಯೂ ಪ.ಬಂಗಾಳದ ಯಾತ್ರೆ ಮಾಡಿ ತಮ್ಮ ತಮ್ಮ ಮಂತ್ರಿ ಶಾಖೆಯಲ್ಲಿ ಎಡರಂಗ ಸರ್ಕಾರ ಮಾಡಿದ ಸಾಧನೆಗಳನ್ನು ಅಧ್ಯಯನ ಮಾಡಿ ಅನುಸರಿಸಲು ಪ್ರಯತ್ನಿಸಿತು. ನಜೀರ್ ಸಾಬರ ಕುಡಿಯುವ ನೀರು, ಪಂಚಾಯತ್ ರಾಜ್, ಶಿಕ್ಷಣ ಕ್ಷೇತ್ರದಲ್ಲಿ ಮಕ್ಕಳಿಗೆ ಉಚಿತ ಯೂನಿಫಾರಂ, ಪಠ್ಯ ಪುಸ್ತಕಗಳು, ವಿಧವಾ ವೇತನ ಇಂತಹವು ಅಲ್ಲಿಂದ ಆಮದಾದ ನೀತಿಗಳು. ಈ ನೀತಿಗಳ ಅನುಸರಣೆಯಿಂದ ಜನತಾದಳವು ಮೂಲಭೂತ ಆರ್ಥಿಕ ನೀತಿಗಳು ಕಾಂಗ್ರೆಸ್‌ಗಿಂತ ಭಿನ್ನವಲ್ಲದಿದ್ದರೂ ಜನರ ಪ್ರೀತಿಯನ್ನು ಗಳಿಸಿಕೊಳ್ಳಲು ಸಹಾಯ ಮಾಡಿತು. ಜನತಾದಳಕ್ಕೆ ಜನರಲ್ಲಿ ಒಂದು ಸ್ಥಾನಮಾನ, ಹಳ್ಳಿಗಳವರೆಗೂ ಸಂಘಟನೆಯನ್ನು ನೀಡಿತು.

ಆದರೆ 1994 ರಲ್ಲಿ ಅಧಿಕಾರಕ್ಕೆ ಬಂದ ಮೇಲೆ ಪೂರ್ಣವಾಗಿ ಕೇಂದ್ರದ ಹೊಸ ಆರ್ಥಿಕ ನೀತಿಗಳಿಗೆ ಮಣಿದು ಬೆಂಗಳೂರನ್ನು ಅಂತರರಾಷ್ಟ್ರೀಯ ಬಂಡವಾಳಕ್ಕೆ ಆಕರ್ಷಣೀಯವಾಗಿ ಮಾಡಲು, ಜನರಿಗೆ ಪರಿಹಾರ ನೀಡಬಹುದಾದ ಕಾರ್ಯಕ್ರಮಗಳನ್ನು ಆರಂಭಿಸಲಿಲ್ಲ ಮತ್ತು ರೈತ ಹಾಗೂ ಕಾರ್ಮಿಕರ ಮೇಲೆ ಗುಂಡೇಟು ಹಾಕುವ ನೀತಿಯನ್ನು ಅನುಸರಿಸಿತು. ಇವುಗಳ ಪರಿಣಾಮವಾಗಿ ಜನರ ಪ್ರೀತಿಯನ್ನು ಕಳೆದುಕೊಳ್ಳಲಾರಂಭಿಸಿತು. ಜೊತೆಗೆ ಕಾಂಗ್ರೆಸ್ ಬಿಜೆಪಿ ಪಕ್ಷಗಳು ನಿರಂತರವಾಗಿ ಸರ್ಕಾರದ ಮೇಲೆ ಉತ್ತರ ಕರ್ನಾಟಕದ ನಿರ್ಲಕ್ಷ್ಯ, ನೀರಾವರಿ, ಭ್ರಷ್ಟಾಚಾರ ಮೊದಲಾದ ಧಾಳಿ ನಡೆಸುತ್ತಿದ್ದಾಗ ಅದನ್ನು ಕ್ರಿಯಾಶೀಲವಾಗಿ ಎದುರಿಸಿ ಜನರನ್ನು ಸೆಳೆದುಕೊಳ್ಳಲು ಪ್ರಯತ್ನಿಸದೆ ಪಾಳೆಯಗಾರಿ ಅಹಂಕಾರದಿಂದ ವರ್ತಿಸಿದ್ದು ಕೂಡ ಈ ಪರಿಸ್ಥಿತಿಗೆ ಕಾರಣವಾಯಿತು. ಜನರ ಪ್ರೀತಿಯನ್ನು ಕಳೆದುಕೊಂಡ ಸ್ಥಿತಿಯಲ್ಲಿ ಯಾವುದೇ ನೀತಿ, ತತ್ವಗಳ ಆಕರ್ಷಣೆಯಿಲ್ಲದ ಶಾಸಕರು, ಮಂತ್ರಿಗಳು ಇಂದು ಕೇವಲ ತಮ್ಮ ಹಿತವನ್ನಷ್ಟೇ ಕಾಣುತ್ತಿದ್ದಾರೆ. ಈ ಪರಿಸ್ಥಿತಿಯೇ ಜನತಾದಳದ ನಾಯಕರೊಳಗೆ ಗುಂಪುಗಾರಿಕೆ, ಜಗಳಗಳಿಗೆ ಅದರಿಂದ ಜನರಲ್ಲಿ ಮತ್ತಷ್ಟು ಅಸಹ್ಯ ಹುಟ್ಟಲು ಕಾರಣವಾಯಿತು.

ಜೊತೆಗೆ ಉತ್ತರ ಕರ್ನಾಟಕದ ಪಾಳೆಯಗಾರಿ ದಬ್ಬಾಳಿಕೆಯ ಪ್ರದೇಶಗಳಲ್ಲಿ ಪಾಳೆಯಗಾರಿ ಧಣಿಗಳ ಆತಂಕವನ್ನು, ಪ್ರದೇಶದ ಜನರ ಸಾಮಾಜಿಕ, ರಾಜಕೀಯ ಪ್ರಜ್ಞೆಯ ಹಿಂದುಳಿಕೆಯನ್ನು ಬಳಸಿಕೊಂಡು, ವೀರಶೈವರನ್ನು ಸೆಳೆಯುವ ಮತಾಂಧ ಚಳುವಳಿಯನ್ನು ಬೆಳೆಸಿ ಬಿಜೆಪಿ ಬೆಳೆಯಲಾರಂಭಿಸಿದ್ದು ಅಲ್ಲಿಯ ಜನತಾದಳದ ಧಣಿಗಳಲ್ಲಿ ಆಧೈರ್ಯವನ್ನು ಮೂಡಿಸಿತು. ಇಂತಹ ಸಂದರ್ಭದಲ್ಲಿ ಬಿಜೆಪಿಯ ಈ ಮತಾಂಧ ಚಟುವಟಿಕೆಗಳ ಫಲವಾಗಿ ಹಾಗೂ ಅದನ್ನು ಜನತಾದಳ, ಕಾಂಗ್ರೆಸ್ ಪಕ್ಷಗಳು ಮುಖಾಮುಖಿಯಾಗಿ ಎದುರಿಸದ ಪರಿಣಾಮವಾಗಿ, ಅಲ್ಲಿನ ಲಿಂಗಾಯತ ಪಾಳೆಯಗಾರಿ ಭೂಮಾಲಕರು ಬಿಜೆಪಿಯತ್ತ ಸೆಳೆಯಲ್ಪಡುತ್ತಿದ್ದಾರೆ. ಎಲ್ಲಾ ರೀತಿಯ ಅತ್ಯಂತ ಪ್ರತಿಗಾಮಿ ಶಕ್ತಿಗಳ ತವರು ಮನೆಯಾಗಿ ಬಿಜೆಪಿ ಪರಿಣಮಿಸಿರುವ ಸಂದರ್ಭದಲ್ಲಿ ಜನತಾದಳದ ಅದೇ ವರ್ಗದ ರಾಜಕಾರಣಿಗಳೂ ಬಿಜೆಪಿ ನೆರವಿನೊಂದಿಗೆ ತಮ್ಮ ರಾಜಕೀಯ ಸ್ವಾರ್ಥವನ್ನೂ ಸಾಧಿಸಿಕೊಳ್ಳುವ ತರಾತುರಿಯಲ್ಲಿದ್ದಾರೆ.


ಅದೇ ಸಮಯದಲ್ಲಿ ಬಿಜೆಪಿಯ ಜೊತೆಗಾರ ಲೋಕಶಕ್ತಿ ಹಾಗೂ ಸಮತಾ ಪಕ್ಷಗಳಿಗೆ ತಮ್ಮ ಬಲವನ್ನು ಹೇಗಾದರೂ ಮಾಡಿ ಹೆಚ್ಚಿಸಿಕೊಳ್ಳದಿದ್ದರೆ ಬಿಜೆಪಿ ತಮ್ಮನ್ನು ಎಲ್ಲಿರಿಸುತ್ತದೆಂದು ಗೊತ್ತಿದೆ. ಇವರ ಈ ಆತಂಕ, ಜನತಾದಳ ನಾಯಕರ ತರಾತುರಿಗಳು ಇಂದು ಜೊತೆಗೂಡಿ ಜನತಾದಳವನ್ನೊಡೆಯಲು ಕಾರಣವಾಗಿದೆ. ಆದರೆ ಬಿಜೆಪಿಗೆ ಇದರಿಂದ ಸಂತಸವೇನೂ ಆಗಿಲ್ಲ. ರಾಜ್ಯದಲ್ಲಿ ತಮಗೇ ಏಕಪಕ್ಷಾಧಿಕಾರ ಸಿಗುವ ಅವಕಾಶವೆಲ್ಲಿ ಇದರಿಂದ ತಪ್ಪಿ ಹೋಗುವುದೋ ಎಂಬ ಆತಂಕ, ಲೋಕಶಕ್ತಿ, ಸಮತಾ ಪಕ್ಷಗಳು ಹೆಚ್ಚು ಬಲಯುತವಾದರೆ ಮೈತ್ರಿ ಕೂಟದ ಉಳಿವಿಗೆ, ತನ್ನ ದುಷ್ಟಯೋಜನೆಗಳು ನಿರಾತಂಕವಾಗಿ ಕಾರ್ಯಗತ ಮಾಡಲು ಸಾಧ್ಯವೇ? ಎಂಬ ಚಿಂತೆ ಅವರನ್ನು ಕಾಡಿಸುತ್ತಿದೆ. ಈ ಪ್ರಸಂಗ ಬಿಜೆಪಿ ಮೈತ್ರಿಕೂಟದಲ್ಲಿ ಮೇಲುನೋಟಕ್ಕೆ ಕಾಣುವಂತೆ ಎಲ್ಲವೂ ಸರಿಯಾಗಿಲ್ಲ ಎನ್ನುವುದು ಹೊರ ಬಿದ್ದಿದೆ.

ಜೊತೆಗೆ ಜನರ ತೀವ್ರ ದ್ವೇಷವನ್ನು ಗಳಿಸಿದ ಪ್ರತಿಗಾಮಿ ಪಾಳೆಯಗಾರಿ ಭೂ ಮಾಲಕ ಶಕ್ತಿಗಳೆಲ್ಲಾ ಒಂದೇ ಕೂಟಕ್ಕೆ ಸೇರಿದರೆ ಅವರಿಂದ ಶೋಷಣೆ, ಪೀಡನೆಗೆ ಒಳಗಾಗಿರುವ ಕೆಳಜಾತಿಗಳ ದುಡಿಯುವ ಜನಕ್ಕೆ ಆತಂಕವಾಗುವುದು, ಅದರಿಂದ ಅವರು ಬಿಜೆಪಿ ಕೂಟದ ವಿರುದ್ಧ ಶಕ್ತಿಗೆ ಒಲಿಯುವುದು ಕೂಡ ಸಹಜ. ಇಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿ ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸಲು ನಿರಂತರವಾಗಿ ಶ್ರಮಿಸಬೇಕಾಗಿದೆ.

- ಜಿ.ಎನ್.ನಾಗರಾಜ್

13 ನೇ ಲೋಕಸಭೆಯತ್ತ

ಚುನಾವಣೆಗಳು- ಸೆಪ್ಟೆಂಬರ್ ನಾಲ್ಕರಿಂದ ಅಕ್ಟೋಬರ್ 1 ರವರೆಗೆ




ಒಂದೂವರೆ ವರ್ಷಗಳೊಳಗೆ ದೇಶ ಮತ್ತೆ ಸಾರ್ವತ್ರಿಕ ಚುನಾವಣೆಗೆ ಸಜ್ಜಾಗುತ್ತಿದೆ. ಬಿಜೆಪಿ ನೇತೃತ್ವದ ಸರ್ಕಾರದ ಶೋಚನೀಯ ಕುಸಿತದ ಹಿನ್ನೆಲೆಯಲ್ಲಿ ನಡೆಯುತ್ತಿರುವ ಈ ಚುನಾವಣೆಗಳ ದಿನಾಂಕಗಳ ಘೋಷಣೆಯನ್ನು ಚುನಾವಣಾ ಆಯೋಗ ಜುಲೈ 11 ರಂದು ಪ್ರಕಟಿಸಿದೆ. ಐದು ಹಂತಗಳಲ್ಲಿ ಇದು ನಡೆಯಲಿದೆ. ಜೊತೆಗೆ ಕರ್ನಾಟಕ, ಆಂಧ್ರಪ್ರದೇಶ ಮತ್ತು ಸಿಕ್ಕಿಂ ರಾಜ್ಯಗಳ ವಿಧಾನಸಭೆಗಳಿಗೂ ಚುನಾವಣೆಗಳು ನಡೆಯಲಿವೆ. ಮಹಾರಾಷ್ಟ್ರ ಆಳುವ ಪಕ್ಷಗಳೂ ಈಗ ಆ ರಾಜ್ಯದಲ್ಲೂ ಏಕ ಕಾಲಕ್ಕೆ ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳು ನಡೆಯಬೇಕು ಎಂದಿವೆ.

ಚುನಾವಣಾ ದಿನಾಂಕಗಳು ಹೀಗಿವೆ:
ಸೆಪ್ಟೆಂಬರ್ 4- 146 ಸ್ಥಾನಗಳು
ಸೆಪ್ಟೆಂಬರ್ 11- 124 ಸ್ಥಾನಗಳು
ಸೆಪ್ಟೆಂಬರ್ 17- 79 ಸ್ಥಾನಗಳು
ಸೆಪ್ಟೆಂಬರ್ 24-72 ಸ್ಥಾನಗಳು
ಅಕ್ಟೋಬರ್ 1- 122 ಸ್ಥಾನಗಳು
ರಾಜ್ಯವಾರು ವಿವರ ಹೀಗಿದೆ:

ಕರ್ನಾಟಕ - ಸೆಪ್ಟೆಂಬರ್ 4,11
ಕೇರಳ - ಸೆಪ್ಟೆಂಬರ್ 4
ಲಕ್ಷದ್ವೀಪ - ಸೆಪ್ಟೆಂಬರ್ 4
ತಮಿಳುನಾಡು- ಸೆಪ್ಟೆಂಬರ್ 4,11
ಆಂಧ್ರಪ್ರದೇಶ - ಸೆಪ್ಟೆಂಬರ್ 4,11,17
ಅಂಡಮಾನ್-ನಿಕೋಬಾರ್- ಸೆಪ್ಟೆಂಬರ್ 4
ಮಹಾರಾಷ್ಟ್ರ- ಸೆಪ್ಟೆಂಬರ್ 4,11
ಗುಜರಾತ - ಸೆಪ್ಟೆಂಬರ್ 4
ರಾಜಸ್ತಾನ್- ಸೆಪ್ಟೆಂಬರ್ 4,11
ಪಂಜಾಬ್- ಸೆಪ್ಟೆಂಬರ್ 4
ಹರಿಯಾಣ -ಸೆಪ್ಟೆಂಬರ್ 4
ದಿಲ್ಲಿ - ಸೆಪ್ಟೆಂಬರ್ 4
ಜಮ್ಮು-ಕಾಶ್ಮೀರ- ಸೆಪ್ಟೆಂಬರ್ 4,11
ಮಧ್ಯ ಪ್ರದೇಶ -ಸೆಪ್ಟೆಂಬರ್ 11,17,24
ಉತ್ತರ ಪ್ರದೇಶ - ಸೆಪ್ಟೆಂಬರ್ 17, 24, ಅಕ್ಟೋಬರ್ 1
ಬಿಹಾರ -ಸೆಪ್ಟೆಂಬರ್ 17,24, ಅಕ್ಟೋಬರ್ 1
ಒರಿಸ್ಸಾ -ಸೆಪ್ಟೆಂಬರ್ 24, ಅಕ್ಟೋಬರ್ 1
ಮಿಜೋರಾಂ- ಸೆಪ್ಟೆಂಬರ್ 24
ನಾಗಲ್ಯಾಂಡ್- ಸೆಪ್ಟೆಂಬರ್ 24
ಮಣಿಪುರ - ಸೆಪ್ಟೆಂಬರ್ 24, ಅಕ್ಟೋಬರ್ 1
ಪಶ್ಚಿಮ ಬಂಗಾಳ -ಅಕ್ಟೋಬರ್ 1
ಸಿಕ್ಕಿಂ - ಅಕ್ಟೋಬರ್ 1
ತ್ರಿಪುರ - ಅಕ್ಟೋಬರ್ 1
ಮೇಘಾಲಯ - ಅಕ್ಟೋಬರ್ 1
ಅಸ್ಸಾಂ - ಅಕ್ಟೋಬರ್ 1
ಅರುಣಾಚಲ ಪ್ರದೇಶ - ಅಕ್ಟೋಬರ್ 1

ಅಕ್ಟೋಬರ್ 5 ಹಾಗೂ 6 ರಂದು ದೇಶಾದ್ಯಂತ ಮತ ಏಣಿಕೆ ನಡೆಯುತ್ತದೆ.

ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳಲ್ಲಿ ಪೂರ್ವ ಭಾಗದ 15 ರಲ್ಲಿ ಅಂದರೆ ಬೀದರ್, ಕಲ್ಬುರ್ಗಿ , ಬಿಜಾಪುರ, ಬಾಗಲಕೋಟೆ, ಕೊಪ್ಪಳ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಕನಕಪುರ, ಬೆಂಗಳೂರು ಉತ್ತರ ಹಾಗೂ ದಕ್ಷಿಣ ಇಲ್ಲಿ ಸೆಪ್ಟೆಂಬರ್ 4 ರಂದು ಮತದಾನ ನಡೆಯಲಿದೆ. ಪಶ್ಚಿಮ ಭಾಗದ 13 ಲೋಕಸಭಾ ಕ್ಷೇತ್ರಗಳಲ್ಲಿ ಮತ್ತು ಸಂಬಂಧ ಪಟ್ಟ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ಸೆಪ್ಟೆಂಬರ್ 11 ರಂದು ನಡೆಯಲಿದೆ. ಈ ಲೋಕ ಸಭಾ ಕ್ಷೇತ್ರಗಳೆಂದರೆ ಬೆಳಗಾವಿ, ಚಿಕ್ಕೋಡಿ, ಧಾರವಾಡ ಉತ್ತರ, ಧಾರವಾಡ ದಕ್ಷಿಣ ಕೆನರಾ, ಉಡುಪಿ, ಮಂಗಳೂರು, ಶಿವಮೊಗ್ಗ , ಚಿಕ್ಕಮಗಳೂರು , ಹಾಸನ , ಮಂಡ್ಯ, ಮೈಸೂರು ಮತ್ತು ಚಾಮರಾಜನಗರ.



ಭಾರತದ ದುಡಿಯುವ ಜನರ ಅಪ್ರತಿಮ ನೇತಾರನ ಐದು ದಶಕಗಳಿಗೂ ಮೀರಿದ 'ಮಾಸದ ನೆನಪು'ಗಳಲ್ಲಿ ಇದುವರೆಗೆ ಅವರು ಬ್ರಿಟನ್ನಿನಿಂದ ಮರಳಿ ಬ್ಯಾರಿಸ್ಟರನಾಗಿ ಹೆಸರು, ಹಣ ಸಂಪಾದಿಸುವ ಬದಲು ಕಮ್ಯುನಿಸ್ಟ್ ಪಕ್ಷ ಸೇರಿ, ಕಾರ್ಮಿಕ ಸಂಘಟನೆಗಳಲ್ಲಿ ದುಡಿಯಲಾರಂಭಿಸಿ, ಚುನಾವಣಾ ರಾಜಕೀಯ ಪ್ರವೇಶಿಸಿ ಶಾಸಕನಾದ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ಓದಿದ್ದೀರಿ. ಮುಂದೆ ಓದಿ.....

ಅನ್ನದಾತರ ಚಳುವಳಿಗೆ ದಾರಿದೀಪ

ತೇಭಾಗ ಚಳವಳಿ ಸರಿಯಾದ ದಿಕ್ಕಿನಲ್ಲೇ ಆರಂಭವಾಯಿತು. ಬಂಗಾಳದ 11 ಜಿಲ್ಲೆಗಳ ರೈತರು ಅದರಲ್ಲಿ ಪಾಲ್ಗೊಂಡರು. ಮೈಮೆನ್‌ಸಿಂಗ್‌ನ ಗೋರೋ ಹಿಲ್ ಇಜಾಂಗ್ ಪ್ರದೇಶ, ಉತ್ತರ ಬಂಗಾಳದ ದಿನಾಜ್‌ಪುರ ಮತ್ತು ಜಲಪ್ಪಾಗುರಿ, ರಂಗಪುರದ ಅಧಿಯಾರ್ ಪ್ರಾಬಲ್ಯದ ಪ್ರದೇಶ, ಗಂಗಾನದಿಯ ಈ ಕಡೆ 24 ಪರಗಣ, ಹೂಗ್ಲಿ ಮತ್ತು ಮಿಡ್ನಾಪುರಗಳಲ್ಲಿ ಚಳವಳಿಯ ಕಾವು ತಾಗಿತು. ವರ್ಧಮಾನ್, ಜೆಸ್ಸೋರ್ ಮತ್ತು ಕೊಮಿಲ್ಲಾಗಳ ರೈತರು ಕೂಡ ಕಾಲುವೆ ಮತ್ತು ಇತರ ತೆರಿಗೆ ಸಂಬಂಧಿತ ಅಸಮಾನತೆಗಳ ವಿರುದ್ಧ ಬಂಡೆದ್ದರು.

ಬಂಗಾಳವಲ್ಲದೆ ಈ ಆಂದೋಲನ ಆಂಧ್ರಪ್ರದೇಶ, ಕೇರಳ, ಉತ್ತರ ಪ್ರದೇಶ, ಪಂಜಾಬ್ ಮತ್ತು ಮಹಾರಾಷ್ಟ್ರಕ್ಕೆ ಕೂಡ ಹಬ್ಬಿತ್ತು. ದೇಶದ ಇತಿಹಾಸದ ಈ ಇಡೀ ಅಧ್ಯಾಯದಲ್ಲಿ ನಮ್ಮ ಪಕ್ಷ ದಾರಿ ದೀಪದಂತಿತ್ತು ಹಾಗೂ ನಾಯಕನ ಪಾತ್ರವನ್ನು ಅದು ನಿರ್ವಹಿಸಿತು.

ಈ ನಡುವೆ, ಸತತವಾದ ಚಳವಳಿಗೆ ಮಣಿದ ಸುಹ್ರಾವರ್ದಿ ಸರಕಾರ ಅಂಡಮಾನ್‌ನಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಬಿಡುಗಡೆ ಮಾಡಿತು. ರಾಷ್ಟ್ರೀಯವಾದಿಗಳ ಬಿಡುಗಡೆಗಾಗಿ ಹೋರಾಡಲು ರಚಿಸಲಾದ ಸಮಿತಿಗೆ ನಿರಂಜನ ಸೇನ್ ಗುಪ್ತ ಸಂಚಾಲಕರಾಗಿದ್ದರು.

ವಿಧಾನಸಭೆಯ ಅಧಿವೇಶನ ಇನ್ನೂ ಆರಂಭವಾಗಿರಲಿಲ್ಲ. ಆಹಾರ ಬಿಕ್ಕಟ್ಟು ತೀವ್ರವಾಗಿತ್ತು. ಯುದ್ಧೋಪಾದಿಯಲ್ಲಿ ಕ್ರಮ ಕೈಗೊಳ್ಳುವಂತೆ ಸರಕಾರವನ್ನು ಒತ್ತಾಯಿಸುವ ಚಳವಳಿ ಅಗತ್ಯವಾಗಿತ್ತು. ಜನರ ಬೆಂಬಲದೊಂದಿಗೆ ನಾವು ಅಕ್ರಮ ದಾಸ್ತಾನುಕೋರರ ವಿರುದ್ಧ ಒಂದು ಆಂದೋಲನ ಆರಂಭಿಸಿದೆವು. ಬಹುತೇಕ ಜಿಲ್ಲೆಗಳಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ಆರಂಭಿಸಲಾಯಿತು. ಈ ಕೆಲಸ ಸರಿಯಾಗಿ ನಡೆಯುವಂತೆ ನೋಡಿಕೊಂಡ ಸಮಿತಿಗೆ ಸರಕಾರವೂ ಮಾನ್ಯತೆ ನೀಡಿತು.

ಆಹಾರ ಬಿಕ್ಕಟ್ಟಿನಿಂದಾಗಿ ನೂರಾರು ಜನರು ಹಸಿವಿನಿಂದ ಸತ್ತರು. ಇದಕ್ಕೆ ಸಂಬಂಧಿಸಿದ ವರದಿಗಳು ಹರಿದುಬರುತ್ತಲೇ ಇದ್ದವು. ಹಸಿವಿನಿಂದ ಕಂಗೆಟ್ಟ ಬಡವರ ವಲಸೆಯಿಂದಾಗಿ ಕಲ್ಕತ್ತದ ಉಸಿರುಗಟ್ಟುವಂತಾಯಿತು. ಬಂಗಾಳದ ಬತ್ತದ ಕಣಜ ಎಂದೇ ಖ್ಯಾತಿಯಾದ ದಿನಾಜ್‌ಪುರ ಜಿಲ್ಲೆಯಂಥ ಪ್ರದೇಶಗಳಲ್ಲೂ ಜನರು ಹಸಿವಿನಿಂದ ಸತ್ತರು.

ತಂಗಳನ್ನಕ್ಕೂ ಹಾಹಾಕಾರ

'ಉಳಿದದ್ದೂ ಪಳಿದದ್ದೂ ಏನಾದರೂ ಇದ್ದರೆ ಕೊಡಿ' ಎಂಬ ಹಸಿದವರ ಕೂಗು ಅರಮನೆಗಳ ನಗರದ ಬೀದಿ ಬೀದಿಗಳಲ್ಲಿ ಗಲ್ಲಿಗಲ್ಲಿಗಳಲ್ಲಿ ಮಾರ್ದನಿಸಿತು. ಈ ಅವಧಿಯಲ್ಲಿ 1944ರಲ್ಲಿ ಬಿಜನ್ ಭಟ್ಟಾಚಾರ್ಯ ತಮ್ಮ ಪ್ರಖ್ಯಾತ 'ನಬನ್ನ' (nabanna) ನಾಟಕವನ್ನು ಬರೆದರು. ಹಸಿವಿನಿಂದ ಜನ ಸಾಯುವ ದುರಂತವನ್ನು ಕಲಾವಿದರಾದ ಚಿತ್ತಪ್ರಸಾದ್ ಮತ್ತು ಜೈನುಲ್ ಅಬೆದಿನ್ ಕ್ಯಾನ್‌ವಾಸ್‌ಗಳ ಮೇಲೆ ಹಿಡಿದಿಟ್ಟರು. ಹಸಿವಿನಿಂದ ಕಂಗೆಟ್ಟಿವರ ನೆರವಿಗಾಗಿ ಹಣ ಸಂಗ್ರಹಿಸಲು ಪಕ್ಷದ ಗಣನಾಟ್ಯ ಸಂಘ ನಾಟಕಗಳನ್ನು ಪ್ರದರ್ಶಿಸಿತು. ನಮ್ಮ ಈ ಕಾರ್ಯದಲ್ಲಿ ಉದಯ ಶಂಕರ್ ಮತ್ತು ರವಿಶಂಕರ್ ಅವರಂಥ ಪ್ರಖ್ಯಾತ ಕಲಾವಿದರೂ ನೆರವಾದರು.

ಪಕ್ಷದ ಪ್ರತಿಷ್ಠೆ ಮತ್ತು ಅದರ ಪಾತ್ರ ಬೆಳೆಯುತ್ತಿದ್ದಂತೆ ನಾನೂ ಪಕ್ಷದ ಚಟುವಟಿಕೆಗಳಲ್ಲಿ ಹೆಚ್ಚೆಚ್ಚಾಗಿ ಭಾಗವಹಿಸತೊಡಗಿದೆ. ಅದೇ ಹೊತ್ತಿಗೆ ರೈಲ್ವೆಯಲ್ಲಿನ ಟ್ರೇಡ್ ಯೂನಿಯನ್ ಕೆಲಸವೂ ಸಾಗಿತ್ತು.

ರೈಲ್ವೆ ಮುಷ್ಕರಕ್ಕೆ ನಾವು ಸಿದ್ಧರಾಗುತ್ತಿದ್ದೆವು. ಆ ವರ್ಷ ಜೂನ್ 10 ರಂದು ಅಸ್ಸಾಂನ ಲಕ್ಸುಂಮ್ ಪ್ರದೇಶದಲ್ಲಿ ರ್‍ಯಾಲಿಯೊಂದರಲ್ಲಿ ಭಾಷಣ ಮಾಡಿದ ನೆನಪಿದೆ. ಬ್ರಿಟಿಷರನ್ನು ಭಾರತದಿಂದ ಹೊಡೆದೋಡಿಸುವ ಸಂಗ್ರಾಮದಲ್ಲಿ ಮಹತ್ವದ ಘಟನೆಯಾದ ಇದರಲ್ಲಿ ಟ್ರೇಡ್ ಯೂನಿಯನ್‌ಗಳಲ್ಲಿದ್ದ ಐದು ಲಕ್ಷದಷ್ಟು ಕಾರ್ಮಿಕ ವರ್ಗ ಸಕ್ರಿಯವಾಗಿ ಪಾಲ್ಗೊಳ್ಳಲಿದೆ ಎಂದು ನಾನು ಹೇಳಿದೆ. ಕಾಂಗ್ರೆಸ್ ಕೂಡ ಈ ಚಳವಳಿಗೆ ಧುಮುಕಿತು. ತೀರ್ಮಾನ ಮಾಡುವಂತೆ ನಾವು ಮುಂದಿಟ್ಟ ಬೇಡಿಕೆಯನ್ನು ಕಾಂಗ್ರೆಸ್ ಬೆಂಬಲಿಸಿತು.

ಕೇಂದ್ರದ ಮಧ್ಯಂತರ ಸರಕಾರವನ್ನು ಕಾಂಗ್ರೆಸ್ ಸೇರಿಕೊಂಡರೆ ಅದರ ನಾಯಕರು ರೈಲ್ವೆ ಮಂಡಳಿ ಮೇಲೆ ಒತ್ತಡ ಹೇರಬಹುದು ಎಂಬುದು ನನ್ನ ಪ್ರಸ್ತಾಪವಾಗಿತ್ತು. ಅಂಥ ಸಂದರ್ಭದಲ್ಲಿ ನಮ್ಮ ಹೋರಾಟಕ್ಕೆ ಇನ್ನಷ್ಟು ಸ್ಫೂರ್ತಿ ಸಿಗುತ್ತದೆ, ಮುಷ್ಕರ ನಡೆಸದೆಯೇ ಸ್ವೀಕಾರಾರ್ಹ ಪರಿಹಾರವೊಂದನ್ನು ಕಂಡುಕೊಳ್ಳಲು ಸಾಧ್ಯವಿತ್ತು.

ಕಿರಣ್ ಶಂಕರ್ ರಾಯ್ (ಪ್ರತಿಪಕ್ಷ ನಾಯಕ), ಬಿಮಲ್ ಚಂದ್ರ ಸಿನ್ಹ, ನಿಹಾರೇಂದು ದತ್ತ ಮಜುಂದಾರ್, ನಿಶಾಪತಿ ಮಝಿ, ಸುರೇಶ್‌ಚಂದ್ರ ಬ್ಯಾನರ್ಜಿ, ಚಾರುಚಂದ್ರ ಭಂಡಾರಿ ಮತ್ತು ಬಿಪೇನ್ ಬಿಹಾರಿ ಗಂಗೂಲಿ ಮೊದಲಾದ ಕೆಲ ಮುಖಂಡರು ಕಾಂಗ್ರೆಸ್ ಅಭ್ಯರ್ಥಿಗಳಾಗಿ ವಿಧಾನಸಭೆಗೆ ಆಯ್ಕೆಯಾದರು.

ಕೋಮು ರಾಜಕೀಯ

ಹಿಂದೂ ಮಹಾಸಭಾದ ನಾಯಕ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ (ನಂತರ 'ಭಾರತೀಯ ಜನಸಂಘ'ದ ಸ್ಥಾಪಕರಲ್ಲೊಬ್ಬರು - ಅನು) ಕಲ್ಕತ್ತ ವಿಶ್ವವಿದ್ಯಾಲಯ ಕ್ಷೇತ್ರದಿಂದ ಆಯ್ಕೆಯಾದರು. ಕೃಷಿಕ ಪ್ರಜಾ ಪಕ್ಷದ ಉಮೇದುವಾರರಾಗಿ ಫಜಲ್ ಹಕ್ ಅನಂತರ ಅಸೆಂಬ್ಲಿಗೆ ಚುನಾಯಿತರಾದರು. ಅವರ ಪಕ್ಷದ ಇನ್ನೂ ಕೆಲವರು ಶಾಸಕರಾದರು. ಯೂರೋಪಿಯನ್ ಬ್ರಿಟಿಷ್ ಬ್ಲಾಕ್‌ನ 21 ಹಾಗೂ ಆಂಗ್ಲೋ ಇಂಡಿಯಾನ್ ಸಮುದಾಯದ 25 ಸದಸ್ಯರೂ ಇದ್ದರು. ಅವರೆಲ್ಲರೂ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಪ್ರತಿನಿಧಿಗಳಾಗಿದ್ದರು.

ಕೆಲವೇ ಸದಸ್ಯರನ್ನು ಹೊರತು ಪಡಿಸಿ ಉಳಿದ ಬಹುತೇಕ ಮಂದಿ ಕೋಮು ಆಧಾರದ ಮೇಲೆ ಆಯ್ಕೆಯಾಗಿದ್ದಾರೆ ಎಂಬುದು ನನಗೆ ಗೊತ್ತಾಯಿತು. ಕಾಂಗ್ರೆಸ್‌ನ ಬಹಳಷ್ಟು ಸದ್ಯರು ಹಿಂದೂಗಳು, ಲೀಗ್ ಶಾಸಕರೆಲ್ಲಾ ಮುಸ್ಲಿಮರು. ಬರ್ಧಮಾನ್‌ನ ಮಹಾರಾಜ ರಾಯಲ್ಟಿ ಬ್ಲಾಕ್ ಪ್ರತಿನಿಧಿಸಿದ್ಧ. ಈ ರೀತಿಯಾಗಿ ಕೋಮು ರಾಜಕೀಯದ ಬೀಜ ಬಿತ್ತುವ ದಿಸೆಯಲ್ಲಿ ಬ್ರಿಟಿಷ್ ರಾಜ್ ಹುಲುಸಾದ ರಂಗವನ್ನು ಸಜ್ಜುಗೊಳಿಸಿತು.

ವಿಧಾನಸಭೆ ಕಲಾಪಗಳ ಬಗ್ಗೆ ನಮಗೆ ಏನೇನೂ ಅನುಭವ ಇರಲಿಲ್ಲ. ಪಕ್ಷವೂ ಈ ಹೊಸ ಅನುಭವಕ್ಕೆ ನಮ್ಮನ್ನು ಸಜ್ಜುಗೊಳಿಸಿರಲಿಲ್ಲ. ನಾವೇ ಸ್ವಂತವಾಗಿ ಪ್ರಶ್ನೆಗಳನ್ನು ಹಾಗೂ ಭಾಷಣಗಳನ್ನು ಸಿದ್ಧಪಡಿಸಿದೆವು. ಆದರೆ ಈ ವಿಚಾರವಾಗಿ ನಾನು ಯಾವಾಗಲೂ ಪಕ್ಷದ ನಾಯಕರ ಜತೆ ಚರ್ಚಿಸಿ ಅವರ ಮಾರ್ಗದರ್ಶನ ಪಡೆಯುತ್ತಿದ್ದೆ.

ಸದನದಲ್ಲಿ ನಾವೊಂದು ಪ್ರತ್ಯೇಕ ಗುಂಪಾಗಿ ಕುಳಿತುಕೊಳ್ಳುತ್ತಿದ್ದೆವು. ಬಂಧಿಗಳ ಬಿಡುಗಡೆ, ಪೋಲೀಸ್ ದಬ್ಬಾಳಿಕೆ, ರೈತರು ಮತ್ತು ಕಾರ್ಮಿಕ ಚಳವಳಿ, ಆಹಾರ ಬಿಕ್ಕಟ್ಟು, ಕೋಮುಸೌಹಾರ್ದ- ಇವೇ ಮೊದಲಾದ ವಿಷಯಗಳನ್ನು ಸದನದಲ್ಲಿ ಎತ್ತಲು ನಾವು ತೀರ್ಮಾನಿಸುತ್ತಿದ್ದೆವು.

ಬಂಗಾಳದ ವಿಭಜನೆಯಾದ ನಂತರ ಹಿಂದಿನ ಪೂರ್ವ ಪಾಕಿಸ್ತಾನದ ಮುಖ್ಯಮಂತ್ರಿಯಾಗಿ ಮುಸ್ಲಿಂ ಲೀಗ್‌ನ ನೂರುಲ್ ಅಮೀನ್ ಅಧಿಕಾರಕ್ಕೆ ಬಂದರು ಖೈದಿಗಳ ಬಿಡುಗಡೆ ಪ್ರಶ್ನೆ ಮೇಲೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನ ದೊಡ್ಡ ವಿಭಾಗಗಳು ನಮ್ಮನ್ನು ಬೆಂಬಲಿಸಿದವು. ಆದರೆ ಬೇರೆ ಪ್ರಮುಖ ವಿಷಯಗಳಲ್ಲಿ ಒಮ್ಮತ ಸಾಧ್ಯವಾಗಲಿಲ್ಲ.

ಇದು ನಮ್ಮ ಶಾಸಕಾಂಗ ರಾಜಕೀಯದ ಶಿಕ್ಷಣದ ಆರಂಭವಾಗಿತ್ತು. ಶಾಸಕಾಂಗ ರಾಜಕೀಯಕ್ಕೆ ಪರಿಚಯಕ್ಕೂ ಅದು ನಾಂದಿ ಹಾಡಿತ್ತು.

1946 ಸೆಪ್ಟೆಂಬರ್ 2 ರಂದು ಕೇಂದ್ರದಲ್ಲಿ ಮಧ್ಯಂತರ ಸರಕಾರ ರಚನೆಯಾಯಿತು. ಜವಾಹರ ಲಾಲ್ ನೆಹರೂ ಪ್ರಧಾನಿ ಹಾಗೂ ಲಿಯಾಖತ್ ಅಲಿಖಾನ್ ಹಣಕಾಸು ಮಂತ್ರಿ ಆದರು. ಭಾರತವನ್ನು ವಿಭಜಿಸಲು ಬ್ರಿಟಿಷರು ಆಗಲೇ ನಿರ್ಧರಿಸಿದ್ದರು. ಆ ದಿಸೆಯಲ್ಲಿ ಮಧ್ಯಂತರ ಸರಕಾರ ಮೊದಲ ಹೆಜ್ಜೆಯಾಗಿತ್ತು ಅಷ್ಟೆ.

ಇದಕ್ಕೂ ಮುನ್ನ ಜುಲೈನಲ್ಲಿ ಸಂವಿಧಾನ ಸಭೆಯೊಂದನ್ನು ರಚಿಸಲಾಗಿತ್ತು. ಸ್ವತಂತ್ರ ಭಾರತದ ಸಂವಿಧಾನವನ್ನು ರೂಪಿಸುವುದು ಅದರ ಕಾರ್ಯಭಾರವಾಗಿತ್ತು. ವಿವಿಧ ಪ್ರಾಂತ್ಯಗಳ ಶಾಸಕರ ಮತಗಳ ಆಧಾರದಲ್ಲಿ ಸಂವಿಧಾನ ಸಭೆ ಸದಸ್ಯರು ಚುನಾಯಿತರಾದರು. ಮತದಾನದ ವಿಧಾನ ಮತ್ತು ಪ್ರಕ್ರಿಯೆ ಬಗ್ಗೆ ಚರ್ಚಿಸಲು ಬಂಗಾಳ ವಿಧಾನಸಭೆಯ ವಿಶೇಷ ಅಧಿವೇಶನ 1946 ಜುಲೈ 17 ರಂದು ನಡೆಯಿತು.

ಸಂವಿಧಾನ ಸಭೆಗೆ ಕಮ್ಯುನಿಸ್ಟ್ ಪ್ರತಿನಿಧಿ


'ದೈನಿಕ್ ಸ್ವಾಧೀನತಾ'ದ ಅಂದಿನ ಸಂಪಾದಕ ಹಾಗೂ ಪಕ್ಷದ ನಾಯಕ ಸೋಮನಾಥ ಲಾಹಿರಿ ಅವರನ್ನು ಕಮ್ಯುನಿಸ್ಟ್ ಸದಸ್ಯರಾಗಿ ಸಂವಿಧಾನ ಸಭೆಗೆ ಆಯ್ಕೆ ಮಾಡಿದೆವು. ಜುಲೈ 24 ರಂದು ಸದನ ಪುನಃ ಸಮಾವೇಶಗೊಂಡಿತು. ಅದೊಂದು ಅವಿಸ್ಮರಣೀಯ ದಿನವಾಗಿದೆ...!

ಯಾಕೆಂದರೆ....

(ಮುಂದುವರಿಯುವುದು)

ಮಾತೃ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು

1962ರಲ್ಲಿ ಇ.ಎಂ.ಎಸ್.ರವರು ಬರೆದ ಒಂದು ಲೇಖನದಿಂದ



ಮಾತೃಭಾಷೆಯನ್ನು ಮಾಧ್ಯಮವಾಗಿ ಬಳಸಿದರೆ ಇಂಗ್ಲೀಷ್ ಮಟ್ಟ ಕುಸಿಯುತ್ತೆ ಎಂಬ ವಾದವನ್ನು ಬಳಸಲಾಗುತ್ತಿದೆ. ನನ್ನ ಅಭಿಪ್ರಾಯದಲ್ಲಿ ಈ ವಾದಕ್ಕೆ ಯಾವ ಅರ್ಥವೂ ಇಲ್ಲ.

ಮುಂದುವರೆದ ಅನೇಕ ರಾಷ್ಟ್ರಗಳಲ್ಲಿನ ವಿದೇಶಿ ಭಾಷಾ ಕಲಿಕೆಯ ಅನುಭವವೂ ಇದನ್ನೇ ಎತ್ತಿ ತೋರಿಸುತ್ತಿದೆ. ಅಂತರಾಷ್ಟ್ರೀಯ ಭಾಷೆಯೆಂಬ ನೆಲೆಯಲ್ಲಿ ಭಾರತದಂತೆ ಫ್ರಾನ್ಸ್, ಇಟಲಿ, ರಷ್ಯಾ, ಚೀನಾಗಳಲ್ಲಿಯೂ ಹಲವು ಜನ ಇಂಗ್ಲೀಷ್ ಕಲಿಯುತ್ತಿರುವರು. ನಮ್ಮ ದೇಶದಲ್ಲಿ ತಾಂತ್ರಿಕ ಶಿಕ್ಷಣದ ಉನ್ನತಿಗಾಗಿ ಇಂಗ್ಲೀಷ್, ಫ್ರೆಂಚ್, ಜರ್ಮನ್, ರಷ್ಯನ್ ಭಾಷೆಗಳನ್ನು ಕಲಿಯುವ ವ್ಯವಸ್ಥೆಗಳೂ ಇವೆ. ಹೀಗೆಯೇ ಇಂಗ್ಲೀಷ್ ಮಾತನಾಡುವ ಇಂಗ್ಲೆಂಡಿನಲ್ಲಿಯೂ ಅಮೇರಿಕಾಗಳಲ್ಲಿಯೂ ಅಂತರಾಷ್ಟ್ರೀಯ ಭಾಷೆಗಳೆಂಬ ಹಿನ್ನೆಲೆಯಲ್ಲಿ ಹಿಂದಿಯೂ ಸೇರಿದಂತೆ ಹಲವ ವಿದೇಶಿ ಭಾಷೆಗಳನ್ನು ಜನ ಕಲಿಯುತ್ತಿದ್ದಾರೆ. ಆದರೆ ಅಲ್ಲಿ ಸಹ ಆ ಭಾಷೆಗಳ ಮಟ್ಟವನ್ನು ಉತ್ತಮ ಪಡಿಸುವ ಹೆಸರಿನಲ್ಲಿ ಆ ಭಾಷೆಗಳನ್ನು ಮಾಧ್ಯಮವಾಗಿ ಬಳಸುತ್ತಿಲ್ಲ.

ಇನ್ನೊಂದು ಉದಾಹರಣೆಯನ್ನು ನೋಡಿ - ಒಮ್ಮೆ ನಾನು ಮಾಸ್ಕೋದಲ್ಲಿದ್ದಾಗ ನನ್ನ ಜೊತೆಗಿದ್ದ ದುಭಾಷಿ ಮಿತ್ರ ತಮ್ಮ ಶಿಕ್ಷಣವನ್ನೆಲ್ಲಾ ರಷ್ಯನ್ ಭಾಷೆಯಲ್ಲಿ ಮಾಡಿದ್ದವರು. ಇಂಗ್ಲೀಷ್‌ನ್ನು ತಮ್ಮ ಐಚ್ಛಿಕ ಭಾಷೆಯಾಗಿ ಮಾತ್ರ ಕಲಿತಿದ್ದರು. ಆದರೆ ಅವರ ಇಂಗ್ಲೀಷ್ ಮಾತುಗಾರಿಕೆ, ಪ್ರಾಥಮಿಕ ಶಾಲೆಯಿಂದಲೂ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ಮುಗಿಸಿದ್ದ ನನಗಿಂತ ಉತ್ತಮವಾಗಿತ್ತು. ನನ್ನ ಮಾತಿನಲ್ಲಿ ಭಾರತೀಯ ಇಂಗ್ಲೀಷ್ ಎಂಬ ಹೆಸರಿನಲ್ಲಿರುವ ವಿಕೃತ ಉಚ್ಚಾರಣೆಗಳೂ ಮಲೆಯಾಳಿಗಳಿಗೆ ವಿಶೇಷವಾಗಿರುವ ಉಚ್ಚಾರಣಾ ವೈಶಿಷ್ಟಗಳೂ ಇದ್ದವು. ಇದಕ್ಕೆ ಹೋಲಿಸಿದಾಗ ನನ್ನ ದುಭಾಷಿಯದ್ದು ಸಹ ಇಂಗ್ಲೀಷ್ ಆಗಿತ್ತು.

ವಿದೇಶಿ ಭಾಷೆಗಳನ್ನು ಕಲಿಯುವ ಎಲ್ಲರ ಮಟ್ಟವೂ ಇದಾಗಿರದಿದ್ದರೂ ಸ್ವಂತ ಭಾಷೆಯನ್ನು ನಿರ್ಲಕ್ಷಿಸಿ ಇಂಗ್ಲೀಷ್ ಮಟ್ಟ ಉತ್ತಮಪಡಿಸಲು ಶ್ರಮಿಸುವ ಹಲವು ಭಾರತೀಯರ ಮಟ್ಟಕ್ಕಿಂತ ಏನೇನು ಕಡಿಮೆಯಿರುವುದಿಲ್ಲ. ಸ್ವಂತ ಭಾಷೆಯನ್ನು ಮಾಧ್ಯಮವಾಗಿ ಬಳಸಿ ಶಿಕ್ಷಣ ಪಡೆಯುವ ಇವರ ಇಂಗೀಷ್ ಪರಿಜ್ಞಾನ ನಮಗಿಂತ ಉತ್ತಮವಾಗಿರುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಅಲ್ಲದೆ ಇಂಗ್ಲೀಷಿನ ಮಟ್ಟ ಕುಸಿಯಬಾರದೆಂಬ ಹೆಸರಿನಲ್ಲಿ ಇಂಗ್ಲೀಷ್ ಮಾಧ್ಯಮವನ್ನು ಜಾರಿ ಮಾಡುವ ಪ್ರವೃತ್ತಿ ಸರಕಾರದ ಅಂಗೀಕೃತ ನಿಲುವಾದ ತ್ರಿಭಾಷಾ ಸೂತ್ರಕ್ಕೆ ತದ್ವಿರುದ್ಧವಾಗಿರುತ್ತದೆ. ಮಾತೃಭಾಷೆ, ಹಿಂದಿ, ಇಂಗ್ಲೀಷ್ ಕಲಿಕೆಗಳಲ್ಲಿ ಪರಸ್ಪರ ಸಮತೋಲನ ತರುವುದೇ ತ್ರಿಭಾಷಾ ಸೂತ್ರದ ತಿರುಳು, ಈ ಮೂರರಲ್ಲಿ ಒಂದು ಮಾತ್ರವಾದ ಇಂಗ್ಲೀಷ್ ನ ಮಟ್ಟವನ್ನು ಉತ್ತಮಪಡಿಸಲಿಕ್ಕಾಗಿ ಅದನ್ನು ಶಿಕ್ಷಣ ಮಾಧ್ಯಮ ಮಾಡಬೇಕೆಂದು ಎಂದು ಹೇಳಿದರೆ ಅರ್ಥ ಎಲ್ಲಾ ವಿಷಯಗಳನ್ನು ಇಂಗ್ಲೀಷ್‌ನಲ್ಲೇ ಕಲಿಯುವುದರಿಂದ ಉಂಟಾಗುವ ಬೆಳವಣಿಗೆ ಮಾತೃ ಭಾಷೆ, ಹಿಂದಿಯಿಂದ ಉಂಟಾಗುವುದಿಲ್ಲ ಎಂದಾಗುತ್ತದೆ.

ಭೋಧನಾ ಮಾಧ್ಯಮ ಮಾಡಿದ ಭಾಷೆ ಉತ್ತಮ ಮಟ್ಟ ತಲುಪುತ್ತದೆ ಎನ್ನುವವರು ಆ ಮಟ್ಟ ಇಂಗ್ಲೀಷ್ ಮಾತ್ರ ತಲುಪಿದರೆ ಸಾಕು ರಾಜ್ಯದ ಭಾಷೆ, ಮಾತೃ ಭಾಷೆಗಳಿಗೆ ಆ ಮಟ್ಟ ಬೇಕಾಗಿಲ್ಲ ಎಂಬ ಧೋರಣೆಯುಳ್ಳವರಾಗಿರಬೇಕು.

ಇದರಲ್ಲಿ ಸರಿ ತಪ್ಪು ಯಾವುದೆಂದು ನನಗೆ ಗೊತ್ತಿಲ್ಲ. ಏನೇ ಆದರೂ ಇದು ತ್ರಿಭಾಷ ಸೂತ್ರದ ಬುಡವನ್ನೇ ಕೀಳುವ ಒಂದು ಧೋರಣೆಯಾಗಿದೆ.

ನನ್ನ ದೃಷ್ಟಿಯಲ್ಲಿ ತ್ರಿಭಾಷ ಸೂತ್ರದ ಅರ್ಥ ಹೀಗಿದೆ.

ಅ) ಒಂದು ರಾಜ್ಯದಲ್ಲಿ/ ಪ್ರದೇಶದಲ್ಲಿ ವಾಸಿಸುವ ಬಹುಸಂಖ್ಯಾತರಾದ ಜನರು ದಿನನಿತ್ಯದ ವ್ಯವಹಾರಕ್ಕಾಗಿ ಬಳಸಬೇಕಾದ ಭಾಷೆ, ಅವರ ಮಾತೃಭಾಷೆಯಾಗಿರುತ್ತದೆ. ಆ ಭಾಷೆಯಲ್ಲಿ ಚೆನ್ನಾಗಿ ಮಾತನಾಡಲು ಓದಲು, ಬರೆಯಲು ಬೇಕಾದ ಕೌಶಲ ಎಲ್ಲರಿಗೂ ಇರಬೇಕು.


ಆ) ಭಾರತದಲ್ಲಿರುವ ಇತರೆ ರಾಜ್ಯಗಳೊಂದಿಗೆ ಸಂಪರ್ಕಿಸಬೇಕಾಗಿ ಬರುವ ರಾಷ್ಟ್ರೀಯ ವಿಷಯಗಳಲ್ಲಿ ನಿರ್ವಹಿಸಬೇಕಾಗಿ ಬರುವವರಿಗೆ ರಾಷ್ಟ್ರದ ಹೆಚ್ಚಿನ ಜನ ಬಳಸುವ ನೆಲೆಯಲ್ಲಿ ಹಿಂದಿಯನ್ನು ಬಳಸಲು ಸಾಧ್ಯವಾಗಬೇಕು. ಅದಕ್ಕೆ ಬೇಕಾದ ಹಿಂದಿ ತಿಳುವಳಿಕೆ ಮತ್ತು ಪರಿಚಯ ಅವರಿಗೆ ಸಿಗಬೇಕು

ಇ) ಇತರ ರಾಷ್ಟ್ರಗಳೊಂದಿಗೆ ಸಂಪರ್ಕಿಸಬೇಕಾದವರಿಗೂ ವಿಜ್ಞಾನ- ತಂತ್ರಜ್ಞಾನ ವಿಷಯಗಳನ್ನು ಕಲಿಯಲು ಬೇಕಾದರೂ ಪರಿಚಯವಿರಬೇಕಾದ ವಿದೇಶಿ ಭಾಷೆಯೆಂಬ ನೆಲೆಯಲ್ಲಿ-ಚಾರಿತ್ರಿಕ ಕಾರಣಗಳಿಂದಾಗಿ ಇಂಗ್ಲೀಷ್ ಮಹತ್ವ ಪಡೆಯುತ್ತದೆ.

ಈ ಮೂರು ಭಾಷೆಗಳನ್ನು ಬೇಕಾದ ಪ್ರಮಾಣದಲ್ಲಿ ಸರಿ ಹೊಂದಿರುವ ಪ್ರಯತ್ನವೆಂಬಂತೆ ತ್ರಿಭಾಷಾ ಸೂತ್ರವನ್ನು ಒಪ್ಪಿಕೊಳ್ಳಲಾಗಿತ್ತು. ಆದುದರಿಂದ ಈ ಮಧ್ಯೆ ಇರುವ ಸಂಬಂಧಗಳಿಗೂ ಒಂದು ವಿಶೇಷ ಗುಣಸ್ವಭಾವವೂ ಇದೆ.

ಅತಿ ಹೆಚ್ಚು ಜನ ಸಾಮಾನ್ಯವಾಗಿ ಬಳಸಬೇಕಾದ ಭಾಷೆ ಮಾತೃಭಾಷೆಯಾಗಿದೆ. ಇದಕ್ಕಿಂತ ಕಡಿಮೆ ಜನರಿಗೆ ಹಿಂದಿ ಉಪಯೋಗಕ್ಕೆ ಬಂದರೆ ಇನ್ನೂ ಕಡಿಮೆ ಜನರಿಗೆ ಮಾತ್ರ ಇಂಗ್ಲೀಷ್ ನ ಉಪಯೋಗ ಬರುತ್ತದೆ. ಈ ದೃಷ್ಟಿಯಲ್ಲಿ ಅತಿ ಹೆಚ್ಚು ಜನರಿಗೆ ಮಾತೃ ಭಾಷಾ ಕೌಶಲ್ಯ ಚೆನ್ನಾಗಿರಬೇಕಾಗಿರುವುದಿಂದ ಆ ಭಾಷೆಗೆ ಹೆಚ್ಚು ಒತ್ತು ಕೊಡಬೇಕಾಗಿದೆ. ಅದರ ಮಟ್ಟ ಉತ್ತಮಪಡಿಸಲು ಬೇಕಾದ ಸಾಹಿತ್ಯಗಳನ್ನೂ, ಗ್ರಂಥಗಳನ್ನೂ ರಚಿಸುವುದರೆಡೆಗೆ ಇಂದು ಭಾಷಾ ಶಿಕ್ಷಣ ತಜ್ಞರ ಗಮನ ಹರಿಯಬೇಕಾಗಿದೆ. ಇತರೆ ಎಲ್ಲಾ ವಿಷಯಗಳನ್ನು ಬೋಧಿಸಬೇಕಾದ ಮಾಧ್ಯಮಭಾಷೆ ಮಾತೃಭಾಷೆಯೇ ಹೊರತು ಇಂಗ್ಲೀಷ್ ಅಲ್ಲ.

ಇಂಗ್ಲೀಷ್‌ನ ಮಟ್ಟವನ್ನು ಉತ್ತಮ ಪಡಿಸುವುದಕ್ಕೆ ನಾನು ವಿರೋಧಿಯೇನಲ್ಲ. ಆದರೆ ಅಂತರಾಷ್ಟ್ರೀಯ ಸಂಪರ್ಕಗಳಿಗಾಗಿ, ವೈಜ್ಞಾನಿಕ- ತಾಂತ್ರಿಕ ಶಿಕ್ಷಣಕ್ಕಾಗಿ ಮುಂದೆ ಬರುವವರಿಗೆ ಮಾತ್ರ ಇದರ ಅವಶ್ಯಕತೆ ಬರುತ್ತದೆ. ಇವರಿಗೆ ಬೇಕಾದ ಇಂಗ್ಲೀಷ್ ಭಾಷೆಯನ್ನು, ಭಾಷೆಯನ್ನು ಇನ್ನೂ ಉತ್ತಮವಾಗಿ ಕಲಿಸಲು ಬೇಕಾದ ವ್ಯವಸ್ಥೆಗಳನ್ನು ಮಾಡಿದರೆ ಸಾಕು.



ಎಡರಂಗ ಸರ್ಕಾರದ 22 ವರ್ಷಗಳು

ದುಡಿಯುವ ವರ್ಗದಿಂದ ಪರ್ಯಾಯ ನೀತಿಗಳ ಸವಾಲು

ಇಡೀ ದೇಶದಲ್ಲಿ ಬೇರೆ ಯಾವುದೇ ಪಕ್ಷದ ಸರಕಾರಗಳು-ಅದು ಕಾಂಗ್ರೆ ಪಕ್ಷ, ಬಿಜೆಪಿ, ತೆಲುಗುದೇಶಂ, ಅಣ್ಣಾ ಡಿ.ಎಂ.ಕೆ., ಡಿ.ಎಂ.ಕೆ. ಇತ್ಯಾದಿ-ಒಮ್ಮೆ ಗೆದ್ದವರು ಮುಂದಿನ ಚುನಾವಣೆಯಲ್ಲಿ ಜನರ ಪ್ರೀತಿ ಉಳಿಸಿಕೊಳ್ಳುವುದು ಸಾಧ್ಯವೇ ಆಗದೆ ಸೋತು ಆಯಾ ರಾಜ್ಯದ ಪ್ರಮುಖ ವಿರೋಧ ಪಕ್ಷಗಳು ಗೆಲ್ಲುವುದು, ಮತ್ತೆ ಮುಂದಿನ ಬಾರಿ ಅವರು ಸೋತು ಹಿಂದೆ ಆಳುತ್ತಿದ್ದ ಪಕ್ಷವೇ ಮತ್ತೆ ಗೆಲ್ಲುವುದು ಈ ರೀತಿ ಮ್ಯೂಸಿಕಲ್ ಚೇರ್ ಆಟದಂತೆ ನಡೆಯುತ್ತಿದೆ. ವಿಧಾನಸಭೆ ಚುನಾವಣೆಗಳಲ್ಲಿ ಗೆದ್ದರೆ ಆ ಪಕ್ಷ ಕೇವಲ ಒಂದೆರಡು ವರ್ಷಗಳ ಒಳಗೆ, ಕೆಲವೊಮ್ಮೆ ಕೆಲವೇ ತಿಂಗಳ ಒಳಗೆ ನಡೆಯುವ ಲೋಕಸಭೆ ಚುನಾವಣೆಗಳಲ್ಲಿ ಸೋಲುವುದು ಅಥವಾ ಪುರಸಭೆ, ಪಂಚಾಯತಿ ಚುನಾವಣೆಗಳಲ್ಲಿ ಸೋಲುವುದು ನಿತ್ಯ ಪರಿಪಾಠವಾಗಿದೆ. ಆದರೆ ಈ 22 ವರ್ಷಗಳಲ್ಲಿ ಪ.ಬಂಗಾಳದಲ್ಲಿ ನಡೆದ 5 ವಿಧಾನ ಸಭಾ ಚುನಾವಣೆಗಳು ಮಾತ್ರವೇ ಅಲ್ಲದೆ, 7 ಲೋಕಸಭಾ ಚುನಾವಣೆಗಳು, 5 ಜಿಲ್ಲಾ ಪಂಚಾಯತಿ-ಪುರಸಭಾ ಚುನಾವಣೆಗಳಲ್ಲಿ ಎಲ್ಲವುಗಳಲ್ಲೂ ನಿರಂತರವಾಗಿ, ಸ್ಪಷ್ಟವಾಗಿ ಬಹುಮತ ಪಡೆಯುತ್ತಿರುವ ಗುಟ್ಟೇನು? ಅಷ್ಟೊಂದು ಜನಪ್ರೀತಿ ಉಳಿಸಿಕೊಂಡಿರುವ, ಗಳಿಸಿಕೊಂಡಿರುವ ಗುಟ್ಟೇನು? ಇದು ದೇಶದ ಎಲ್ಲಾ ರಾಜಕೀಯ ಪಕ್ಷಗಳ ಮುಂದಿರುವ ಸವಾಲು. ಕೆಲವೊಮ್ಮೆ ಏಕೆ ಸೋತಿರಿ ಎಂಬ ಪ್ರಶ್ನೆಗೆ ಉತ್ತರಿಸಲಾಗದೆ ನಮ್ಮ ಸರ್ಕಾರ ಜನರ ಪ್ರೀತಿಯನ್ನು ಏಕೆ ಉಳಿಸಿಕೊಳ್ಳಲಿಲ್ಲ ಎಂದು ತಮ್ಮ ನೀತಿ, ಧೋರಣೆ, ಕ್ರಮಗಳು, ವರ್ತನೆಗಳು ಇವುಗಳನ್ನು ಬಗೆದು ನೋಡಿಕೊಳ್ಳಲಾರದೆ ಇನ್‌ಕಂಟೆನ್ಸಿ(Incuntany) ಅಂದರೆ ಸದ್ಯ ಅಧಿಕಾರದಲ್ಲಿರುವವರು ಮತ್ತೆ ಗೆಲ್ಲುವುದು ಸಾಧ್ಯವಿಲ್ಲ ಆದ್ದರಿಂದ ನಾವು ಸೋತಿದ್ದೇವೆ ಎಂಬ ಹೊಸ ತತ್ವವನ್ನೇ ಸೃಷ್ಟಿಸಿದ್ದಾರೆ ಈ ಬಂಡವಾಳಶಾಹಿ ಪಕ್ಷಗಳು ಹಾಗೂ ಅವರ ಬಾಲ ಹಿಡಿಯುವ ಪತ್ರಿಕೆಗಳು, ಬುದ್ಧಿಜೀವಿಗಳು. ಆದರೆ ಪ.ಬಂಗಾಳದಲ್ಲಿ 22 ವರ್ಷಗಳ ಕಾಲ ಯಾವುದೇ ಚುನಾವಣೆಯಲ್ಲಿ ಈ ಅಂಶ ಕೆಲಸ ಮಾಡಲಿಲ್ಲ ಏಕೆ?

ಇದಕ್ಕೆ ಮುಖ್ಯವಾದ ಕಾರಣ ಉಳಿದೆಲ್ಲಾ ಪಕ್ಷಗಳು ಬಂಡವಾಳಶಾಹಿ-ಭೂಮಾಲಕ ಪಕ್ಷಗಳು ಅವು ಅನುಸರಿಸುವ ನೀತಿ ಬಂಡವಾಳಶಾಹಿ-ಭೂಮಾಲಕ ವರ್ಗಗಳು ಮತ್ತಷ್ಟು ಜನಸಾಮಾನ್ಯರ ಶೋಷಣೆ ಮಾಡಿ ಶ್ರೀಮಂತರಾಗಲು ಅವಕಾಶ ಮಾಡಿಕೊಡುವ ನೀತಿ. ಎಡ ಪಕ್ಷಗಳು, ಅವುಗಳ ನೇತೃತ್ವ ವಹಿಸಿರುವ ಸಿಪಿಐ(ಎಂ) ಮಾತ್ರವೇ ಈ ಶೋಷಣೆಯಿಂದ ರಕ್ಷಣೆ ನೀಡಿ ಜನ ಸಾಮಾನ್ಯರಿಗೆ ಅನುಕೂಲ ಕಲ್ಪಿಸುವ ಸರ್ಕಾರ. ಕಾರ್ಮಿಕ ವರ್ಗದ ಪಕ್ಷವಾಗಿ ಬಂಡವಾಳಶಾಹಿಗಳಿಗೆ ವಿರುದ್ಧವಾದ ಜನಪರ ಪರ್ಯಾಯ ಧೋರಣೆಗಳನ್ನು ರೂಪಿಸಿರುವ, ಅನುಸರಿಸಿರುವ ಸರ್ಕಾರ. ಈ ಪರ್ಯಾಯ ನೀತಿಗಳ ಜಾರಿಗನುಗುಣವಾದ ಪರ್ಯಾಯ ಆಡಳಿತ ವಿಧಾನ, ನೀತಿ ಸಂಹಿತೆಯನ್ನು ಸಾಕಾರಗೊಳಿಸಿರುವ ಸರ್ಕಾರ ಎಂಬುದು ಸ್ಪಷ್ಟ. ಅದನ್ನು ಒಪ್ಪಿಕೊಳ್ಳಲಾಗದೆ ಈ ಸತ್ಯವನ್ನು ಜನರಿಂದ ಮರೆಮಾಚುವ ಕೆಲಸವನ್ನು ಮಾಧ್ಯಮಗಳು, ಪತ್ರಿಕೆಗಳು, ಪಕ್ಷಗಳು, ಬುದ್ಧಿ ಜೀವಿಗಳು ಎಷ್ಟೇ ಮಾಡಿದರೂ ಈ ಸವಾಲು ಇಂದು ದೇಶದ ಜನರ ಮುಂದಿದೆ. ಜನರ ಪ್ರೀತಿಯನ್ನು ಗಳಿಸುವ ಮನಸ್ಸಿದ್ದರೆ ನೋಡಿ ಇಲ್ಲಿದೆ ಮಾರ್ಗ ಎಂದು ಎಡರಂಗ ಸರ್ಕಾರದ ಪ್ರತಿ ದಿನವೂ, ಪ್ರತಿ ಚುನಾವಣೆಯ ಗೆಲುವು ಬಂಡವಾಳಶಾಹಿ - ಭೂಮಾಲಕ ಪಕ್ಷಗಳಿಗೆ ಸವಾಲೊಡ್ಡಿದೆ. ಈ ಸವಾಲನ್ನು ಸ್ವೀಕರಿಸುವುದು ಬಂಡವಾಳಶಾಹಿ- ಭೂಮಾಲಕ ಪಕ್ಷಗಳಿಗೆ ಸಾಧ್ಯವೇ ಇಲ್ಲ ಎಂಬುದನ್ನು ಈ 22 ವರ್ಷಗಳು ಸಾಬೀತುಮಾಡಿವೆ. ಜನ ಇದನ್ನು ತಿಳಿದುಕೊಳ್ಳಬೇಕಾಗಿದೆ.

ಸಮ್ಮಿಶ್ರ ಸರ್ಕಾರಕ್ಕೊಂದು ಮಾದರಿ

ಇಡೀ ದೇಶದಲ್ಲಿ ಇಂದು ಸಮ್ಮಿಶ್ರ ಸರ್ಕಾರವೆಂದರೆ ಅಸ್ಥಿರತೆ, ಅವಕಾಶವಾದಿಗಳ ಮೈತ್ರಿ, ಭ್ರಷ್ಟರ ಬೆಳವಣಿಗೆಗೆ ಸುವರ್ಣಾವಕಾಶ ಎಂದು ನಿರಂತರವಾಗಿ ಒಂದು ಕಡೆ ಕಾಂಗ್ರೆ-ಬಿಜೆಪಿ ಮತ್ತೊಂದು ಕಡೆ ಮಾಧ್ಯಮ, ಪತ್ರಿಕೆಗಳೂ ಅಪಪ್ರಚಾರ ಮಾಡುತ್ತಿವೆ. ಆದರೆ ಅದೇ ಸಮಯದಲ್ಲಿ ಪ.ಬಂಗಾಲದಲ್ಲಿ 22 ವರ್ಷಗಳ ಕಾಲ ಸ್ಥಿರವಾಗಿ ಉಳಿದಿರುವ ಎಡರಂಗ ಸರ್ಕಾರ 10 ಪಕ್ಷಗಳ ಕೂಟ ರಚಿಸಿದ ಸಮ್ಮಿಶ್ರ ಸರ್ಕಾರ ಎಂಬುದನ್ನು ಮುಚ್ಚಿಡುತ್ತಿವೆ. ಈ ಸಮ್ಮಿಶ್ರ ಸರ್ಕಾರ ಹಲವು ವಿಶೇಷ ಗುಣಗಳ ಸಮ್ಮಿಶ್ರ ಸರ್ಕಾರ.

ಒಂದನೆಯದಾಗಿ ಸಿಪಿಐ(ಎಂ)ಗೆ ವಿಧಾನಸಭೆಯಲ್ಲಿ ನೇರ ಬಹುಮತವಿದ್ದು ಸ್ವತಂತ್ರವಾಗಿ ಒಂದೇ ಪಕ್ಷದ ಸರ್ಕಾರವನ್ನೇ ರಚಿಸಬಹುದಾಗಿದ್ದರೂ, ಭಾರತದ ಯಾವುದೇ ರಾಜ್ಯದಲ್ಲಿ ಬೇರೆ ಯಾವುದೇ ಪಕ್ಷ ತಮಗೆ ಬಹುಮತ ದೊರೆತ ಸಂದರ್ಭದಲ್ಲಿ ಬೇರೆ ಯಾವ ಪಕ್ಷವನ್ನು ಜೊತೆಗೆ ಸೇರಿಸಿಕೊಳ್ಳದೆ ತಮ್ಮದೇ ಸರ್ಕಾರವನ್ನು ರಚಿಸುವ ಹಕ್ಕನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುವಂತೆ ಸಿಪಿಐ(ಎಂ) ಮಾಡಲಿಲ್ಲ. ಕಾಂಗ್ರೆಸ್‌ನ ದುರ್ನೀತಿಗಳ ವಿರುದ್ಧ ಹೋರಾಟದಲ್ಲಿ ತಮ್ಮ ಜೊತೆಗಿದ್ದ ಎಲ್ಲ ಪಕ್ಷಗಳನ್ನೂ ಸೇರಿಸಿಕೊಂಡು ಅವರಿಗೆ ಪ್ರಮುಖ ಖಾತೆಗಳನ್ನು ನೀಡಿ ಮಂತ್ರಿ ಪದವಿಗಳನ್ನು ಹಂಚಿಕೊಂಡು ಅವರೊಂದಿಗೆ ನಿರಂತರವಾಗಿ ಚರ್ಚಿಸಿಯೇ ಎಲ್ಲಾ ನೀತಿಗಳ ನಿರೂಪಣೆ ಮಾಡುವುದು ಸಿಪಿಐ(ಎಂ) ಪ.ಬಂಗಾಲದಲ್ಲಿ ಅನುಸರಿಸಿರುವ ರೀತಿ. ಅದಕ್ಕೆ ವಿರುದ್ಧವಾಗಿ ಕಾಂಗ್ರೆ, ಬಿಜೆಪಿಗಳ ಸಮ್ಮಿಶ್ರ ಸರ್ಕಾರ ರಚನೆಯಾಗಿರುವ ಸಂದರ್ಭಗಳಲ್ಲಿ ಈಗಿನ ಕೇಂದ್ರ ಸರ್ಕಾರವೂ ಸೇರಿ ಅವರಿಗೆ ಬಹುಮತವಿಲ್ಲದಾಗಲೂ ಅವರದೇ ಪಕ್ಷದ ಸರ್ಕಾರವೆಂಬಂತೆ ಇತರ ಸಹಯೋಗಿ ಪಕ್ಷಗಳನ್ನು ಕಡೆಗಣಿಸಿ ನಡೆಯುವುದು ಅದರಿಂದಲೇ ಸರ್ಕಾರಗಳು ಉಳಿಯದೇ ಒಡೆದು ಹೋಗುವುದು ನಾವು ಕಾಣುತ್ತಿರುವ ರೀತಿ.

ಎರಡನೆಯದಾಗಿ, ಪಶ್ಚಿಮ ಬಂಗಾಳ ಸರ್ಕಾರದ ನೀತಿ ಧೋರಣೆಗಳನ್ನು ರೂಪಿಸುವುದು ಕೇವಲ ಮಂತ್ರಿ ಮಂಡಲವಲ್ಲ. ಮಂತ್ರಿಮಂಡಲವನ್ನು, ಮಂತ್ರಿಗಳನ್ನು ಅತ್ಯಂತ ಉತ್ತಮ ತಜ್ಞರುಗಳ ನಡುವಿನಿಂದ ಆಯ್ದುಕೊಂಡರೂ ಅವರು ಸರ್ವಜ್ಞರು ಎಂದು ಸಿಪಿಐ(ಎಂ) ಭಾವಿಸುವುದಿಲ್ಲ. ಜನರೊಂದಿಗೆ ಬೆರೆತು ಕೆಲಸ ಮಾಡುತ್ತಿರುವ-ಜನ ಮತ್ತು ಸರ್ಕಾರದ ನಡುವಿನ ಸಂಪರ್ಕ ಸೇತುವಾದ ಪಕ್ಷವೇ ನೀತಿ ನಿರೂಪಣೆ ಮಾಡಬೇಕು ಎಂಬುದು ನಮ್ಮ ನಿಲುವು. ಹೀಗಾಗಿ ಪ.ಬಂಗಾಳ ಸರ್ಕಾರ ಒಂದು ಸಮ್ಮಿಶ್ರ ಸರ್ಕಾರವಾದುದರಿಂದ ನೀತಿಯನ್ನು ರೂಪಿಸುವುದು ಕೇವಲ ಸಿಪಿಐ(ಎಂ) ಅಲ್ಲ, ಸಮ್ಮಿಶ್ರ ಸರ್ಕಾರದ ಅಂಗಭಾಗಗಳು ಸೇರಿದ ಎಡರಂಗ. ಅದನ್ನು ರೂಢಿಸಲು ಎಲ್ಲ ಪಕ್ಷಗಳ ಅಧ್ಯಕ್ಷರು, ಕಾರ್ಯದರ್ಶಿ ಮೊದಲಾದ ಪ್ರಮುಖ ನಾಯಕರು ಸೇರಿದ ಸಂಯೋಜಕ ಸಮಿತಿ ಈ ಸಮಿತಿಯ ಅಧ್ಯಕ್ಷರಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಡರಂಗದ ಪಕ್ಷಗಳ ನಡುವಣ ಸಂಬಂಧವನ್ನು ರೂಪಿಸುತ್ತಾರೆ. ಯಾವುದೇ ಮಂತ್ರಿಶಾಖೆ ಯಾವುದೇ ಪಕ್ಷಕ್ಕೆ ಸೇರಿದ್ದರೂ, ಅವರು ಕೈಗೊಳ್ಳುವ ನೀತಿಗಳು ಎಡರಂಗದ ಆ ಸಮಿತಿಯಲ್ಲಿ ಚರ್ಚಿಸಬೇಕು. ಅದನ್ನು ಈ ರಂಗದ ಯಾವುದೇ ಪಕ್ಷವೂ ಸೂಚಿಸಬಹುದು. ಎಡರಂಗದ ಪ್ರಧಾನ ಪಾತ್ರಧಾರಿಯಾಗಿ ಸಿಪಿಐ(ಎಂ) ತನ್ನ ರಾಜ್ಯ ಸಮಿತಿಯಲ್ಲಿ ರೂಪಿಸಿದ ಹೊಸ ನೀತಿಯನ್ನು ಎಡರಂಗದ ಮುಂದಿಟ್ಟರೆ, ಆಯಾ ಪಕ್ಷಗಳು ತಂತಮ್ಮ ರಾಜ್ಯ ಸಮಿತಿಗಳಲ್ಲಿ ಚರ್ಚಿಸಿ ತಮ್ಮ ಅಭಿಪ್ರಾಯಗಳೊಡನೆ ಎಡರಂಗ ಸಂಯೋಜಕ ಸಮಿತಿಯ ಮುಂದೆ ಬರುತ್ತಾರೆ. ಅಲ್ಲಿ ಆ ನೀತಿಯನ್ನು ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುತ್ತದೆ. ಕೆಲವೊಮ್ಮೆ ತೆಗೆದುಕೊಳ್ಳುವ ತೀರ್ಮಾನಗಳ ಸ್ವರೂಪ ಇಡೀ ರಾಜ್ಯದ ಜೀವನದ ಮೇಲೆಯೇ ಪರಿಣಾಮ ಬೀರುವಂತಾದರೆ ಚರ್ಚೆಯಲ್ಲಿ ಪಕ್ಷದ ಜಿಲ್ಲಾ ಸಮಿತಿಗಳನ್ನು, ಕೆಳ ಸಮಿತಿಗಳನ್ನೂ ಒಳಗೊಳ್ಳಬಹುದು. ಆ ನೀತಿಗೆ ಸಂಬಂಧಪಟ್ಟ ಜನ ಸಮುದಾಯದ ಸಂಘಟನೆಗಳನ್ನು ಅಂದರೆ ರೈತ ಸಂಘ, ಮಹಿಳಾ ಸಂಘ, ಕಾರ್ಮಿಕ ಸಂಘಗಳು ಇತ್ಯಾದಿಗಳನ್ನು ಈ ಚರ್ಚೆಯಲ್ಲಿ ಒಳಗೊಳ್ಳಬಹುದು. ಹೀಗೆ ಒಂದು ನೀತಿ ರೂಪಿಸುವಾಗಲೇ ವ್ಯಾಪಕ ಚರ್ಚೆಯನ್ನು ಮಾಡುವ ಮೂಲಕ ಈ ಧೋರಣೆಯನ್ನು ದೋಷವಮುಕ್ತವಾಗಿಸಲು ಸಹಾಯವಾಗುತ್ತದೆ. ಇಂತಹ ಎಲ್ಲಾ ಅಂಶಗಳನ್ನು ಮನಸ್ಸಿನಲ್ಲಿಟ್ಟು ಕಾನೂನನ್ನು ಅಥವಾ ಯೋಜನೆಯನ್ನು ರೂಪಿಸುವಾಗ ಅದು ಕೇವಲ ಅಧಿಕಾರಿ ಬರೆದಿಟ್ಟು ಮಂತ್ರಿ ಸಹಿಹಾಕುವ ಅಧಿಕಾರಶಾಹಿ ಸೃಷ್ಟಿತ ಕಾನೂನು ಅಥವಾ ಯೋಜನೆಯಾಗಿರುವುದಿಲ್ಲ. ಈ ರೀತಿಯ ಕೆಲಸ ವಿಧಾನದ ಪರಿಣಾಮವಾಗಿ ಈ ಕಾನೂನು, ಯೋಜನೆಗಳ ಮೇಲೆ ಪ್ರತಿಪಕ್ಷಗಳು ಅಥವಾ ಪಟ್ಟಭದ್ರ ಹಿತಾಸಕ್ತಿಗಳು ಅಪಪ್ರಚಾರ, ಧಾಳಿಗಳನ್ನು ಮಾಡಿದರೆ ಆಗ ಎಡರಂಗದ ರಾಜಕೀಯ ಪಕ್ಷಗಳು ಅದಕ್ಕೆ ಸರಿಯಾದ ಉತ್ತರ ನೀಡಿ ಜನರ ಅಭಿಪ್ರಾಯ ರೂಪಿಸಲು ಸಹಾಯವಾಗುತ್ತದೆ. ಇದೇ ನೀತಿಯ ಭಾಗವಾಗಿಯೇ ಪಂಚಾಯತ್ ರಾಜ್ಯವನ್ನು ಅಧಿಕಾರ ವಿಕೇಂದ್ರೀಕರಣವನ್ನು ಬಲಗೊಳಿಸಿರುವುದು. ಈ ಬಗ್ಗೆ ವಿವರಗಳನ್ನು ಪ್ರತ್ಯೇಕವಾಗಿ ನೀಡಲಾಗಿದೆ. ಯೋಜನೆಗಳನ್ನು ರೂಪಿಸುವಲ್ಲಿ, ಜಾರಿ ಮಾಡುವಲ್ಲಿ ಕೆಳಹಂತದಿಂದ ಜನರ ಅಭಿಪ್ರಾಯವನ್ನು ಸಂಗ್ರಹಿಸುವುದು ಮಾತ್ರವೇ ಅಲ್ಲದೆ ಆಡಳಿತ ವಿಕೇಂದ್ರೀಕರಣ ಅಥವಾ ಬಲಶಾಲಿ ಪಂಚಾಯತ್ ರಾಜ್ ವ್ಯವಸ್ಥೆ ರಾಜಕೀಯ ಪಕ್ಷವನ್ನೂ ಎಲ್ಲಾ ಹಂತದಲ್ಲಿಯೂ ಕ್ರಿಯಾಶೀಲವಾಗಿಸುತ್ತವೆ. ಇಡೀ ದೇಶದ ಹಾಗೂ ರಾಜ್ಯದ ಒಟ್ಟಾರೆ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ರಾಜಕೀಯ ಪ್ರಜ್ಞೆಯನ್ನು ಪಡೆಯುವಲ್ಲಿ ಸಹಾಯವಾಗಿದೆ. ಹೀಗಾಗಿ ಚುನಾವಣೆಗಳಲಿ ಮತ ನೀಡಿಕೆ ಪ್ರಜ್ಞಾವಂತ ಆಯ್ಕೆಯಾಗುತ್ತದೆ.

> ಜನಸಮುದಾಯದಲ್ಲಿ ಹೆಚ್ಚು ಹೆಚ್ಚು ಐಕ್ಯತೆಯನ್ನು ತರಲು ಹಗಲಿರುಳೂ ಶ್ರಮಿಸುವ ಸಿಪಿಐ(ಎಂ) ಎಡರಂಗವನ್ನು ಜನರಲ್ಲಿ ಐಕ್ಯತೆಯನ್ನು ತರುವ ಒಂದು ಸಾಧನವನ್ನಾಗಿ ಮಾಡಿಕೊಂಡಿದೆ. ಹೀಗಾಗಿ ೬ ಪಕ್ಷಗಳಿದ್ದ ಎಡರಂಗ ೧೦ ಪಕ್ಷಗಳ ರಂಗವಾಯಿತು ಎಂದರೆ ಆ ಪಕ್ಷಗಳ ಹಿಂದಿದ್ದ ಜನಸಮುದಾಯ ಎಡರಂಗದ ಬೆಂಬಲಿಗ ಸಮುದಾಯದೊಡನೆ ಸೇರಿ ಜನರ ಐಕ್ಯತೆ ಹೆಚ್ಚಾಯಿತು

ಜನ-ಪ್ರಧಾನ ವಿಧಾನ

ಸಾಮಾನ್ಯವಾಗಿ ಬಂಡವಾಳಶಾಹಿ ಪಕ್ಷಗಳು ಆಳುವ ಇತರೆಲ್ಲಾ ರಾಜ್ಯಗಳಲ್ಲಿ ಹಾಗೂ ಕೇಂದ್ರದಲ್ಲಿ ಆಗುವುದೇನು? ಒಂದು ಪಕ್ಷ ಅಧಿಕಾರ ಬಂತೆಂದ ಕೂಡಲೇ ಮಂತ್ರಿಗಳು, ಮಂತ್ರಿಮಂಡಲ ಪ್ರಮುಖವಾಗಿಬಿಡುತ್ತದೆ. ಪಕ್ಷದ ಅಧ್ಯಕ್ಷರು ಪದಾಧಿಕಾರಿಗಳನ್ನು ಪಕ್ಷದ ಕಛೇರಿಯನ್ನು ಕೂಡ ಕೇಳುವವರೇ ಇರುವುದಿಲ್ಲ. ಯಾವುದೇ ನೀತಿ ನಿರೂಪಣೆಯಲ್ಲಿ ಪಕ್ಷಕ್ಕೆ ಪಾತ್ರವಿರುವುದೇ ಇಲ್ಲ. ರಾಜ್ಯಮಟ್ಟದ ಪಕ್ಷದ ನಾಯಕರಿಗೇ ಹೀಗಾದರೆ ಜಿಲ್ಲಾ ಮಟ್ಟದ ಕೆಳಮಟ್ಟಗಳ ಕಾರ್ಯಕರ್ತರನ್ನು ಕೇಳುವವರಾರು? ಹೀಗಾಗಿ ಈ ಪಕ್ಷಗಳ ಸರ್ಕಾರಗಳು ಅತ್ಯಂತ ಒಳ್ಳೆಯ ಜನಪ್ರಿಯ ನೀತಿಯನ್ನು ಜಾರಿಗೆ ತಂದರೂ ಕೂಡ ಅದನ್ನು ಹೆಮ್ಮೆಯಿಂದ ಜನರಿಗೆ ತಿಳಿಸುವ ಯಂತ್ರವೇ ಕ್ರಿಯಾಶೀಲವಾಗಿರುವುದಿಲ್ಲ. ಅಥವಾ ಈ ನೀತಿಯ ವಿರುದ್ಧ ಸಕಾರಣವಾಗಿಯೋ, ಅಕಾರಣವಾಗಿಯೋ ವಿರೋಧ ಪಕ್ಷಗಳು, ಈ ನೀತಿಯ ಜಾರಿಯಿಂದ ತೊಂದರೆಗೊಳಗಾಗುವ ಲಾಭಕೋರ ಶಕ್ತಿಗಳು ಧಾಳಿ, ಅಪಪ್ರಚಾರ ಮಾಡಿದಾಗ ಅದನ್ನು ಎದುರಿಸುವ ಮನಸ್ಸು ಹಾಗೂ ಅದಕ್ಕೆ ಬೇಕಾದ ವಿವರಗಳು ಕೂಡ ಆ ಪಕ್ಷಗಳ ಕಾರ್ಯಕರ್ತರಿಗೆ ಲಭ್ಯವಿರವುದಿಲ್ಲ. ಎಷ್ಟೊ ಬಾರಿ ಒಳ್ಳೆಯ ಯೋಜನೆಯೂ ಕೆಟ್ಟ ಯೋಜನೆಯಾಗಿ ಜನರ ನಡುವೆ ಬಿಂಬಿತವಾಗಬಹುದು. ಜನರಿಗೆ ಆ ಯೋಜನೆಯ ಬಗ್ಗೆಯೇ ತಿಳಿಯದೇ ಹೋಗಬಹುದು. ಕೆಲವೊಮ್ಮೆ ಪ್ರತಿಕೂಲ ಜನಾಭಿಪ್ರಾಯವೂ ಉಂಟಾಗಿ ಹಿಂತೆಗೆದುಕೊಳ್ಳಬೇಕಾಗಬಹುದು. ಒಟ್ಟಿನಲ್ಲಿ ಜನ ಮತ್ತು ಸರ್ಕಾರದ ನಡುವೆ ಕೊಂಡಿಯಾಗಿ ಪಾತ್ರ ವಹಿಸಬೇಕಾದ ಪಕ್ಷದ ಇಡೀ ಸಂಘಟನೆ ಕೆಳಮಟ್ಟದಿಂದ ಮೇಲ್ ಮಟ್ಟದವರೆಗೂ ಕ್ರಿಯಾಶೂನ್ಯವಾಗಿರುತ್ತದೆ. ಕಾರ್ಯಕರ್ತರ-ಮಂತ್ರಿಗಳ ಸುತ್ತ ತಿರುಗುತ್ತಾ ತಮ್ಮ ಸ್ವಾರ್ಥ ಸಾಧನೆಯಲ್ಲಿ ಮಗ್ನರಾಗಿ ತಾವೂ ಜನರ ಸಂಪರ್ಕ ಕಳೆದುಕೊಳ್ಳುತ್ತಾರೆ. ಪ.ಬಂಗಾಳದಲ್ಲಿ ಸಿಪಿಐ(ಎಂ) ಮಂತ್ರಿ ಮಂಡಲ ಅಥವಾ ಸರ್ಕಾರ ಪ್ರಧಾನ ಕೆಲಸದ ವಿಧಾನಕ್ಕೆ ವಿರುದ್ಧವಾದ ಜನಪ್ರಧಾನ ಮತ್ತು ಪಕ್ಷ ಪ್ರಧಾನ ಕೆಲಸದ ವಿಧಾನವನ್ನು ಅಳವಡಿಸಿಕೊಂಡಿರುವುದರಿಂದ ಅಲ್ಲಿ ಎಡರಂಗದಲ್ಲಿರುವ ಪಕ್ಷಗಳಿರಲೀ ವಿರೋಧ ಪಕ್ಷಗಳೂ ಜನರ ಸಂಪರ್ಕವನ್ನು ನಿರಂತರವಾಗಿ ಇಟ್ಟುಕೊಳ್ಳುವ ಹಾಗೂ ಪಕ್ಷದ ಸಂಘಟನೆಗೆ, ಕೆಳಹಂತದ ಕಾರ್ಯಕರ್ತರಿಗೆ ಗಮನ ನೀಡುವ ಒತ್ತಾಯಕ್ಕೊಳಗಾಗಿದ್ದಾರೆ. ಆ ಪಕ್ಷಗಳು ಹಾಗೆ ಮಾಡದೇ ಇದ್ದರೆ ತಮ್ಮೊಂದಿಗೆ ಇರುವ ಜನರನ್ನೆಲ್ಲಾ ಬಹುಬೇಗ ಕಳೆದುಕೊಳ್ಳುವ ಭಯ ಅವರಿಂದ ಈ ಕೆಲಸವನ್ನು ಮಾಡಿಸುತ್ತದೆ. ಹೀಗೆ ಬಂಡವಾಳ ಶಾಹಿ ಪಕ್ಷಗಳೂ ಕೂಡಾ ಪ.ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಬೇರೆಯೇ ಸ್ವರೂಪವನ್ನು ಪಡೆಯುತ್ತವೆ.

ಕೇವಲ ಅಧಿಕಾರಕ್ಕಾಗಿ ಮೈತ್ರಿಯಲ್ಲ

ಮೇಲಿನ ಕಾರಣಗಳಿಗಿಂತ ಮುಖ್ಯವಾದ ಹಾಗೂ ಮೇಲಿನೆರಡಕ್ಕೂ ಮೂಲವಾಗುವುದು ಈ ಸಮ್ಮಿಶ್ರ ಸರ್ಕಾರ ಅಥವಾ ಮೈತ್ರಿ ಕೂಟ ಕೇವಲ ಅಧಿಕಾರ ಹಿಡಿಯಲು ಯಾರಾದರೂ ಸರಿ ಎಂಬ ಧೋರಣೆಯಿಂದ ಮಾಡಿಕೊಂಡ ಮೈತ್ರಿಯ ಫಲವಲ್ಲ. ಜನರ ಸಮಸ್ಯೆಗಳನ್ನು ರಾಜ್ಯದ, ದೇಶದ ಅಭಿವೃದ್ಧಿಯನ್ನು ಸಾಧಿಸಲು ಸರಿಯಾದ ದಾರಿ ಯಾವುದು ಎಂಬುದರ ಅನ್ವೇಷಣೆಯಲ್ಲಿ ಮಾಡಿಕೊಂಡ, ಧೋರಣೆಯಲ್ಲಿ ಸಮಾನತೆ ಉಳ್ಳ ಪಕ್ಷಗಳೊಡನೆ ಮಾಡಿಕೊಂಡ ಮೈತ್ರಿ. ಆದ್ದರಿಂದಲೇ ನಾನು ಮಂತ್ರಿಯಾಗಬೇಕು ಅವನನ್ನಿಳಿಸಬೇಕು ಎಂಬ ಸ್ಪರ್ಧೆಯಿಲ್ಲ. ಆದ್ದರಿಂದಲೇ ಸಿಪಿಐ(ಎಂ) ಶಾಸಕರು ನಮಗೆ ಪೂರ್ಣಬಹುಮತವಿದ್ದರೂ ಕೂಡಾ ಇತರ ಪಕ್ಷಗಳನ್ನು ಏಕೆ ಸೇರಿಸಿಕೊಳ್ಳುತ್ತೀರಿ ಅವರಿಗೇಕೆ ಮಂತ್ರಿ ಪದವಿ ನೀಡುತ್ತೀರಿ ಅದನ್ನು ನಮಗೆ ಕೊಡಿ ಎನ್ನುವುದಿಲ್ಲ. ಹಾಗೆಯೇ ಎಡರಂಗ ಪಕ್ಷಗಳ ಸಮನ್ವಯ, ನೀತಿ,ಧೋರಣೆಯ ವಿಷಯದಲ್ಲಿ ಪರಸ್ಪರ ವಿರುದ್ಧಾತ್ಮಕ ಘರ್ಷಣೆಯಿಲ್ಲದೆ, ನೀತಿಯನ್ನು ನಿರೂಪಿಸುವಾಗ ಅದಷ್ಟೂ ಜನಪರವಾಗಿರಬೇಕು, ದೋಷಮುಕ್ತವಾಗಿರಬೇಕು ಎಂಬ ದೃಷ್ಟಿಯಿಂದ ಚರ್ಚೆಗಳು ನಡೆಯಲು ಹಾಗೂ ಅದು ಕಾರ್ಯಗತವಾಗಲು ಆಸ್ಪದವಾಗಿರುತ್ತದೆ. ತಮ್ಮದೇ ಸ್ವಂತ ಬಹುಮತವಿರುವಾಗ ಸಿಪಿಐ(ಎಂ) ಏಕೆ ತಮ್ಮದೇ ಸರಕಾರ ರಚಿಸಬಾರದು? ಸಮ್ಮಿಶ್ರ ಸರ್ಕಾರ ರಚಿಸಿ ಆಗಾಗ ಹಿರಿಯಣ್ಣನಂತೆ ವರ್ತಿಸಿ ಇತರ ಪಕ್ಷಗಳಿಗೆ ಅನ್ಯಾಯ ಮಾಡುತ್ತಿದೆ ಎಂಬ ದೂರುಗಳಿಗಾಗಲೀ ಎಂಬ ದೂರುಗಳಿಗಾಗಲೀ ಅಥವಾ ಒಮ್ಮೆ ಜತಿನ್ ಚಕ್ರವರ್ತಿ ಎಂಬ ಫಾರ್ವರ್ಡ್ ಬ್ಲಾಕ್ ಪಕ್ಷದ ಒಬ್ಬ ಮಂತ್ರಿ ಬೂಟಾ ಸಿಂಗ್ (ಆಗ ಕೇಂದ್ರ ಗೃಹ ಸಚಿವರು) ರ ಒಳಸಂಚಿನಲ್ಲಿ ಪಾತ್ರಧಾರಿಯಾಗಿ ಜ್ಯೋತಿಬಸುರವರ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸಿದ್ದು ಇಂತಹ ಪ್ರಕರಣಗಳಿಗೇಕೆ ಅವಕಾಶ ಮಾಡಿಕೊಡಬೇಕು ಎಂಬ ಪ್ರಶ್ನೆಗಳನ್ನು ಎತ್ತಿದ್ದಾರೆ. ಸಿಪಿಐ(ಎಂ)ದೇ ಸರ್ಕಾರವಿದ್ದರೆ ಅದು ಇನ್ನೂ ಹೆಚ್ಚು ಜನಪರವಾಗಿ, ಹೆಚ್ಚು ದಕ್ಷವಾಗಿ ಕೆಲಸ ಮಾಡಲು ಅವಕಾಶವಾಗುತ್ತದಲ್ಲ ಎನ್ನುವವರೂ ಇದ್ದಾರೆ. ಆದರೆ ಸ್ವಂತ ಬಹುಮತವಿದ್ದೂ ಸಮ್ಮಿಶ್ರ ಸರ್ಕಾರ ರಚಿಸುವ ಈ ಅಪೂರ್ವ ವಿಶೇಷತೆಯ ಮುಖ್ಯ ಕಾರಣವೆಂದರೆ ಸಿಪಿಐ(ಎಂ) ಕೇವಲ ವಿಧಾನ ಸಭೆಯೊಳಗಿನ ಬಲಾಬಲವನ್ನು ಮಾತ್ರ ಪರಿಗಣಿಸುವುದಿಲ್ಲ. ಬೇರೆಲ್ಲಾ ಪಕ್ಷಗಳೂ ವಿಧಾನಸಭೆಯಲ್ಲಿ ಅಥವಾ ಲೋಕಸಭೆಯಲ್ಲಿ ಬಹುಮತ ಬಂದ ಕೂಡಲೇ, ಬಹುಮತ ಬಾರದಿದ್ದರೂ ಅದಕ್ಕೆ ಸ್ವಲ್ಪ ಹತ್ತಿರವಿದ್ದರೂ ಸಾಕು ತಾವು ಜನಾದೇಶವನ್ನು ಪಡೆದಿದ್ದೇವೆ ತಾವಷ್ಟೇ ಸರಕಾರ ನಡೆಸಲು ಹಕ್ಕು ಪಡೆದವರು ಎಂದು

ಪುಟ 10 ನೋಡಿ

ಕಬ್ಬು ಮಂಡ್ಯ ಜಿಲ್ಲೆಯ ಪ್ರಮುಖ ಬೆಳೆ. ಈ ಜಿಲ್ಲೆ ಆರ್ಥಿಕವಾಗಿ ಬಹಳವಾಗಿ ಮುಂದುವರೆಯಲು ನೆರವಾದ ವಾಣಿಜ್ಯ ಬೆಳೆ. ಆದರೆ ಈಗ ಕಬ್ಬು ಹಾಗೂ ಸಕ್ಕರೆ ಉದ್ಯಮಕ್ಕೆ ದುಸ್ಥಿತಿ ಬಂದಿದೆ. ಅದನ್ನು ನೆಚ್ಚಿಕೊಂಡಿರುವ ರೈತರ, ಕಾರ್ಮಿಕರ ಬದುಕನ್ನು ಇದು ಕತ್ತಲೆಯೆಡೆಗೆ ತಳ್ಳುತ್ತಿದೆ. ರೈತರು, ಕಾರ್ಮಿಕರು ಹೋರಾಟದ ಕಣಕ್ಕಿಳಿಯುತ್ತಿದ್ದಾರೆ.



ಕಬ್ಬು ಬೆಳೆಯುವ ರೈತರ ಸಿಹಿಯಾದ ಬೆಳೆ-ಕಹಿಯಾದ ಬದುಕು

ಕೃಷ್ಣೇಗೌಡ ಟಿ.ಎಲ್

ಮಂಡ್ಯ ಜಿಲ್ಲೆಯೆಂದೊಡನೆ ತಟ್ಟನೆ ನೆನಪಾಗುವುದು ಸಿಹಿಯಾದ ಕಬ್ಬು ಮತ್ತು ಛತ್ರ. ಮಂಡ್ಯ ಜಿಲ್ಲೆಯ ಪ್ರಮುಖವಾಣಿಜ್ಯ ಬೆಳೆಯಾದ ಕಬ್ಬು ಜಿಲ್ಲೆಯು ಆರ್ಥಿಕವಾಗಿ ಮುಂದುವರೆಯಲು ಬಹಳಷ್ಟು ನೆರವಾಗಿದೆ. ಆದರೆ ಈಗ ಈ ಕಬ್ಬಿನ ಕೃಷಿ ಹಾಗು ಸಕ್ಕರೆ ಉದ್ಯಮಕ್ಕೆ ಬರುತ್ತಿರುವ ದುಸ್ಥಿತಿ ಅದನ್ನು ನೆಚ್ಚಿಕೊಂಡಿರುವ ರೈತರನ್ನು, ಕಾರ್ಮಿಕರ ಬದುಕನ್ನು ಕತ್ತಲೆಯೆಡೆಗೆ ಕೊಂಡೊಯ್ಯುತ್ತಿದೆ.

ಮಂಡ್ಯ ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷ ಎಕರೆ ಭೂ ಪ್ರದೇಶದಲ್ಲಿ 35-40 ಲಕ್ಷ ಟನ್ನುಗಳಷ್ಟು ಕಬ್ಬನ್ನು ಬೆಳೆಯಲಾಗುತ್ತಿದೆ. ಈ ಕಬ್ಬನ್ನು ಮೂರು ಸಕ್ಕರೆ ಕಾರ್ಖಾನೆಗಳು ಹಾಗೂ 2500-2800 ರಷ್ಟಿರುವ ಕಬ್ಬಿನ ಗಾಣಗಳು ಅರೆದು ಸಕ್ಕರೆ ಮತ್ತು ಬೆಲ್ಲವನ್ನಾಗಿ ತಯಾರು ಮಾಡುತ್ತಿವೆ. ಮೂರು ಸಕ್ಕರೆ ಕಂಪನಿಗಳು ಒಂದು ಖಾಸಗಿ ಒಡೆತನದ ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಂ. ಸರ್ಕಾರಿ ಸ್ವಾಮ್ಯದ ಮೈಷುಗರ್ ಸಕ್ಕರೆ ಕಂ., ಮತ್ತೊಂದು ಸಹಕಾರಿ ಕ್ಷೇತ್ರದ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ (PSSK). ಭೂಮಾಲಿಕರು ಮತ್ತು ಶ್ರೀಮಂತ ರೈತರು ನಡೆಸುತ್ತಿರುವ ಗಾಣಗಳು. ಈ ಕ್ಷೇತ್ರದಲ್ಲಿ ರೈತರ ಜತೆಗೆ ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ 50,000 ಜನರು ಉದ್ಯೋಗವಕಾಶಗಳನ್ನು ಪಡೆದಿದ್ದಾರೆ.

ಕಬ್ಬನ್ನು-ಕಷ್ಟಗಳನ್ನು ಜೊತೆಯಲ್ಲೇ ನಾಟಿ ಮಾಡುವ ರೈತ

ಕಬ್ಬನ್ನು ನಾಟಿ ಮಾಡಲು ಆರಂಭಿಸುತ್ತಿದ್ದಂತೆಯೇ ರೈತನಿಗೆ ಕಷ್ಟಗಳೂ ಆರಂಭವಾಗುತ್ತವೆ. ಸಕ್ಕರೆ ಕಾರ್ಖಾನೆಗಳಿಗೆ ಸರಿಯಾಗಿ ಕಬ್ಬನ್ನು ಪೂರೈಸಬೇಕಾದರೆ - ಕಾರ್ಖಾನೆಯವರು ಪೂರೈಸಿಕೊಳ್ಳಬೇಕಾದರೆ ವರ್ಷದುದ್ದಕ್ಕೂ ಕಬ್ಬನ್ನು ನಾಟಿ ಮಾಡಬೇಕಾಗುತ್ತದೆ. ಆದರೆ ಇದಕ್ಕೆ ಪೂರಕವಾಗಿ ನೀರಾವರಿ ಸೌಲಭ್ಯಗಳಿಲ್ಲದಿರುವುದರಿಂದ ರೈತರು ಬೇಗನೇ ಕಬ್ಬನ್ನು ನಾಟಿ ಮಾಡಿ ತಮ್ಮ ಹೆಸರುಗಳನ್ನು ಕಾರ್ಖಾನೆಗೆ ನೊಂದಾಯಿಸಿಕೊಳ್ಳುವ ಒತ್ತಡಕ್ಕೊಳಗಾಗುತ್ತಾರೆ. ಕಾರ್ಖಾನೆಗಳವರು ತಾವು ಕೊಡುವ ಬಿತ್ತನೆಯನ್ನೇ ನಾಟಿ ಮಾಡುವ ಒತ್ತಡ ಹಾಕುತ್ತಾರೆ. ಮೇ-ಜೂನ್ ತಿಂಗಳಲ್ಲಿ ನಾಟಿ ಮಾಡುವ ಕಬ್ಬು ಇಳುವರಿ ಬರುವಷ್ಟು ಬೇರೆ ತಿಂಗಳುಗಳಲ್ಲಿ ನಾಟಿ ಮಾಡುವ ಕಬ್ಬು ಬರುವುದಿಲ್ಲ. ಡಿಸೆಂಬರ್-ಜನವರಿ ತಿಂಗಳಿನ ಕಬ್ಬಂತೂ ತುಂಬಾ ಕಡಿಮೆ ಇಳುವರಿ ಬರುತ್ತದೆ. (ಮೇ, ಜೂನ್ 60-70, ಡಿ.-ಜನವರಿ ತಿಂಗಳಲ್ಲಿ 40-50 ಟನ್ನುಗಳು) ಇದಕ್ಕೆ ಯಾವುದೇ ಕಾರ್ಖಾನೆಯವರೂ ಬೆಂಬಲ ಕೊಡುವ ಗೋಜಿಗೂ ಹೋಗದೆ, ರೈತರನ್ನೇ ಅಸಹಾಯಕರನ್ನಾಗಿಸುತ್ತವೆ.

ಹೆಚ್ಚುತ್ತಿರುವ ಉತ್ಪಾದನಾ ವೆಚ್ಚ

ಇತ್ತೀಚಿನ ದಿನಗಳಲ್ಲಿ ಕಬ್ಬಿನ ಉತ್ಪಾದನಾ ವೆಚ್ಚ ತೀವ್ರವಾಗಿ ಏರುತ್ತಿದೆ. ಸುಮಾರು ಒಂದು ಎಕರೆ ಕಬ್ಬು ಬೆಳೆಯಲು ಬಿತ್ತನೆ ಬೆಲೆ 4000-5000 ರೂ, ಭೂಮಿ ಹದ ಮಾಡಲು 2-3 ಸಾವಿರ ರೂ., ರಸಗೊಬ್ಬರ 8-10 ಸಾವಿರ ರೂ., ಕಟಾವು ಮತ್ತು ಸರಬರಾಜು ವೆಚ್ಚ 7-8 ಸಾವಿರ ರೂ. ಹಾಗೂ ರೈತನ ಯಾವುದೇ ಶ್ರಮವನ್ನು ಗಣನೆಗೆ ತೆಗೆದುಕೊಳ್ಳದಿದ್ದರೂ ಸುಮಾರು 20-22 ಸಾವಿರ ರೂ.ಗಳಷ್ಟು ವೆಚ್ಚವಾಗುತ್ತದೆ. ಮತ್ತು ಕೇಂದ್ರ, ರಾಜ್ಯ ಸರ್ಕಾರಗಳು ಜಾರಿಗೆ ತಂದ ಆರ್ಥಿಕ ಉದಾರೀಕರಣ ನೀತಿಗಳ ಫಲವಾಗಿ ವಿಪರೀತವಾಗಿ ಏರುತ್ತಿರುವ ರಸಗೊಬ್ಬರ ಹಾಗೂ ಕೀಟನಾಶಕಗಳ ಬೆಲೆಗಳು ಉತ್ಪಾದನಾ ವೆಚ್ಚವನ್ನು ಮತ್ತಷ್ಟು ಗಗನಕ್ಕೇರಿಸುತ್ತಿವೆ. ಬ್ಯಾಂಕುಗಳು, ಇತರೆ ಸಾರ್ವಜನಿಕ ಹಣಕಾಸು ಸಂಸ್ಥೆಗಳಿಂದ ಸಾಲಸಿಗದೆ ದುಬಾರಿ ಬಡ್ಡಿಯ ಲೇವಾದೇವಿಗಾರರ ಶೋಷಣೆಗೆ ಉತ್ಪಾದನಾ ವೆಚ್ಚ ಹೆಚ್ಚಲು ಕಾರಣವಾಗುತ್ತಿವೆ.

ಅಧಿಕ ಇಳುವರಿ ಸೌದೆಯಾಗುತ್ತಿರುವ ಕಬ್ಬು

ಏನೆಲ್ಲಾ ಕಷ್ಟ - ಕಾರ್ಪಣ್ಯಗಳಿದ್ದರೂ ರೈತರು ತಮ್ಮ ಜಮೀನುಗಳಲ್ಲಿ ಅಧಿಕ ಇಳುವರಿ ತೆಗೆಯಲು ಪ್ರಯತ್ನಿಸುತ್ತಾರೆ. ಅಪಾರ ಶ್ರಮದಿಂದ ಇಳುವರಿಯನ್ನು ತೆಗೆಯುತ್ತಾರೆ(ಎಕರೆಗೆ 60-70 ಟನ್ನುಗಳಷ್ಟು ಇಳುವರಿಯನ್ನು ಕೆಲವು ರೈತರು ತೆಗೆಯುತ್ತಾರೆ) ಹಾಗಾಗಿ ಒಟ್ಟು 35-40 ಲಕ್ಷ ಟನ್ನಿನಷ್ಟು ಕಬ್ಬನ್ನು ಬೆಳೆಯುತ್ತಾರೆ ಆದರೆ 3 ಸಕ್ಕರೆ ಕಾರ್ಖಾನೆಯ ಅರೆಯಬಹುದಾದ ಒಟ್ಟು ಸಾಮರ್ಥ್ಯ 20-23 ಲಕ್ಷ ಟನ್ನಗಳಷ್ಟು ಮಾತ್ರ. ಗಾಣಗಳೂ ಸೇರಿದರೆ 25-30 ಲಕ್ಷ ಟನ್ನುಗಳಷ್ಟು ಕಬ್ಬನ್ನರೆಯುತ್ತಾರೆ. ಆದರೆ ಗಾಣಗಳು, ಬೆಲ್ಲಕ್ಕೆ ಸರಿಯಾದ ಮಾರುಕಟ್ಟೆ ಸೌಲಭ್ಯವಿಲ್ಲದಿರುವುದರಿಂದ - ನಿಯಮಿತವಾಗಿ ನ್ಯಾಯಯುತ ಬೆಲೆ ಸಿಗದಿರುವುದರಿಂದ ಗಾಣಗಳ ಮಾಲಿಕರು ಬಂದಷ್ಟೇ ಲಾಭ ಮಾಡಿಕೊಳ್ಳಲು ಮತ್ತು ತಮಗೆ ಲಾಭ ಸಿಗುವ ಗ್ಯಾರಂಟಿಯಿರುವ ಸಮಯದಲ್ಲಷ್ಟೇ ಬೆಲ್ಲವನ್ನು ತಯಾರಿಸುವುದರಿಂದ ಸಮರ್ಪಕವಾಗಿ ಕಬ್ಬನ್ನು ಪೂರೈಸಿಕೊಳ್ಳುವುದಿಲ್ಲ. ಶ್ರೀಮಂತ ರೈತರೇ ಗಾಣಗಳ ಮಾಲಿಕರಾಗಿರುವುದರಿಂದ ತಮ್ಮ ಕಬ್ಬನ್ನಷ್ಟೇ ಅರೆದುಕೊಳ್ಳುತ್ತಾರೆ. ಸಕ್ಕರೆ ಕಾರ್ಖಾನೆಗಳು ಒಂದು ಎಕರೆಗೆ ಇಂತಿಷ್ಟೇ ಅಂದರೆ 40-45 ಟನ್ನು ಮಾತ್ರ ತೆಗೆದುಕೊಳ್ಳುವ ನಿರ್ಬಂಧ ಹಾಕಿರುವುದರಿಂದ, ಉಳಿಯುವ ಕಬ್ಬನ್ನು ಏನು ಮಾಡಲು ಸಹ ರೈತ ಅಸಮರ್ಥನಾಗುತ್ತಾನೆ. ಇಂತಹ ಸಂದರ್ಭಗಳನ್ನೇ ದುರುಪಯೋಗಪಡಿಸಿಕೊಳ್ಳುವ ಗಾಣದ ಮಾಲೀಕರು ಮತ್ತು ಕಾರ್ಖಾನೆಗಳ ಜತೆ ಅಪವಿತ್ರ ಮೈತ್ರಿಯಿಂದ ಹೆಚ್ಚು ಕಬ್ಬು ಪೂರೈಕೆ ಅನುಮತಿ ಪಡೆದುಕೊಂಡ ಮೇಸ್ತ್ರಿಗಳು ಅಸಹಾಯಕ ರೈತನಿಂದ ರೂ. 250-300 ಕ್ಕೆ ಕಬ್ಬನ್ನು ಕೊಳ್ಳೆ ಹೊಡೆದು ರೈತರ ತಲೆ ಬೋಳಿಸುತ್ತಾರೆ. ಇಷ್ಟೆಲ್ಲಾ ಸಮಸ್ಯೆಗಳು, ಮಿತಿಗಳಿದ್ದರೂ ಕಾರ್ಖಾನೆಗಳವರು ರೈತರನ್ನು ಹೆಚ್ಚು ಕಬ್ಬು ನೆಡಲು - ಆರ್ಥಿಕ ಇಳುವರಿ ಪಡೆಯಲು ತಮ್ಮ ಲಾಭಕ್ಕಾಗಿ ಪುಸಲಾಯಿಸುತ್ತಾರೆ.

ಕಷ್ಟಗಳು ಹೆಚ್ಚಾದವು ಬೆಲೆ ಹೆಚ್ಚಾಗಲಿಲ್ಲ

ಹೀಗೆ ಒಂದು ಎಕರೆಯಲ್ಲಿ ಕಬ್ಬು ಬೆಳೆಯಲು 20-22 ಸಾವಿರ ರೂ. ವೆಚ್ಚವಾಗುತ್ತದೆ ಮತ್ತು ಎಕರೆಗೆ ಸರಾಸರಿ 40 ಟನ್ನು ಇಳುವರಿ ಬರುತ್ತದೆ. ಹಾಗಾಗಿ ಒಂದು ಟನ್ನು ಕಬ್ಬು ಬೆಳೆಯಲು ರೈತನ ಶ್ರಮವನ್ನು ಹೊರತು ಪಡಿಸಿಯೂ 500-550 ರೂ.ಗಳಷ್ಟು ಉತ್ಪಾದನಾ ವೆಚ್ಚ ಬರುತ್ತದೆ. ಆದರೆ ಯಾವುದೇ ಸಂದರ್ಭದಲ್ಲಿಯೂ ಸಕ್ಕರೆ ಕಾರ್ಖಾನೆಗಳು ಕಬ್ಬಿಗೆ ಹೆಚ್ಚು ಬೆಲೆ ನಿಗದಿ ಪಡಿಸಲು ಯೋಚಿಸುವುದಿಲ್ಲ. ಹಲವಾರು ಹೋರಾಟಗಳ ನಂತರವೂ ಕೇವಲ 825/- ರೂಗಳನ್ನು ಮಾತ್ರ ಟನ್ನೊಂದಕ್ಕೆ ನೀಡುತ್ತಿದ್ದಾರೆ. ಅಪಾರ ಭ್ರಷ್ಟಾಚಾರ ಮತ್ತು ದುಂದುವೆಚ್ಚದ ನಡುವೆಯೂ ಪ್ರತಿ ಟನ್ನಿಗೆ 2,000 ರೂ.ಗಳಷ್ಟು ಸಂಪಾದಿಸುವ ಕಾರ್ಖಾನೆಯವರು (ಡಿಸ್ಟಲರಿಯಿರುವವರು ಇನ್ನೂ ಹೆಚ್ಚು), ತಮ್ಮ ಲಾಭಕೋರತನಕ್ಕೇ ಗಮನ ನೀಡುವ ಮಾಲೀಕರು ಮತ್ತು ಸರ್ಕಾರ ರೈತನಿಗೆ ಮಾತ್ರ ಸರಿಯಾದ ಬೆಲೆ ನೀಡುವುದಿಲ್ಲ. ಅಷ್ಟೇ ಅಲ್ಲ ಈಗ ಕೊಡುತ್ತಿರುವ 825/- ರೂ.ಗಳನ್ನೂ ಸಹ 2-3 ಕಂತುಗಳಲ್ಲಿ ಕೊಡುತ್ತಾರೆ. ಕೆಲವೊಮ್ಮೆ ವರ್ಷಗಳಷ್ಟು ಸತಾಯಿಸಿಯೂ ಹಣ ಪಾವತಿಸದಿರುವ ಉದಾಹರಣೆಗಳಿವೆ.

ಉದಾರೀಕರಣ ಕಬ್ಬು ಹಾಗೂ ಸಕ್ಕರೆ ಉದ್ಯಮ

1991 ರಿಂದ ಆಳುವ ಸರ್ಕಾರಗಳು ತಂದ ಉದಾರೀಕರಣ ನೀತಿಗಳು ಅದರ ಜೊತೆಯಲ್ಲೇ ಬಂದ ಮುಕ್ತ ಆಮದು - ರಫ್ತು ನೀತಿಗಳು ರೈತರ ಶವಪೆಟ್ಟಿಗೆಯನ್ನು ತಯಾರಿಸಿದರೆ, ಬಿಜೆಪಿ ಸರ್ಕಾರದ ವಾಣಿಜ್ಯ ಮಂತ್ರಿ ಹೆಗಡೆಯವರು ತಂದ ನೂತನ ಆಮದು-ರಫ್ತು ನೀತಿ ಶವಪೆಟ್ಟಿಗೆಗೆ ಕೊನೆಯ ಮೊಳೆಯೊಡೆಯುವ ಪ್ರಯತ್ನವಾಗಿದೆ.

ಆರ್ಥಿಕ ಉದಾರೀಕರಣದೊಂದಿಗೇ ಬಂದ ರಸಗೊಬ್ಬರಗಳು, ಕೃಷಿ ಉಪಕರಣಗಳು, ಕೀಟನಾಶಕಗಳ ಮೇಲಿನ ಸಹಾಯಧನ ಕಡಿತ, ಬಹುರಾಷ್ಟ್ರೀಯ ಕಂಪನಿಗಳ ಲಾಭಕೋರತನದಿಂದ ಬಂದಿರುವ ದುಬಾರಿ ಬೆಲೆಯ ಕಳಪೆ ಕೀಟನಾಶಕಗಳು, ಕಬ್ಬನ್ನು ಗಬ್ಬು ಏಳಿಸಿದ್ದರೆ, ಮುಕ್ತ ಆಮದು-ರಫ್ತು ನೀತಿಯ ಫಲವಾಗಿ ವಿದೇಶಗಳಿಂದ ಸಕ್ಕರೆಯನ್ನು ಅತ್ಯಂತ ಸುಲಭವಾಗಿ, ವ್ಯಾಪಕವಾಗಿ ಆಮದು ಮಾಡಿಕೊಳ್ಳಲಾಗುತ್ತಿದೆ. ಇದರ ಪರಿಣಾಮವಾಗಿ ನಮ್ಮ ಅಡುಗೆ ಮನೆಗಳಲ್ಲಿ ವಿದೇಶಿ ಸಕ್ಕರೆ ತಮ್ಮ ರುಚಿ ತೋರಿಸುತ್ತಿದ್ದರೆ ನಮ್ಮದೇ ಕಬ್ಬು ನಮ್ಮ ಸಕ್ಕರೆ ಉಗ್ರಾಣಗಳಲ್ಲಿ ನಿದ್ರೆ ಮಾಡುತ್ತಿದೆ.

ಅಷ್ಟೇ ಅಲ್ಲದೆ ಸಕ್ಕರೆ ಉದ್ಯಮಪತಿಗಳ ಒತ್ತಡ ಮತ್ತು ಹಣಕ್ಕೆ ಮಣಿದ ಸರ್ಕಾರಗಳು ಲೆವಿ ಸಕ್ಕರೆಯ ನಿರ್ಬಂಧವನ್ನು ಸಡಿಲಿಸಿದ್ದರಿಂದ ಅಪಾರ ಲಾಭ ಮಾಡಿಕೊಳ್ಳುವ ದೃಷ್ಟಿಯಿಂದ ಸಕ್ಕರೆಯನ್ನು ಮಾರುಕಟ್ಟೆಗೆ ಬಿಡದ ಕಾರ್ಖಾನೆಗಳು ವ್ಯಾಪಕವಾಗಿ ಸಂಗಹ

೧೯೯೧ ರಿಂದ ಆಳುವ ಸರ್ಕಾರಗಳು ತಂದ ಉದಾರೀಕರಣ ನೀತಿಗಳು ಅದರ ಜೊತೆಯಲ್ಲೇ ಬಂದ ಮುಕ್ತ ಆಮದು - ರಫ್ತು ನೀತಿಗಳು ರೈತರ ಶವಪೆಟ್ಟಿಗೆಯನ್ನು ತಯಾರಿಸಿದರೆ, ಬಿಜೆಪಿ ಸರ್ಕಾರದ ವಾಣಿಜ್ಯ ಮಂತ್ರಿ ಹೆಗಡೆಯವರು ತಂದ ನೂತನ ಆಮದು-ರಫ್ತು ನೀತಿ ಶವಪೆಟ್ಟಿಗೆಗೆ ಕೊನೆಯ ಮೊಳೆಯೊಡೆಯುವ ಪ್ರಯತ್ನವಾಗಿದೆ. ಇದರ ಪರಿಣಾಮವಾಗಿ ನಮ್ಮ ಅಡುಗೆ ಮನೆಗಳಲ್ಲಿ ವಿದೇಶಿ ಸಕ್ಕರೆ ತಮ್ಮ ರುಚಿ ತೋರಿಸುತ್ತಿದ್ದರೆ ನಮ್ಮದೇ ಕಬ್ಬು ನಮ್ಮ ಸಕ್ಕರೆ ಉಗ್ರಾಣಗಳಲ್ಲಿ ನಿದ್ರೆ ಮಾಡುತ್ತಿದೆ.

ಮಾಡಿದವು. ಆದರೆ ಒಮ್ಮೆಲೇ ಮಾರುಕಟ್ಟೆಗೆ ಬಿಡುಗಡೆ ಮಾಡಿ ಬಂಪರ್ ಲಾಭ ಮಾಡಿಕೊಳ್ಳುವ ತಯಾರಿಯಲ್ಲಿದ್ದಾಗಲೇ ವಿದೇಶಿ ಸಕ್ಕರೆ ನಮ್ಮ ಮಾರುಕಟ್ಟೆಗೆ ಬಂದುದರಿಂದ ಈ ಕಾರ್ಖಾನೆಗಳ ಮಾಲೀಕರ ಕನಸುಗಳು ನನಸಾಗಲಿಲ್ಲ. ಮತ್ತು ಈ ಕಂಪನಿಗಳು ತಮಗಿದ್ದ ಅಲ್ಪ ಸಾಮರ್ಥ್ಯದಿಂದ ಇಷ್ಟೊಂದು ಸಂಗ್ರಹಣೆಯನ್ನು ಹೆಚ್ಚು ಸಮಯ ತೆಗೆದುಕೊಳ್ಳಲಾಗದೆ ಉತ್ಪಾದನೆಯಲ್ಲೇ ವ್ಯತ್ಯಯ ಮಾಡಿಕೊಳ್ಳುವ ಹಂತಕ್ಕೂ ಹೋದವು.

ಈ ಸನ್ನಿವೇಶದಲ್ಲಿ ಸಕ್ಕರೆ ದಣಿಗಳ ಕಣ್ಣಿಗೆ ಬಿದ್ದವರು ಬಡಪಾಯಿ ರೈತರೇ. ಯಂತ್ರಗಳ ರಿಪೇರಿ, ಇತರೆ ನೆಪಗಳಲ್ಲಿ ಕಬ್ಬು ಅರೆಯುವುದನ್ನೇ ವ್ಯತ್ಯಯ ಮಾಡಿದರು. ಸಮಯ ಮೀರಿದ ಕಬ್ಬು ತನ್ನ ಇಳುವರಿಯನ್ನು ಕಳೆದುಕೊಂಡಿತು. ಈಗಲೂ ನಷ್ಟ ರೈತನಿಗೇ. ಸಕ್ಕರೆ ಮಾರಾಟವಾಗದೇ ಉಗ್ರಾಣಗಳಲ್ಲಿ ಉಳಿದದ್ದರಿಂದ ರೈತನಿಗೆ ಹಣ ಪಾವತಿಯನ್ನು ಮುಂದೂಡಿದರು. ಈ ಕಷ್ಟವೂ ರೈತನಿಗೇ. ಹೀಗೆ ಕಬ್ಬನ್ನು ವಿಳಂಬನಾಗಿ ಅರೆದುದರಿಂದ ಸೌದೆಯಂತೆ ಒಣಗಿದ ಕಬ್ಬನ್ನೇ ಅರೆಯಬೇಕಾದ ಅನಿವಾರ್ಯ ಒತ್ತಡಕ್ಕೆ ಸಿಕ್ಕ ಕಾರ್ಖಾನೆಗಳೂ ಅಲ್ಪಪ್ರಮಾಣದಲ್ಲಿ ನಷ್ಟ ಅನುಭವಿಸಿದವು. ಈ ಎಲ್ಲಾ ಕಷ್ಟ-ನಷ್ಟಗಳನ್ನು ಕೊನೆಗೆ ರೈತನ ತಲೆಗೆ ವರ್ಗಾಯಿಸಲಾಗುತ್ತಿದೆ.

ಕೃಷಿ ಕೂಲಿಕಾರರು

ಕಬ್ಬು ಕೃಷಿ ಕ್ಷೇತ್ರದಲ್ಲಿ ಸುಮಾರು 25-30 ಸಾವಿರ ಕೃಷಿಕೂಲಿಕಾರರು ದುಡಿಯುತ್ತಿದ್ದಾರೆ. ಪ್ರಮುಖವಾಗಿ ಕಬ್ಬನ್ನು ಕಡಿಯುವ ವೃತ್ತಿಯಲ್ಲಿ (ಗಾಣಗಳಿಗೆ 10-12 ಸಾವಿರ ಮತ್ತು ಕಾರ್ಖಾನೆಗಳಿಗೆ 10-12 ಸಾವಿರ) ದುಡಿಯುತ್ತಿರುವ ಈ ಕೂಲಿಕಾರರು ಕನಿಷ್ಠ ಕೂಲಿಯ ಹತ್ತಿರ ಕೂಲಿ ಪಡೆಯುತ್ತಿದ್ದಾರೆ. ದಿನವೊಂದಕ್ಕೆ ಕನಿಷ್ಠ ಒಂದು ಟನ್ ಕಬ್ಬು ಕಡಿಯುವ ಒಬ್ಬ ಕೂಲಿಕಾರ 75-85 ರೂಗಳಷ್ಟು ಸಂಪಾದಿಸುತ್ತಾನೆ. ಆದರೆ ಕಬ್ಬಿಗೆ ಬಂದೊದಗುತ್ತಿರುವ ದುಸ್ಥಿತಿ ಇವರ ಬದುಕಿನ ಮೇಲೂ ಗಂಭೀರ ಹೊಡೆತ ನೀಡುತ್ತಿದೆ. ಕಾರ್ಖಾನೆಗಳು ನಡೆಯುವುದು ಈ ಕೂಲಿಕಾರರ ಕೈಗಳ ಮೇಲೆ ನಿಂತಿರುವುದಾದರೂ ಯಾವುದೇ ಕಾರ್ಖಾನೆಗಳವರು ಇವರಿಗೆ ಯಾವುದೇ ಸೌಲಭ್ಯಗಳನ್ನು ನೀಡುವುದಿಲ್ಲ. ಮತ್ತು ಗಾಣಗಳಲ್ಲಿ ದುಡಿಯುವ ಕೂಲಿಕಾರರು ಈಗಲೂ ಬಹುಸಂಖ್ಯಾತರು ಜೀತದಾಳುಗಳಾಗಿಯೋ, ಒಪ್ಪಂದಕ್ಕೆ ಬದ್ಧರಾಗಿಯೋ, ಸಾಲದ ಮೇಲಿನ ದುಬಾರಿ ಬಡ್ಡಿಗೋ ದುಡಿಯುತ್ತಿದ್ದಾರೆ. ಮತ್ತು ರೈತನ-ಕೂಲಿಕಾರರ-ಮಾಲೀಕರ ನಡುವೆ ಮೇಸ್ತ್ರಿಗಳಾಗಿ ಕೆಲಸ ಮಾಡುವವರಿಂದಲೂ ನಿರ್ದಯ ಶೋಷಣೆಗೊಳಗಾಗುತ್ತಾರೆ. ಈ ಮೇಸ್ತ್ರಿಗಳಿಗೆ ಕೂಲಿಕಾರರು ಪ್ರತಿ ಟನ್ನಿಗೆ 2 ರೂ.ನಂತೆ ಕಮಿಷನ್ ಕೊಡಬೇಕು, ಕಷ್ಟಕಾಲದ ಸಾಲಗಳಿಗೆ ದುಬಾರಿ ಬಡ್ಡಿ ನೀಡಬೇಕು ಹೀಗೆ.

ಆದರೆ ಈಗ ಎಲ್ಲಾ ಕಾರ್ಖಾನೆಗಳವರೂ ಕಬ್ಬು ಕಡಿಯಲು ಯಂತ್ರಗಳನ್ನು ತರುವ ಯೋಚನೆಯಲ್ಲಿದ್ದಾರೆ. ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯವರು ಈಗಾಗಲೇ 35 ಲಕ್ಷಕ್ಕೊಂದರಂತೆ ಎರಡು ಯಂತ್ರಗಳನ್ನು ತರಲು ಯೋಜಿಸಿದ್ದಾರೆ. ಈ ಯಂತ್ರಗಳು ಕತ್ತರಿಸಲು ಸಹಾಯವಾಗುವಂತೆ ಕಬ್ಬನ್ನು ನಾಟಿ ಮಾಡಲು ಒತ್ತಾಯಿಸಲಾಗುತ್ತಿದೆ. ಪ್ರತಿಯಂತ್ರವೂ ದಿನವೊಂದಕ್ಕೆ 1,000 ಟನ್ನು ಕಬ್ಬನ್ನು ಕಡಿಯುವ ಸಾಮರ್ಥ್ಯ ಹೊಂದಿದೆ ಎನ್ನಲಾಗುತ್ತಿದ್ದು, ಕೇವಲ ಮೂರೇ ಯಂತ್ರಗಳು ಚಾಂ. ಷುಗರ್ ಕಾರ್ಖಾನೆಗೆ ಕಬ್ಬು ಕಡಿಯುವ 3500-4000 ಜನ ಕೂಲಿಕಾರರ ಕೈಗಳಿಂದ ಉದ್ಯೋಗವನ್ನು ಕಸಿದುಕೊಳ್ಳುತ್ತಿದೆ. ಹೀಗೆ ರೈತನ ಜತೆ ಕೂಲಿಕಾರರೂ ಅಪಾಯದ ಅಂಚಿನಲ್ಲಿದ್ದಾರೆ.

ರೈತರ ಪಾಲಿಗೆ 'ಚಂಡಿ'ಯಾಗಿರುವ ಚಾಮುಂಡೇಶ್ವರಿ ಸಕ್ಕರೆ ಕಂಪನಿ

ಮಂಡ್ಯ ಜಿಲ್ಲೆಯ ಪ್ರಮುಖ ಸಕ್ಕರೆ ಕಾರ್ಖಾನೆಗಳಲ್ಲಿ ಖಾಸಗಿ ಒಡೆತನದ ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಂಪನಿ ಪ್ರಮುಖವಾದದ್ದು. 70 ರ ದಶಕದಲ್ಲಿ ಆರಂಭವಾದ ಈ ಕಾರ್ಖಾನೆ ಅಂದು ರೈತರಿಂದ ವ್ಯಾಪಕವಾಗಿ ಶೇರುಗಳಿಂದ ಹಣ ಸಂಗ್ರಹ ಮಾಡಿ ಆರಂಭವಾಗಿತ್ತು, ಎಲ್ಲಾ ಶೇರುಗಳನ್ನು ಅವುಗಳ ಮುಖಬೆಲೆಗಿಂತ ಸ್ವಲ್ಪ ಹೆಚ್ಚು ಹಣಕೊಟ್ಟು ಖರೀದಿಸಿ ಈಗ ಯಾವ ಹಿಡಿತವೂ ಇಲ್ಲದೆ ಕಾರ್ಯ ನಿರ್ವಹಿಸುತ್ತಿದೆ. ಸಾರ್ವಜನಿಕರ ಕೈಯಲ್ಲಿ ಶೇರುಗಳಿದ್ದಾಗ ಮತ್ತು ತಾನು ಒಂದು ಮಟ್ಟಕ್ಕೆ ಬೆಳೆಯುವವರೆಗ ಅಷ್ಟೇನು ರೈತವಿರೋಧಿ ಲಾಭಕೋರತನವನ್ನು ತೋರದಿದ್ದ ಕಾರ್ಖಾನೆ ಮಾಲೀಕರು ಈಗ ತಮ್ಮ ನಿಜವಾದ ಬಣ್ಣ ತೋರಿಸಲು ಆರಂಭಿಸಿದ್ದಾರೆ. ಹಾಗಾಗಿ ತಾವು ಅಪಾರ ಲಾಭ ಮಾಡಿಕೊಳ್ಳಲು ರೈತನ ಬದುಕನ್ನು ಕಬ್ಬಿನ ಜಲ್ಲೆಯಂತೆ ಹಿಂಡಿ ರಸ ತೆಗೆಯುತ್ತಿದ್ದಾರೆ. ಮಾಲೀಕರ ಲಾಭಕೋರತನ ಮತ್ತು ಸರ್ಕಾರದ ನೀತಿಗಳಿಂದ ಸಕ್ಕರೆ ಉದ್ಯಮ ಸಿಕ್ಕಿದ ಕಷ್ಟಗಳೆರಡಕ್ಕೂ ರೈತರು ಬೆಲೆ ತೆರುವಂತಾಗಿದೆ.

ಎಷ್ಟಾದರೂ ಕಬ್ಬು ಬೆಳೆಯರಿ ನಾವಿದ್ದೇವೆ

ಈ ಕಾರ್ಖಾನೆ ಸುಮಾರು ವಾರ್ಷಿಕ ನಾಲ್ಕು ಲಕ್ಷ ಟನ್ನು ಕಬ್ಬನ್ನರೆಯುವ ಸಾಮರ್ಥ್ಯದಿಂದಾರಂಭಿಸಿ ಈಗ ಹತ್ತು ಲಕ್ಷ ಟನ್ನುಗಳನ್ನರೆಯುವಷ್ಟು ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿದೆ. ಕಾರ್ಖಾನೆ ವ್ಯಾಪ್ತಿಯಲ್ಲಿ ಸುಮಾರು ಈಗ 40 ಸಾವಿರ ಎಕರೆ ಪ್ರದೇಶದಲ್ಲಿ ಕಬ್ಬನ್ನು ಬೆಳೆಯಲಾಗುತ್ತಿದೆ. ಹತ್ತು ವರ್ಷಗಳ ಹಿಂದೆ ಸುಮಾರು 15-20 ಸಾವಿರ ಪ್ರದೇಶಗಳಲ್ಲಷ್ಟೇ ಕಬ್ಬನ್ನು ಬೆಳೆಯಲಾಗುತ್ತಿತ್ತು. ಆಗ ಕಾರ್ಖಾನೆಗೆ ವರ್ಷಪೂರ್ತಿ ಕಬ್ಬು ಅರೆಯಲು ಸಿಗದಿದ್ದರು ರೈತನ ಮೇಲೆ ಯಾವುದೇ ಒತ್ತಡಗಳಿರಲಿಲ್ಲ. ಹಾಗಾಗಿ ರೈತನನ್ನು ಆಟವಾಡಿಸಲು ಮಾಲಿಕರಿಂದ ಸಾಧ್ಯವಾಗುತ್ತಿರಲಿಲ್ಲ. ಆದರೆ ತನಗಿರುವ ಪ್ರಚಾರ ಸಾಮರ್ಥ್ಯದಿಂದ ರೈತರು ವಿಪರೀತ ಕಬ್ಬು ಬೆಳೆಯುವಂತೆ ಉತ್ತೇಜಿಸಿದರು. ಒಣ ಪ್ರದೇಶದ ರೈತರಿಗೆ ಕೊಳವೆ ಬಾವಿ ಸಾಲ, ಬಿತ್ತನೆ ಸಾಲ ಕೊಟ್ಟು ಕಬ್ಬು ಕೃಷಿ ಕ್ಷೇತ್ರ ವ್ಯಾಪಕವಾಗಿ ವಿಸ್ತಾರವಾಗುವಂತೆ ನೋಡಿಕೊಳ್ಳಲಾಯ್ತು. ಮತ್ತಷ್ಟು - ಇನ್ನಷ್ಟು ರೈತರು ಕಬ್ಬು ಬೆಳೆಯಲು ಆರಂಭಿಸಿದಾಗ ಕಾರ್ಖಾನೆಯವರಿಗೆ ಸುಗ್ಗಿಯೋ ಸುಗ್ಗಿ.

ರೈತರಲ್ಲಿ ಹೆಚ್ಚಿದ ಸ್ಪರ್ಧೆ

ಕಬ್ಬನ್ನು ವಿಪರೀತ ಬೆಳೆಯಲು ಆರಂಭಿಸಿದ ಮೇಲೆ ಕಬ್ಬನ್ನು ನೊಂದಾಯಿಸಿ ಕಾರ್ಖಾನೆಗೆ ಸರಬರಾಜು ಮಾಡಲು ರೈತರು ಸ್ಪರ್ಧಿಸುವಂತಾಯಿತು. ರೈತನ ಮನೆಯ ಹತ್ತಿರ ಬರುತ್ತಿದ್ದ ಕಾರ್ಖಾನೆಯವರ ಹತ್ತಿರ ರೈತರೇ ಹೋಗಿ ಮುಗಿ ಬಿದ್ದರು. ಹಾಗಾಗಿ ರೈತರು ತಮ್ಮ ಸಮಸ್ಯೆಗಳು ಬೆಲೆಯ ಬಗ್ಗೆ ಗಮನ ನೀಡುವುದರ ಬದಲು ಮತ್ತಷ್ಟು ಕಬ್ಬು ನೆಟ್ಟು ಬರೀ ಕನಸು ಕಂಡರು.

ಈ ರೀತಿ ರೈತರ ದೌರ್ಬಲ್ಯವನ್ನು ಬಳಸಿಕೊಂಡು ಕೊಬ್ಬಿದ ಕಾರ್ಖಾನೆಯವರು ಈಗ ತಮಗೆ ಬೇಕಾದಷ್ಟು ಕಬ್ಬು ಸಿಗುವುದರಿಂದ ಮತ್ತು ಕಾರ್ಖಾನೆಯ ಮೇಲೆ ಸಾರ್ವಜನಿಕರಿಗೆ ಯಾವುದೇ ಹಿಡಿತವಿಲ್ಲದಿರುವುದರಿಂದ ಎಷ್ಟು ಸಾಧ್ಯವೋ ಅಷ್ಟು ಲಾಭ ಮಾಡಿಕೊಳ್ಳಲು ಹವಣಿಸುತ್ತಿದ್ದಾರೆ. ಇದಕ್ಕಾಗಿ ರೈತರ ಮೇಲೆ ನಿರ್ಬಂಧಗಳ, ಶರತ್ತುಗಳ ಮಳೆಯನ್ನೇ ಸುರಿಸುತ್ತಿದ್ದಾರೆ.

ಹೊಸ ತಳಿಗಳನ್ನೇ ನೆಡಬೇಕು

ಇದು ಕಾರ್ಖಾನೆಯ ಅತ್ಯಂತ ಹೀನ ಶರತ್ತು. ಇಳುವರಿ ಹೆಚ್ಚಿಸಲು ತಾವೇ ತಂದು ರೈತರಿಂದ ಬೆಳೆಸಿದ್ದ ಬಿಳಿ ಮತ್ತು ಕೆಂಪು ಕಬ್ಬನ್ನು ರೈತರು ವ್ಯಾಪಕವಾಗಿ ಬೆಳೆದರು, ಇದರಿಂದ ರೈತರಿಗೂ ಪ್ರಯೋಜನವಾಗಿತ್ತು. ಬಿಳಿ ಕಬ್ಬು ಎಕರೆಗೆ ಸುಮಾರು 80 ಟನ್ನುಗಳಷ್ಟು ಇಳುವರಿ ಬರುತ್ತದೆ. ಹಾಗಾಗಿ ಇದು ರೈತನಿಗೆ ಹೆಚ್ಚು ಲಾಭದಾಯಕ ಮತ್ತು ಅಸಮರ್ಪಕ ನೀರಾವರಿ ಸೌಲಭ್ಯದಲ್ಲಿ ಹಾಗೂ ಜೌಗು ಭೂಮಿಯಲ್ಲಿ ಉತ್ಕೃಷ್ಟವಾಗಿ ಬೆಳೆಯುವ ಬೆಳೆ. ಆದರೆ ಸಕ್ಕರೆ ಪ್ರಮಾಣ ತುಸು ಕಮ್ಮಿಯೇ ಅಂದರೆ ಶೇ 8-10 ರಷ್ಟು. ಈಗ ಕಾರ್ಖಾನೆಯವರಿಗೆ ಈ ಕಬ್ಬು ಅಗತ್ಯವಿಲ್ಲ, ಏಕೆಂದರೆ ತಮಗೆ ಹೆಚ್ಚೇನು ಲಾಭದಾಯಕವಲ್ಲದ, ರೈತನಿಗೆ ಸಹಾಯಕವಾದ ಇದು ಎಷ್ಟು ಬೇಕಾದರೂ ಸಿಗುತ್ತದೆ. ಆದ್ದರಿಂದ ಅವರಿಗೀಗ ಶೇ 14-16 ರಷ್ಟು ಸಕ್ಕರೆ ಇಳುವರಿ ಬರುವ ಹೊಸ ತಳಿಗಳಾದ CO 86 032, KHS 3296, CO2/29, COUC 2/22, 8371, 2/48 ತಳಿಗಳನ್ನೇ ಬೆಳೆಯಬೇಕು. ತಪ್ಪಿದಲ್ಲಿ ಕಬ್ಬನ್ನು ಕಾರ್ಖಾನೆಗೆ ಸರಬರಾಜು ಮಾಡಿಕೊಳ್ಳುವುದಿಲ್ಲ ಎಂಬ ಬೆದರಿಕೆ. ಆದರೆ ಈ ತಳಿಗಳು ಎಷ್ಟೇ ಉತ್ತಮವಾಗಿ ವ್ಯವಸಾಯ ಮಾಡಿದರೂ ಎಕರೆಗೆ 25-30 ಟನ್ನುಗಳು ಮಾತ್ರ ಇಳುವರಿ, ಅದೂ ಸಹ ನಿಯಮಿತ ನೀರಾವರಿ ಸೌಲಭ್ಯವಿದ್ದು, ಗೆದ್ದಲು ಮಣ್ಣಿನಲ್ಲಿ ಮಾತ್ರ. ಆದರೆ ಈ ಪ್ರದೇಶದ ಬಹುಪಾಲು ಭೂಮಿ ಜೌಗು ಹಾಗೂ ಅನಿಯಮಿತ ನೀರಾವರಿ ಸೌಲಭ್ಯದಿಂದ ಕೂಡಿದೆ. ಹಾಗಾಗಿ ಇದು ರೈತನಿಗೆ ತುಂಬಾ ಹಾನಿಕರ. ಆದರೆ ಇಷ್ಟೊಂದು ಕಡಿಮೆ ಇಳುವರಿ ಬಂದು ಉತ್ತಮ ಸಕ್ಕರೆ ಇಳುವರಿ ಬರುವ ಕಬ್ಬಿಗೂ ವಿಶೇಷ, ಹೆಚ್ಚು ಬೆಲೆ ಕೊಡುವ ಮಾತನ್ನಂತೂ ಕಾರ್ಖಾನೆಯವರು ತಪ್ಪಿಯೂ ಆಡುವುದಿಲ್ಲ. ಮತ್ತೆ ಕೃಷಿ ಇಲಾಖೆಯೂ ಸಹ ಈ ಪ್ರದೇಶಕ್ಕೆ ಮೇಲ್ಕಂಡ ತಳಿಗಳು ಸೂಕ್ತವಲ್ಲವೆಂದು ತಿಳಿಸಿದ್ದರೂ ಸಹ ರೈತರ ಮೇಲೆ ಒತ್ತಡ ಹೇರುತ್ತಲೇ ಇದ್ದಾರೆ. ಮುಂದೆ ಯಾವ ತಳಿಗಳು ಕಾದಿದೆಯೋ?

ಕೂಳೆ ಬೆಳೆ ಬೆಳೆಯಬೇಡಿರಿ

ಇದು ಮತ್ತೊಂದು ಹೀನ ಶರತ್ತು. ರೈತನಿಗೆ ಸ್ವಲ್ಪವಾದರೂ ಲಾಭ ಸಿಗುವುದಿದ್ದರೆ ಅದು ಕೂಳೆ ಬೆಳೆಯಿಂದ ಮಾತ್ರ. ಏಕೆಂದರೆ ಮೊದಲ ತನಿ ಬೆಳೆಯಲ್ಲಿ ಬರುವಂತೆ ಈ ಬೆಳೆಯಲ್ಲಿ ಬಿತ್ತನೆಗೆ ಹಣದ ಖರ್ಚಿಲ್ಲ ಮತ್ತು ಹೆಚ್ಚು ವ್ಯವಸಾಯದ ಅಗತ್ಯವಿಲ್ಲ. ಹಾಗಾಗಿ ರೈತನಿಗೆ ಉತ್ಪಾದನಾ ವೆಚ್ಚ ಕೇವಲ ರಸಗೊಬ್ಬರ, ಒಂದಿಷ್ಟು ಇತರೆ ಖರ್ಚುಗಳು. ಆದರೆ ಈ ಎರಡನೇ ಬೆಳೆಯಲ್ಲಿ ಸಕ್ಕರೆ ಇಳುವರಿ ಕಡಿಮೆ. ಆದ್ದರಿಂದ ಕಾರ್ಖಾನೆಗೆ ಬರುವ ಲಾಭಾಂಶ ಕಡಿಮೆಯಾಗುತ್ತದೆ. ಹಾಗಾಗಿ ಸದಾ ಲಾಭಕ್ಕೆ ಹಲ್ಲು ಗಿಂಜುವ ಮಾಲಿಕರು ತಮ್ಮ ಲಾಭವನ್ನೆಚ್ಚಿಸಿಕೊಳ್ಳಲು ಹೂಡುವ ತಂತ್ರವೇನೆಂದರೆ ಒಂದಕ್ಕಿಂತ ಹೆಚ್ಚುವರಿ ಕೂಳೆ ಬೆಳೆ ಬೆಳೆದರೆ ನಿಮ್ಮ ಕಬ್ಬನ್ನು ಸರಬರಾಜು ಮಾಡಿಕೊಳ್ಳುವುದಿಲ್ಲ. ಇದು ರೈತರನ್ನು ಮತ್ತಷ್ಟು ಕೂಳೆ ಮಾಡುವ ಪಿತೂರಿ.

ನಾನೊಪ್ಪಿಗೆ ನೀತಿ ಹಗಲು ದರೋಡೆ

ಇದೊಂದು ಹಗಲು ದರೋಡೆ ಕ್ರಮ. ಕಾರ್ಖಾನೆಯವರು ತಮಗೆ ಅಗತ್ಯವಿರುವುದಕ್ಕಿಂತ ಕಡಿಮೆ ಕಬ್ಬನ್ನು ಸರಬರಾಜು ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿರುತ್ತಾರೆ. ಇದನ್ನು 'ಒಪ್ಪಿಗೆ' ಎನ್ನುತ್ತಾರೆ. ಹಾಗಾಗಿ ನೊಂದಾಯಿಸಿಕೊಳ್ಳಲು ಆಗದೇಯಿದ್ದ ಬೆಳೆಗಾರ 'ನೊನೊಪ್ಪಿಗೆ' ನೀತಿಯಡಿ ಬರುತ್ತಾನೆ. ಈತನ ಕಬ್ಬನ್ನು ಸರಬರಾಜು ಮಾಡಿಕೊಳ್ಳಬೇಕೆಂದು ನಿರ್ಬಂಧವೇನೂ ಇರುವುದಿಲ್ಲ. ಇದರಿಂದ ರೈತನ ಅಸಹಾಯಕತೆಯನ್ನು ಬಳಸಿ ತಮಗಿಷ್ಟ ಬಂದ ಬೆಲೆಗೆ ರೈತ ಕಬ್ಬನ್ನು ಸರಬರಾಜು ಮಾಡಲು ಒತ್ತಡ ತಂದು ಕೆಲವೊಮ್ಮೆ 100-200 ರೂಗಳಷ್ಟು ಕಡಿಮೆ ಬೆಲೆಗೆ ಕೊಂಡುಕೊಂಡು ಅಪಾರ ಲಾಭ ಮಾಡುತ್ತಾರೆ. ರೈತ ವರ್ಷಪೂರ್ತಿ ಹಾಕಿದ ಶ್ರಮದ ಲಾಭ ಕಾರ್ಖಾನೆ ಮಾಲಿಕನದೇ ಆಗುತ್ತದೆ.

ಲಾಭಾಂಶವಿರಲಿ ಬಾಕಿಯನ್ನೂ ಕೊಡರು

ಚಾಮುಂಡೇಶ್ವರಿ ಷುಗರ್‌ನಷ್ಟೇ ಸಾಮರ್ಥ್ಯದ ಮೈಸುಗರ್ 20 ಕೋಟಿ ರೂ. ಲಾಭ ಮಾಡಿ ರೈತರಿಗೆ ಟನ್ನೊಂದಕ್ಕೆ 40 ರೂ. ಲಾಭಾಂಶ ಕೊಡುತ್ತದೆ. ಅಷ್ಟೇ ಲಾಭದ ಚಾಮುಂಡೇಶ್ವರಿ ಷುಗರ್ ಪ್ರತಿಟನ್ನಿಗೆ ನೀಡಬೇಕಾದ ಬಾಕಿ 125 ರೂಗಳನ್ನು ಸರಿಯಾದ ಸಮಯಕ್ಕೆ ನೀಡದೆ ಅಲೆಸುತ್ತದೆ. ರೈತರಿಗೆ ತುರ್ತಾಗಿ ಹಣದ ಅವಶ್ಯಕತೆಯಿರುವುದನ್ನು ಗಮನಿಸಿ 125 ರೂ.ಗಳಿಗೆ ಬದಲಾಗಿ 50-75 ರೂ.ಗಳ ದರದಲ್ಲಿ ಏಜೆಂಟರ ಮೂಲಕ ಹಣ ಪಾವತಿಸಿ, ಬಾಕಿ ಹಣದ ದಾಖಲಾತಿಗಳನ್ನು ಖರೀದಿಸಿ ರೈತರಿಗೆ ನಾಮ ಹಾಕುತ್ತದೆ. ರೈತರು ಕೇಳಿದರೆ ಹಣವಿಲ್ಲವೆಂದು ಹೇಳುವ ಮಾಲಿಕ ಬೆಂಗಳೂರಿನಲ್ಲಿ ವ್ಯಾಪಕವಾಗಿ ಕಂಪನಿ ಹೆಸರಿನಲ್ಲಿ ನಿವೇಶನಗಳನ್ನು ಕೊಳ್ಳಲು ಕೋಟ್ಯಂತರ ರೂ. ವಿನಿಯೋಗಿಸುತ್ತಿದ್ದಾರೆ ಎಂಬ ವಿಚಾರವಿದೆ.

ಕಬ್ಬು ಸರಬರಾಜು ಶ್ರೀಮಂತರಿಂದಲೇ


ಕಾರ್ಖಾನೆಗೆ ಕಬ್ಬನ್ನು ಪ್ರಮುಖವಾಗಿ ಸರಬರಾಜು ಮಾಡುವುದು ಎತ್ತಿನ ಗಾಡಿ-ಟ್ರಾಕ್ಟರ್-ಲಾರಿಗಳಿಂದ. ಆದರೆ ಕಾರ್ಖಾನೆಯವರು ಈಗ ಟ್ರಾಕ್ಟರ್ ಮತ್ತು ಲಾರಿಗಳಿಂದ ಮಾತ್ರ ಕಬ್ಬನ್ನು ಸರಬರಾಜು ಮಾಡಿಕೊಳ್ಳಲು ತೀರ್ಮಾನಿಸಿದ್ದಾರೆ, ಕಾರಣ ಟ್ರಾಕ್ಟರ್-ಲಾರೀಮಾಲೀಕರ ಲಾಬಿ. ಇದರಿಂದ ಎತ್ತಿನ ಗಾಡಿಯ ಕೂಲಿಯನ್ನೇ ನಂಬಿ ಬದುಕುತ್ತಿರುವ ಒಂದು ಸಾವಿರಕ್ಕೂ ಹೆಚ್ಚು ಕುಟುಂಬಗಳ ಭವಿಷ್ಯ ಲಾರಿ-ಟ್ರಾಕ್ಟರ್‌ಗಳ ಚಕ್ರಕ್ಕೆ ಸಿಕ್ಕಿ ಸಮಾಧಿಯಾಗುತ್ತದೆ.

ರೈತರು-ಕಾರ್ಮಿಕರು ವಿರೋಧಿಗಳು

ರೈತರು ತಮ್ಮ ಬೇಡಿಕೆಗಳನ್ನು ಕೇಳಿದಾಗಲೆಲ್ಲಾ ರೈತರಿಗೆ ತೋರಿಸುವುದು ಕಾರ್ಮಿಕರನ್ನು. ಕಾರ್ಮಿಕರಿಗೆ ಬೋನಸ್ ಕೊಟ್ಟಿದ್ದೇವೆ, ಸಂಬಳ ಹೆಚ್ಚು ಕೇಳುತ್ತಿದ್ದಾರೆ, ಇತರ ಸೌಲಭ್ಯಗಳನ್ನು ಕೇಳುತ್ತಿದ್ದಾರೆ ಹಾಗಾಗಿ ನಿಮ್ಮ ವಿರೋಧಿಗಳು ಕಾರ್ಮಿಕರು ಎಂದು ರೈತರಿಗೆ ಹೇಳುವುದು. ಕಾರ್ಮಿಕರೇನಾದರೂ ತಮ್ಮ ಬೇಡಿಕೆಗಳನ್ನೆತ್ತಿದರೆ ರೈತರನ್ನು ತೋರಿಸುತ್ತಾರೆ. ಹೀಗೆ ಕಾರ್ಮಿಕರಿಗೆ ಬೋನಸ್ ನೀಡಲು ಸಿಐಟಿಯು ನೇತೃತ್ವದಲ್ಲಿ ಉಪವಾಸ ಸತ್ಯಾಗ್ರಹ ಇದಕ್ಕೆ ಕಾರ್ಮಿಕರ ವಜಾದಂತಹ ಕ್ರಮಗಳನ್ನೇ ಎದುರಿಸಬೇಕಾಯ್ತು. ಹೀಗೆ ಪ್ರತಿ ಸಂದರ್ಭದಲ್ಲೂ ರೈತರನ್ನು ಕಾರ್ಮಿಕರ ವಿರುದ್ಧ-ಕಾರ್ಮಿಕರನ್ನು ರೈತರ ವಿರುದ್ಧ ಎತ್ತಿಕಟ್ಟುತ್ತಾ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾರೆ.

ಜುಲೈ 16 ರಂದು ಕಾರ್ಖಾನೆ ಮುತ್ತಿಗೆ

ಈ ಎಲ್ಲಾ ಸಮಸ್ಯೆಗಳ ವಿರುದ್ಧ ಅನೇಕ ಸಂಘಟನೆಗಳು, ರಾಜಕಾರಣಿಗಳು ಚಳುವಳಿ ನಡೆಸಿದ್ದಾರೆ, ಕೆಲವೋ ಕೃಪಾಪೋಷಿತ ನಾಟಕ ಮಂಡಳಿಗಳು ಇನ್ನೂ ಕೆಲವು ಎಂಜಲು ಕಾಸಿಗೆ ಬಾಯಿ ಬಿಡುವವರು. ಹಾಗಾಗಿ ಈ ನೀತಿಗಳ ವಿರುದ್ಧ ಸರಿಯಾದ ಚಳುವಳಿ ರೂಪಿಸಲು ತೀರ್ಮಾನಿಸಿ ಕರ್ನಾಟಕ ಪ್ರಾಂತ ರೈತ ಸಂಘ ಮುತುವರ್ಜಿಯಿಂದ ರೈತರ ಸಮಾವೇಶವೊಂದು ನಡೆದಿದೆ ಮತ್ತು ಜುಲೈ 16 ರಂದು ಕಾರ್ಖಾನೆಗೆ ಮುತ್ತಿಗೆ ಹಾಕಿದ್ದಾರೆ. ○



ಕಬ್ಬನ್ನು ವಿಪರೀತವಾಗಿ ಬೆಳೆಸಲಾರಂಭಿಸಿದಾಗ ರೈತರ ದೌರ್ಬಲ್ಯವನ್ನು ಬಳಸಿಕೊಂಡು ಕೊಬ್ಬಿದ ಈ ಖಾಸಗೀ ಕಾರ್ಖಾನೆಯ ಮಾಲಿಕರು ಲಾಭ ಸೂರೆಗೊಳ್ಳುವ ಪ್ರಯತ್ನದಲ್ಲಿದ್ದಾರೆ, ರೈತರ ಮೇಲೆ ನಿರ್ಬಂಧಗಳ, ಶರತ್ತುಗಳ ಮಳೆಯನ್ನೇ ಸುರಿಸುತ್ತಿದ್ದಾರೆ.

ಹೆಣ್ಣು ಮಗಳೊಬ್ಬಳು ಶಾಲೆ ಕಲಿತ್ರೆ....



ಇಪ್ಪತ್ತನೇ ಶತಮಾನ ಕೊನೆಗೊಳ್ಳುತ್ತಿದ್ದರೂ ಈ 'ರೆ' ಕೇಳಬರುತ್ತಿದೆಯೇ ಎಂದು ನೀವು ಪ್ರಶ್ನಿಸಿಕೊಳ್ಳಬಹುದು. ಒಳ್ಳೆಯ ಶಿಕ್ಷಣ ಪಡೆಯಬೇಕೆಂಬ ತವಕ ಮಾತ್ರ ಎಲ್ಲರ ಹೆಣ್ಣುಮಕ್ಕಳ ಮುಖದಲ್ಲೂ ಇದೆ. ಆದರೆ ಈಗಲೂ ಹೆಣ್ಣು ಮಗಳೊಬ್ಬಳು, ಗ್ರಾಮೀಣ ಪ್ರದೇಶಗಳ ಬಡ ಕುಟುಂಬಗಳ ಹೆಣ್ಣು ಮಕ್ಕಳು ಎದುರಿಸುವ ಸಮಸ್ಯೆಗಳೇನು? ಉತ್ತರಕನ್ನಡ ಜಿಲ್ಲೆಯ ಅತ್ಯಂತ ಕಮ್ಮಿ ಶಾಲೆಗಳಿಂದ, ಅತಿ ದೊಡ್ಡದಾದ ಒಂದು ತಾಲ್ಲೂಕಿನ ಯಮುನಾ ಗಾಂವ್ಕರ್ ಹೇಳುತ್ತಾರೆ ....

ಯಮುನಾ ಗಾಂವ್ಕಾರ್ ಗುಂದ ಜೋಯ್ಡ, ಉತ್ತರ ಕನ್ನಡ

ಅಂದು ನಮ್ಮನೆಯಲ್ಲಿ ಅಜ್ಜಿಯ ಶ್ರಾದ್ಧವಿತ್ತು. ಹೆಂಗಸರು ಕೊನೆಯ ಪಂಕ್ತಿಯಲ್ಲಿ ಊಟಕ್ಕೆ ಕುಳಿತಾಗ ಒಬ್ಬೊಬ್ಬರೇ ಊರಿನ ಅಲ್ಲಲ್ಲಿಯ ಸುದ್ದಿಯ ಬುತ್ತಿ ಬಿಚ್ಚಿದರು. ನನ್ನ ಅವ್ವಕೂಡ ಧ್ವನಿ ಸೇರಿಸಿ "ನೋಡಿ, ಅವನ ಹೆಂಡ್ತಿ ಅಷ್ಟು ಚಿಕ್ಕವಳಿದ್ದಾಗಲೇ ಸತ್ತು ಇನ್ನು ತಿಂಗಳಾಗಿಲ್ಲ. ಅದ್ರೂ ಆತ ಅದೇಗೆ ಮತ್ತೊಂದು ಮದುವೆಯಾದ? ಅದ್ರೆ ಅದೇ ಅವಳು ಬದುಕಿದ್ದು ಆತ ಸತ್ತಿದ್ರೆ ಆ ವಿಧವೆಗೆ ಮರುಮದುವೆ ಮಾಡ್ತಾ ಇದ್ರಾ? ಇಲ್ಲ. ಅದಕ್ಕೆ ಶಾಲೆ ಕಲಿತ್ರೆ ಗಂಡ ಸತ್ರೂ ಒಳ್ಳೆ ಜೀವನ ಮಾಡೋ ಧೈರ್ಯನಾದ್ರೂ ಬರ್ತದೆ. ಬೇಕಾದ್ರೆ ಮರು ಮದುವೆ ಆಗಲೂ ಹಿಂಜರಿಯಲ್ಲ. ಇನ್ನು ಮುಂದೆ ನಾವು ಹೆಂಗಸರಾದ್ರೂ ನಮ್ಮ ಹುಡುಗಿಯರು, ಶಾಲೆ ಕಲಿಯುವವರ ಬಗ್ಗೆ ಇಲ್ಲಸಲ್ಲದ ರೀತಿಯಲ್ಲಿ ಕೀಳಾಗಿ ಮಾತಾಡೋದನ್ನ ನಿಲ್ಲಿಸಬೇಕು" ಅಂತೆಲ್ಲ ಹೇಳ್ತಿರೋದನ್ನ ನಾನು ಕೇಳುತ್ತಿದ್ದಂತೆ ವಿದ್ಯಾಭ್ಯಾಸದ ಗಂಧ ಗಾಳಿಯಿಲ್ಲದ ಇಂಥ ಕೆಲವರಾದರೂ ಓದಿನ ಮಹತ್ವ ಅರಿತಿದ್ದಾರಲ್ಲ, ಆದಾಗ್ಯೂ 'ಹೆಣ್ಣು ಮಕ್ಕಳ ಬುದ್ಧಿ ಮೊಣಕಾಲ ಕೆಳಗೆ' ಅಂತ ಯಾಕೆ ಹೇಳುತ್ತಾರೆ ಎಂದು ಯೋಚಿಸಿದೆ. ಅದಕ್ಕೆ ನಮ್ಮ ಸಮಾಜದ ಒಳ ವ್ಯವಸ್ಥೆಗಳೇ ಕಾರಣ ಇರುತ್ತವೆಂಬುದೇ ನಿಜ. ಇರಲಿ ಹಾಗೆ ನೋಡಿದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ (ಅನಾದಿಕಾಲದಿಂದಲೂ) ಪರಂಪರಾಗತವಾಗಿ ಸಂಪ್ರದಾಯ, ಶಾಸ್ತ್ರ ಮುಂದುವರೆದುಕೊಂಡು ಜನ-ಜೀವನದಲ್ಲಿ ಗಟ್ಟಿಯಾಗಿ ಬೇರು ಬಿಟ್ಟಿದೆ. ಇದರ ಪರಿಣಾಮವು ಹೆಚ್ಚಿನದಾಗಿ ಕೆಳಜಾತಿ ಹಾಗೂ ಮಹಿಳೆಯರ ಮೇಲೆ. ಹೆಣ್ಣು ಮಕ್ಕಳಿಗಂತೂ ಆರ್ಥಿಕ ಅಭದ್ರತೆಯ ಜೊತೆಗೆ ಮೂಢನಂಬಿಕೆ ಹಾಗೂ ಹಳೆಯ ಗೊಡ್ಡು ಸಂಪ್ರದಾಯ ಶಿಕ್ಷಣ ಪಡೆಯುವ ಹಂತದಲ್ಲಿ ಪ್ರಮುಖ ತೊಡಕು.

'ಹಣೆಬರಹ'

ಬೇರೆ ಪ್ರಮುಖ ಜಿಲ್ಲೆಗಳಂತೆ ಈ ಜಿಲ್ಲೆಯಲ್ಲಿ ಕೂಡ ಶೇ 50 ವಿದ್ಯಾರ್ಥಿನಿಯರು ಶಾಲೆ-ಕಾಲೇಜಿಗೆ ಹೋಗುತ್ತಿದ್ದಾರೆ. ಶೈಕ್ಷಣಿಕ ಸೌಲಭ್ಯಗಳಾದ ಹಾಸ್ಟೆಲ್, ಸಾರಿಗೆ-ಸಂಪರ್ಕ ಇತ್ಯಾದಿಗಳು ಯಥೇಚ್ಛವಾಗಿಲ್ಲದ್ದರಿಂದ, ಆರ್ಥಿಕ ಮುಗ್ಗಟ್ಟಿನಿಂದ, ಗಂಡುಮಕ್ಕಳನ್ನು ಓದಿಸುವುದು ಪ್ರಾಮುಖ್ಯವಾದ್ದರಿಂದ, ಎಸ್.ಎಸ್.ಎಲ್.ಸಿ. ಮುಗಿಸುತ್ತಿದ್ದಂತೆ ಮದುವೆ ಮಾಡಿಸುವುದರಿಂದ ವಿದ್ಯಾರ್ಥಿನಿಯರು ವಿದ್ಯೆಗೆ ತಿಲಾಂಜಲಿಯಿತ್ತು 'ಅವಶ್ಯಂ ಅನುಭೋಕ್ತವ್ಯಂ' ಎಂದು ತಮ್ಮ ಪಾಲಿನ ಕಷ್ಟ ಅನುಭವಿಸುವುದು ತಮ್ಮ ಹಣೆಬರಹ ಎಂದು ಭಾವಿಸಿರುವುದರಿಂದಾಗಿ ಡ್ರಾಪ್ ಔಟ್‌ಗಳು ಆಗಿರುವುದನ್ನು ಕಾಣುತ್ತೇವೆ. ಇದು ಜಿಲ್ಲೆಯ, ತಾಲೂಕುಗಳಲ್ಲಿಯೂ ಒಂದೇ ಸಮನಾಗಿರದಿದ್ದರೂ ಸಾಂಪ್ರದಾಯಿಕ ಒಳನೋಟ ಮಾತ್ರ ಎಲ್ಲೆಡೆ ಒಂದೇ ರೀತಿ ಭಾಧಿಸುತ್ತಿದೆ. ಇಲ್ಲಿಯ ಬೇರೆ ಬೇರೆ ಜಾತಿ-ಉಪಜಾತಿಗಳಾದ ಹಾಲಕ್ಕಿ ಒಕ್ಕಲಿಗರು, ನಾಡವರು, ನಾಮದಾರಿಗಳು, ಕೋಮಾರಪಂಥ, ಕೊಂಕಣಮರಾಠ, ಸಿದ್ದಿಜನಾಂಗ, ಕುಣಬಿ, (ಮೊಗೇರ) ಮೊಗವೀರರು, ಅಲ್ಪ ಸಂಖ್ಯಾತ ಮುಸ್ಲಿಂ, ಕ್ರಿಶ್ಚಿಯನ್ ಧರ್ಮದಲ್ಲಿ ಮೂಢನಂಬಿಕೆ, ಉಸಿರುಗಟ್ಟಿಸುವಂಥ ಜಾತಿ ಪದ್ಧತಿ-ಜನರೊಂದಿಗೆ ಬಿಗಿಗಂಟು ಕಟ್ಟಿವೆ. ಕ್ರಿಶ್ಚಿಯನ್ ಹುಡುಗಿಯರಿಗೆ ಸಾಮಾನ್ಯವಾಗಿ ಶಿಕ್ಷಣಕ್ಕೆ ತಡೆಯಿಲ್ಲ.

ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಕುರಿತು ಹಲವರ ಮನೆಗಳಲ್ಲಿ ರಾತ್ರಿ-ಬೆಳಗು ಮಾತಿನ ಕಾಳಗ ನಡೆದದ್ದೂ ಇದೆ. ಕಾರಣವಿಷ್ಟೆ "ಈಕೆ ಕಲಿತ್ರೆ ಮಾಡೋದೇನು? ನೌಕರಿ ಸಿಕ್ತದಾ? ಗಂಡನ ಮನೆ ಪಾತ್ರೆ ತೊಳೆಯೋದು ತಪ್ತದಾ? ಸೇವೆ ಮಾಡೋದು ಇದ್ದೇ ಇದೆ. ಎಸ್.ಎಸ್.ಎಲ್.ಸಿ ನೇ ಹೆಚ್ಚಾಯ್ತು, ಇನ್ನು ಮನೆ ಕೆಲಸ ಕಲೀಲಿ" ಅನ್ನುವವರೊಂದೆಡೆ, 'ಅಯ್ಯಯ್ಯೋ ಶಾಲೆಯಿಂದ ಸೀದಾ ಒಳಗೇ ಬಂದ್ಯಾ? ಮಡಿ, ಮೈಲಿಗೆ ಏನೂ ಗೊತ್ತಿಲ್ಲ ಇವಳಿಗೆ, ಗೋಮಯ ಹಾಕು' ಅನ್ನುವಂಥ ಮಾತುಗಳೂ ಕೇಳಿಬರುವ ಮನೆಗಳು ಹಲವಾರು ಹಳ್ಳಿಗಳಲ್ಲಿವೆ. "ಗಂಡು ಹುಡುಗರ ಹತ್ತಿರ ಕುಳಿತು ಶಾಲೆ ಓದೋ ಈ ಹುಡ್ಗೇರು ನಮ್ಮ ಪ್ರತಿಷ್ಠೆ ಹಾಳು ಮಾಡ್ತಾರೆ. ಅದ್ಕೆ ಮುಂದೆ ಮತ್ತೊಬ್ಬನ್ನ ಕಟ್ಕೊಂಡು ಓಡಿ ಹೋಗ್ತಾರೆ. ಹಾಗಾಗಿ ನಮ್ಮ ಹುಡ್ಗೀನ ನಾನು ಹದ್ದುಬಸ್ತಿನಲ್ಲಿಟ್ಟು ಸಾಕಿ ಮದುವೆ ಮಾಡ್ತೀನಿ" ಅನ್ನುವ ಪಾಲಕ ಮಹಾಶಯರೂ ಅಲ್ಲಲ್ಲಿ ಭೇಟಿಯಾಗುತ್ತಿರುತ್ತಾರೆ. ಮೊದಲೆಲ್ಲ ಅಬ್ಬಬ್ಬ ಅಂದ್ರೆ ಎಸ್.ಎಸ್.ಎಲ್.ಸಿ. ಪರ್ಯಂತ, ಹಾಗೇ ಪಿ.ಯು.ಸಿ. ದಿನಗಳಿದಂತೆ ಡಿಗ್ರಿ ಈ ತರ ಕಲಿಕೆಯ ಒಂದೊಂದು ಮಜಲು ಕೂಡ ಬಡ-ಮಧ್ಯಮ ವರ್ಗದ ವಿದ್ಯಾರ್ಥಿನಿಯರಿಗೆ ಕಟ್ಟಿದ ಮೆಟ್ಟಿಲು.

ಕರಾವಳಿ ತೀರದಲ್ಲಿ 5 ತಾಲೂಕುಗಳೂ, 6 ತಾಲೂಕು ಘಟ್ಟದ ಮೇಲಿನವು ಅಂದರೆ ಒಂದು ರೀತಿಯಲ್ಲಿ ಮಲೆನಾಡ ಸೆರಗಿನಂತೆ. ಹಾಗೇ ಇವುಗಳಲ್ಲೇ ಭೌಗೋಳಿಕವಾಗಿ ಮತ್ತು ಶೈಕ್ಷಣಿಕವಾಗಿ ವ್ಯತ್ಯಾಸಗಳೂ ಹಾಗೂ ಅಸಮಾನತೆ ಇದೆ. ಶಿರಸಿ, ಕಾರವಾರದಂಥ ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ಹಾಗೂ ಭಟ್ಕಳ ಹಳಿಯಾಳ ದಾಂಡೇಲಿಗಳಲ್ಲಿ ಶಿಕ್ಷಣ ವ್ಯವಸ್ಥೆ ಸಾಧಾರಣ ಉತ್ತಮವೆಂದೇ ಹೇಳಬಹುದು. ಆದರೆ ಜಿಲ್ಲೆಯ ಅತ್ಯಂತ ದೊಡ್ಡ ತಾಲೂಕು ಜೋಯ್ಡದಲ್ಲಿ ಅತ್ಯಂತ ಕಡಿಮೆ ಶಾಲೆಗಳು, ಕಾಲೇಜಂತೂ ಇಲ್ಲದ ಪರಿಸ್ಥಿತಿ. ಈ ಎರಡು ವರ್ಷಗಳಲ್ಲಿ ಪದವಿಪೂರ್ವ ಕಾಲೇಜು (ಶೈಕ್ಷಣಿಕ ಮೂಲಭೂತ ಸೌಲಭ್ಯಗಳಿಲ್ಲದ) ಒಂದು ತೆರೆಯಲ್ಪಟ್ಟಿದೆ. ಇಲ್ಲಿ ಎಸ್.ಎಸ್.ಎಲ್.ಸಿ. ಮುಗಿಸಿ ಗೋವಾಕ್ಕೆ ಅಥವಾ ಬೇರೆ ಪ್ರದೇಶದ ಶ್ರೀಮಂತರ, ನೌಕರಸ್ಥರ ಮನೆಗೆಲಸಕ್ಕೆ ಹೋಗುವವರನ್ನು ಕಾಣಬಹುದು. ಮಹಂಡಗೋಡ, ಯಲ್ಲಾಪುರ, ಅಂಕೋಲಾದ ಗ್ರಾಮೀಣ ಹುಡುಗಿಯರನ್ನು ಕೂಡ ಕೆಲಸಕ್ಕೆ ಕಳಿಸುತ್ತಾರೆ.

ಹೆಜ್ಜೆ-ಹೆಜ್ಜೆಗೂ ಸಮಸ್ಯೆ

ಎಸ್.ಎಸ್.ಎಲ್.ಸಿ. ಪರ್ಯಂತದ ಹುಡುಗಿಯರ ಹಾಸ್ಟೆಲ್ ತಾಲೂಕಿಗೊಂದರಂತೆಯೂ, ಎಸ್.ಎಸ್.ಎಲ್.ಸಿ. ನಂತರದ ಹಾಸ್ಟೆಲ್ ಕೇವಲ 4 ಇದ್ದು, ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಶಿಕ್ಷಣಾರ್ಥಿಗಳ ಭರ್ತಿಮಾಡಿಕೊಳ್ಳುವುದರಿಂದ ಆರ್ಥಿಕವಾಗಿ ಹಿಂದುಳಿದ ಅದೆಷ್ಟೋ ವಿದ್ಯಾರ್ಥಿನಿಯರು ಪಾರ್ಟ್ ಟೈಂ ಕೆಲಸ ಮಾಡಿ ಕಾಲೇಜಿಗೆ ಹೋಗುವರು. ಹಳ್ಳಿಯವರಿಗೆ ಹಾಸ್ಟೆಲ್ ಸಿಗಲಾರದೇ ಬೇರೆಯವರ ಮನೆಯಲ್ಲಿ ಉಳಿದು ಶಿಕ್ಷಣ ಪಡೆಯುತ್ತಾರೆ. ಪೇಯಿಂಗ್ ಗೆಸ್ಟ್ ಅಥವಾ ತನ್ನ ಮನೆಯಂತೆ ಕೆಲಸ ಮಾಡಿ ಹೋಗುವ ಮನೆಯಲ್ಲಿ ಅಭ್ಯಾಸಕ್ಕೆ ಸಮಯ ಸಿಗಲಾರದು. ಮನೆಗೆಲಸವೇ ಸಾಕಷ್ಟಿರುವಾಗ 'ಹೋಂ ವರ್ಕ್' ದೂರ ಸರಿಸಿ ದೇಹ ವಿಶ್ರಾಂತಿಗೆ ಪರಿತಪಿಸುತ್ತಿರುತ್ತದೆ. ಇನ್ನು 5-6ಕ್ಕೂ ಹೆಚ್ಚು ಕಿ.ಮಿ. ನಡೆದು ಹೋಗುವೆಡೆ ಹುಡುಗಿಯರ ಪಾಡು ಅಷ್ಟಿಷ್ಟಲ್ಲ....., ಪಡಬಾರದ ಪಾಡು ಪಟ್ಟು ಶಾಲೆಗೆ ಬರುವಷ್ಟರಲ್ಲಿ 'ಹೋಂ ವರ್ಕ್'ಮಾಡಿಲ್ಲ, ಕಡಿಮೆ ಮಾರ್ಕ್ಸ್ ಪಡೆದೆ ಎನ್ನುವ ಶಿಕ್ಷಕರನ್ನೊಳಗೊಂಡು ಓರಗೆಯವರೊಡನೆ ಹೀಯಾಳಿಸಿಕೊಳ್ಳುವ ಈ ರೀತಿ ಕಿರುಕುಳದ ಜೊತೆಗೆ ಬಹುತೇಕ ಶಾಲೆಗಳಲ್ಲಿ ಕುಡಿಯುವ ನೀರಿನ, ಶೌಚಾಲಯದ ಸಮಸ್ಯೆ ಹೀಗೆ ಹೇಳ್ತಾ ಹೋದ್ರೆ ಪ್ರತಿ ಹೆಜ್ಜೆಗೂ ಸಮಸ್ಯೆಯ ಆಗರ. ಯಾವುದನ್ನು ಲೆಕ್ಕಿಸದೇ ಧೈರ್ಯದಿಂದ, ಅಪವಾದಗಳಿಗೆ ಕಿವಿಗೊಡದೇ ಸಾಗಿದ್ರೆ ಎಸ್.ಎಸ್.ಎಲ್.ಸಿ. ಪಿ.ಯು.ಸಿ ದಾಟಬಹುದು. ಇತ್ತೀಚಿಗೆ ಮಧ್ಯಮ ಶ್ರೀಮಂತ ಮನೆತನದವರು ಇಂಜಿನಿಯರ್, ಡಾಕ್ಟರ್, ಲೆಕ್ಚರ್ ಆಗುವುದರತ್ತ ಸಾಗಿದ್ದಾರೆ. ಬೇರೆ ಜಿಲ್ಲೆಯಲ್ಲಿ ವಿದ್ಯಾರ್ಥಿನಿಯರು ಕಲಿಯಲಿಕ್ಕೆ ಹೋಗೋದು/ಅಷ್ಟೆಲ್ಲ ಹಣ ಖರ್ಚು ಮಾಡುವುದು ಅಸಾಧ್ಯವೆಂದು ಉನ್ನತ ವ್ಯಾಸಂಗ ಗಗನಕುಸುಮ ಆಗಿದೆ. ಮತ್ತೊಂದು ವಿಷಯ ಅಂದ್ರೆ ಹೇಗೂ ಮದುವೆಯಾದ ಮೇಲೆ ಈ ವಿದ್ಯೆ ಕೆಲಸಕ್ಕೆ ಬಾರದು. ನೌಕರಿ ಗ್ಯಾರಂಟಿ ಇಲ್ಲ. ಕೆಲವು ಮನೆಗಳಲ್ಲಿ ಮದುವೆ ತರುವಾಯ ನೌಕರಿಗೆ ಆಸ್ಪದವಿರಲಾರದು ಎನ್ನುವುದರಿಂದ ಕಲಿಕೆಯಲ್ಲಿ ಕೆಲವರಿಗೆ ಅಸಡ್ಡೆ ಕೂಡ ಇದೆ. ಆದರೂ ವೈವಾಹಿಕ ಜೀವನದ ಬಗ್ಗೆ ಕನಸುಕಟ್ಟುವ ಅಥವಾ ಜಾತಿ ಭೀತಿ ದಾಟಿ ಪ್ರೇಮಿಸುವುದು, ಸಮಾಜವನ್ನೆದುರಿಸಲಿಕ್ಕಾಗದೇ ಓಡಿಹೋದ, ತಲೆ ಮರೆಸಿಕೊಂಡ, ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಜಿಲ್ಲೆಯಲ್ಲಿ ನೂರಾರು.

ಬಿರುನುಡಿಗಳ ನಡುವೆ

ಇನ್ನು ಪ್ರಗತಿಪರ ವಿಚಾರಗಳು ಅಷ್ಟಾಗಿ ವಿದ್ಯಾರ್ಥಿನಿಯರ ಮನಸ್ಸಿಗೆ ನಾಟಿಲ್ಲ. ಏಕೆಂದರೆ ಬಿ.ಎಸ್.ಸಿ. ಓದುತ್ತಿದ್ದರೂ ಮನೆಗೆ ಬಂದು ಒಪ್ಪತ್ತು ಉಪವಾಸ, ಮಂಗಳಗೌರಿ, ಗಜಗೌರಿ, ವೈಭವಲಕ್ಷ್ಮಿವ್ರತ ಮಾಡುತ್ತಾರೆ. ಇಲ್ಲದಿದ್ರೆ ಮಾಡಿಸುತ್ತಾರೆ. ಈಗೀಗ ಇದು ಎಲ್ಲ ಹಿಂದು ಉಪಜಾತಿಗಳಲ್ಲಿ ಚಾಲ್ತಿಯಲ್ಲಿದೆ. ಪ್ರೌಢಾವಸ್ಥೆಗೆ ಬಂದಾಗಲಂತೂ ಅಯ್ಯಯ್ಯೋ ಈ ಹಾಳುಶಾಸ್ತ್ರವೇ! ಶಾಲೆನೂ ಬೇಡ, ಮನೆನೂ ಬೇಡ ಎನ್ನುವಷ್ಟು ಚಿತ್ರಹಿಂಸೆ.

ಓದುವ ಹಾಗೂ ಶಾಲೆ, ಕಾಲೇಜಿನ ಸಂಗತಿಗಳನ್ನು ಹಂಚಿಕೊಳ್ಳುವ ವಿಷಯದಲ್ಲಿ ತಾರತಮ್ಯತೆ ಇದೆ. ಮನೆಯ ಹೊರ ಜಗುಲಿಯಲ್ಲಿ ಕುಳಿತು ಓದುವ ಬರೆಯುವ ಹಾಗೂ ಎಲ್ಲರೊಂದಿಗೆ ಮಾತಾಡಲು ಆಸ್ಪದವಿಲ್ಲ.

ಹೆಚ್ಚು ಸಮಯವನ್ನು ಅಡಿಗೆ ಮನೆ ಅಥವಾ ಒಳಕೋಣೆಗಳಲ್ಲಿ ಕಳೆಯಬೇಕು. ನಾಲ್ಕು ಜನರ ಮಧ್ಯೆ ಮಾತಾಡಿದರೆ, ರೇಡಿಯೋ, ಟಿ.ವಿ.ನೋಡಿ ತನ್ನ ಅಭಿಪ್ರಾಯ ವ್ಯಕ್ತಪಡಿಸಿದರೆ ರಾಜಕೀಯದ ಬಗ್ಗೆ ಮಾತನಾಡಿದರೆ 'ಓ ಈಕೆ ಗಂಡುಬೀರಿ' ಅಂತ ಬಿರುನುಡಿ ಎಲ್ಲರ ಬಾಯಲ್ಲೂ ಬಂದೇ ಬರುತ್ತೆ ಅಂತಲೂ, ಶಾಲೆ-ಕಾಲೇಜಿಗೆ ಹೋಗಿ ಕಲಿತದ್ದು ಇದೇ ಏನು? ಅಂತ ಮೂದಲಿಸುವರೇ ಜಾಸ್ತಿ ಅಂತ ನಮ್ಮ ಸಂಘಟನೆಯ ಸದಸ್ಯೆಯೋರ್ವಳು ಹೇಳುತ್ತಿದ್ದಳು. ಯಾವುದೇ ವಿದ್ಯಾರ್ಥಿ ಸಂಘದಲ್ಲಿರುವುದಾದ್ರೆ ಆಕೆಯ ಮನೆಯವರು ಯಾವ ರಾಜಕೀಯ ಪಕ್ಷ ಇಷ್ಟಪಡುತ್ತಾರೋ ಅದೇ ವಿಚಾರದ ಸಂಘ ಸೇರಿದರೆ ಸ್ವಲ್ಪ ಸಹಿಸಿಕೊಳ್ಳುತ್ತಾರೆ. ವಿಚಾರ ಒಳ್ಳೆಯದಿದ್ದರೂ ಅಂಥ ಸಂಘಕ್ಕೆ ಹೋದರೆ ಮುಗಿದೇ ಹೋಯ್ತು" ಅಂತ ಕಾಲೇಜು ಹಾಸ್ಟೆಲ್ ವಿದ್ಯಾರ್ಥಿನಿ ಹೇಳಿದರು.

ಇನ್ನು ಕ್ರೀಡೆ-ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವಾಗಲಂತೂ ಪ್ರತಿಭೆ ಬೆಳವಣಿಗೆಯಾಗುವ ಮುನ್ನವೇ ನಿರಾಶೆಹೊಂದಿದವರು ಎಲ್ಲ ತಾಲೂಕಿನಲ್ಲಿಯೂ ಕಾಣಬರುತ್ತಾರೆ. ಗ್ರಾಮೀಣ ಭಾಗದವರಂತೂ ಈ ವಿಷಯದಿಂದ ತುಂಬ ದೂರ. ಕಾರಣವಿಷ್ಟೆ ಅಸಹನೀಯ ಮಾತುಗಳು, ಅಪವಾದ ಹಾಗೂ ಶಾಲೆ ಕಾಲೇಜಿನಲ್ಲಿ ಸೌಲಭ್ಯ, ಪ್ರೋತ್ಸಾಹವಿಲ್ಲದಿರುವುದು. ನಗರದಲ್ಲಿರುವ ವಿದ್ಯಾರ್ಥಿನಿಯರು ರಾಜ್ಯ- ರಾಷ್ಟ್ರಮಟ್ಟದವರೆಗೂ ಭಾಗವಹಿಸಿ-ದಾಖಲೆ ಮಾಡಿದ್ದುಂಟು.

ಚಿಂತೆಯ ಜೋಲು ಮೋರೆಗಳೆಷ್ಟೊ

ಒಂದೆಡೆ ಬಿಡುವಿನ ವೇಳೆಯಲ್ಲಿ ಮನೆ-ಕೊಟ್ಟಿಗೆ ಕೆಲಸ ಮುಗಿಸಿ ಬೇಣದಲ್ಲಿ ದನ ಮೇಯಿಸಿ ಶಾಲೆಗೆ ಹೋಗುವಿಕೆ, ಇನ್ನೊಂದೆಡೆ ಬಸ್‌ನಲ್ಲಿ ಜೋಕಾಲಿ ಹೊಡೆದು ಕಲಿಯಲಿಕ್ಕೆ ಹೋಗುವ ಪರಿಸ್ಥಿತಿ. ಮೀನುಗಾರ, ಹಾಲಕ್ಕಿಗಳು, ಸಿದ್ಧಿ ಜನಾಂಗಗಳಲ್ಲಿ ಹೆಣ್ಣು ಮಕ್ಕಳು ದೈಹಿಕವಾಗಿ ಮಾನಸಿಕವಾಗಿ ಯಾತನೆಗೊಳಗಾದವರನ್ನು, ಎಳೆವಯಸ್ಸಿನಲ್ಲಿ ಕಲಿಕೆ ನಿಲ್ಲಿಸಿದವರನ್ನೂ ಕಾಣಬಹುದು. ಇಷ್ಟೆಲ್ಲ ಇದ್ದಾಗ್ಯೂ ಪರೀಕ್ಷಾ ಫಲಿತಾಂಶದಲ್ಲಿ ಸರಿಸುಮಾರು ವಿದ್ಯಾರ್ಥಿನಿಯರದ್ದು ಮೇಲುಗೈ ಇರುತ್ತದೆ. ಮದುವೆಯಾದ ನಂತರದಲ್ಲಿ ಅಭ್ಯಾಸ ಮುಂದುವರೆಸಿದವರು, 5-6 ತರಗತಿಗೆ ನಿಲ್ಲಿಸಿ ನಂತರ 7,10, ಪಿ.ಯು.ಸಿ. ಓದಿದವರು ತೀರಾ ಕಡಿಮೆ.

ಇವೆಲ್ಲವುಗಳ ಮಧ್ಯೆ ಬಡ ವಿದ್ಯಾರ್ಥಿನಿಯರು ತಾವು ಕೂಡ ಮಧ್ಯಮ-ಶ್ರೀಮಂತ ವಿದ್ಯಾರ್ಥಿನಿಯರ ಹಾಗೆ ಇರಬೇಕೆಂದು ಕನಸುಕಟ್ಟುವ, ಆ ನಿಟ್ಟಿನಲ್ಲಿ ಪ್ರಯತ್ನಿಸುವ, ಇವರು ಬಡವರೆಂದು ಗುರ್ತಿಸಲೂ ಆಗದಷ್ಟು ಹೊಂದಿಕೊಂಡಿರುವುದನ್ನು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ನೋಡುತ್ತೇವೆ. ಕೇವಲ ಬಸ್ ಚಾರ್ಜ್‌ಗೆ ಮಾತ್ರ ಹಣ ತರುವ ಬಡ ವಿದ್ಯಾರ್ಥಿನಿಯರು, ಇನ್ನುಳಿದವರ ಅತಿಯಾದ ಫ್ಯಾಶನ್ ಲೋಕದಲ್ಲಿ ವಿಹಾರ ಮಾಡುವಿಕೆಯಿಂದ ಅದನ್ನು ನೋಡಿಯೇ ರೋಸಿಹೋದವರು ಇದ್ದಾರೆ. ಶ್ರೀಮಂತ ಮನೆತನದ ಹುಡುಗಿಯರು ಹೆಚ್ಚುವರಿ ಹಣ ಪರ್ಸ್‌ನಲ್ಲಿಟ್ಟುಕೊಳ್ಳಲು ಅವರ ಅಣ್ಣಂದಿರು, ಸಂಬಂಧಿಕರು ಕೊಟ್ಟಿರುತ್ತಾರೆ. ಊಟ, ತಿಂಡಿ, ... ಚೆನ್ನಾಗಿರಲು, ಸಿನೆಮಾ.. ಹೀಗೆ ನೂರೆಂಟು ಖರ್ಚಿಗೆ ಹಣ ಇಟ್ಟುಕೊಂಡಿರುತ್ತಾರೆ. ಎರಡೂ ವರ್ಗದ ವಿದ್ಯಾರ್ಥಿನಿಯರಿಗೆ ಆರ್ಥಿಕ ಭದ್ರತೆಯಿರದಿದ್ದರೂ ಶ್ರೀಮಂತ ಕುಟುಂಬದ ಪ್ರತಿಷ್ಠೆ ಅಂತ ನಾನು ಹೈಸ್ಕೂಲ್ ಓದುತ್ತಿದ್ದಾಗ ಯಲ್ಲಾಪುರದ ಶ್ರೀಮಂತರ ಹುಡುಗಿಯೊರ್ವಳು ಹೇಳಿದ್ದು ಇನ್ನೂ ಜ್ಞಾಪಕವಿದೆ.

ಒಟ್ಟಿನಲ್ಲಿ ಒಳ್ಳೆಯ ಶಿಕ್ಷಣ ಪಡೆಯಬೇಕೆಂಬ ಹಂಬಲ- ತವಕ ಮಾತ್ರ ಎಲ್ಲರ ಮುಖದಲ್ಲೂ ಇದೆ. ಮೇಲ್ಜಾತಿಯ ಶ್ರೀಮಂತರು ಹಾಗೂ ಇನ್ನುಳಿದಂತೆ ಎಲ್ಲ ಜಾತಿಗಳ ಆರ್ಥಿಕ ಸಬಲರಿಗೆ ಹುಡುಗಿಯರನ್ನು ಓದಿಸುವುದು ಪ್ರಯಾಸವಾಗದಿದ್ದಾಗ್ಯೂ, ತಮ್ಮ ಇಷ್ಟ-ಕಷ್ಟಗಳ ಅಡಕತ್ತರಿಯ ಮಧ್ಯೆ ಸಿಲುಕಿದ ಬಡ-ಮಧ್ಯಮ ವರ್ಗದ ಹುಡುಗಿಯರಿಗೆ ಶಿಕ್ಷಣದ ಸವಿ ಕೆಲವಾರು ಸಂದರ್ಭದಲ್ಲಿ ಕಹಿಯಾದದ್ದೆ, ಏಕೆಂದರೆ ಅದೆಷ್ಟು ಹುಡುಗಿಯರು ಗುಡ್ಡಗಾಡಿನಲ್ಲಿ ಚಿಮಣಿ ಬೆಳಕು ನೋಡುತ್ತ, ಮೀನುಗಾರರ ಗುಡಿಸಲಲ್ಲಿ, ಹಾಲಕ್ಕಿಗಳ ಜೋಪಡಿಗಳಲ್ಲಿ, ಸಿದ್ಧಿಗಳ ತಾಳೆಹೆಡೆ ಹರಕು ಮುರುಕು ಮನೆಯಲ್ಲಿ, ಸಂಪ್ರದಾಯಸ್ಥರ ಅಡಿಗೆ ಕೋಣೆಯಲ್ಲಿ.. ತಮ್ಮದೇ ಆದ ಸುಂದರ ಶ್ರೀಮಂತರ ಸ್ವಪ್ನ ಕಂಡು ಖುಷಿಪಟ್ಟು ನಿಜದ ಅರಿವಾದೊಡನೆ ಕಂಡ ಸ್ವಪ್ನ ಭಗ್ನಗೊಂಡು ಆಸೆಗಳೆಲ್ಲ ಛಿದ್ರಛಿದ್ರ ವಿಚ್ಛಿದ್ರವಾಗಿ ಹಂದು ಹೋಗುತ್ತಿದ್ದಾವೋ... ಸಮಯ ಕಳೆಯದೇ ದಿನ ದೂಡಲಾರದ ಹೊತ್ತು ಹೋಗದ ಚಿಂತೆಯ ಜೋಲು ಮೋರೆಗಳದೆಷ್ಟೋ....

ಮನೆಗೆಲಸವೇ ಸಾಕಷ್ಟಿರುವಾಗ 'ಹೋಂ ವರ್ಕ್' ದೂರ ಸರಿಸಿ ದೇಹ ವಿಶ್ರಾಂತಿಗೆ ಪರಿತಪಿಸುತ್ತಿರುತ್ತದೆ. ಇನ್ನು ೫-೬ಕ್ಕೂ ಹೆಚ್ಚು ಕಿ.ಮಿ. ನಡೆದು ಹೋಗುವೆಡೆ ಹುಡುಗಿಯರ ಪಾಡು ಅಷ್ಟಿಷ್ಟಲ್ಲ.....ಹೀಗೆ ಹೇಳ್ತಾ ಹೋದ್ರೆ ಪ್ರತಿ ಹೆಜ್ಜೆಯೂ ಸಮಸ್ಯೆಯ ಆಗರ.

ಬಾಗೇಪಲ್ಲಿಯಲ್ಲಿ ಐದು ವರ್ಷಗಳ ಹಿಂದೆ.....

ಐದು ವರ್ಷಗಳ ನಂತರ ಕರ್ನಾಟಕ ವಿಧಾನಸಭೆಗೆ ಮತ್ತೆ ಚುನಾವಣೆಗಳು ನಡೆಯುತ್ತಿವೆ. ಐದು ವರ್ಷಗಳ ಹಿಂದೆ ದುಡಿಯುವ ಜನರ ಪ್ರತಿನಿಧಿಯನ್ನು ಆರಿಸಿದ ಏಕೈಕ ಕ್ಷೇತ್ರ ಬಾಗೇಪಲ್ಲಿಯಲ್ಲಿ ನಡೆದ ರಾಜಕೀಯ ಸಂಘರ್ಷದ ಒಂದು ಚಿತ್ರ-ನಮ್ಮ ವರದಿಗಾರ ಭಾಸ್ಕರ ರೆಡ್ಡಿಯವರಿಂದ

1991ನೇ ವರ್ಷದಿಂದ ಆರ್ಥಿಕ ನೀತಿ ಜಾರಿಯಾದಂದಿನಿಂದ ಇಡೀ ದೇಶ ಹೋರಾಟಗಳಲ್ಲಿ ಮುಳುಗಿಹೋಯಿತು. 1991 ರಲ್ಲಿ ಕೇಂದ್ರದಲ್ಲಿ ಪಿ.ವಿ. ನರಸಿಂಹರಾಯರು ಈ ದೇಶಕ್ಕೆ ಹೊಸ ದಿಕ್ಕನ್ನು ತೋರಿಸುವೆನೆಂದು ಹೇಳಿ ಹೊಸ ಆರ್ಥಿಕ ನೀತಿಯನ್ನು ಅನುಸರಿಸಿದ ವರ್ಷ. ಹೊಸ ಆರ್ಥಿಕ ಸುಧಾರಣೆಗಳಿಂದ ದೇಶದ ಬೃಹತ್ ಸಮಸ್ಯೆಗಳಾದ ನಿರುದ್ಯೋಗ, ಬಡತನದಂತಹ ಹಲವಾರು ಸಮಸ್ಯೆಗಳನ್ನು 5 ವರ್ಷದಲ್ಲಿ ತೊಡೆದು ಹಾಕುವೆವೆಂದು ಹೇಳಿ ಆ ನೀತಿಯನ್ವಯ ಗ್ಯಾಟ್ ಮತ್ತು ಡೆಂಕಲ್ ಒಪ್ಪಂದಗಳನ್ನು ಒಪ್ಪಿಕೊಂಡ ಆ ಸಮಯ ಇಡೀ ದೇಶದಲ್ಲಿ ಯುವಜನರು, ವಿದ್ಯಾರ್ಥಿಗಳು, ಕಾರ್ಮಿಕರು, ರೈತರು, ಕೂಲಿಕಾರರು, ಮಹಿಳೆಯರೆಲ್ಲರು ಹೋರಾಟಕ್ಕೆ ಧುಮುಕಿ ಸರ್ಕಾರದ ನೀತಿಗಳನ್ನು ವಿರೋಧಿಸಿದ ಸಮಯವದು. 5 ವರ್ಷಗಳಲ್ಲೆ ಹೊಸ ಆರ್ಥಿಕ ನೀತಿಯ ಒಳ್ಳೆಯ ಫಲಿತಾಂಶಗಳನ್ನು ನಾವು ಪಡೆಯುತ್ತೇವೆಂದು ದೇಶದಲ್ಲೆಲ್ಲಾ ಬೊಬ್ಬೆ ಇಟ್ಟದ್ದು ಅಂದಿನ ಹಣಕಾಸು ಮಂತ್ರಿಗಳಾದ ಮನಮೋಹನ್ ಸಿಂಗ್‌ರಿಗೆ ಸಲ್ಲುತ್ತದೆ. ವಿಶ್ವ ಬ್ಯಾಂಕಿನಲ್ಲಿ ಆರ್ಥಿಕ ಸಲಹೆಗಾರರಾಗಿದ್ದ ಮನಮೋಹನ್ ಸಿಂಗ್‌ರು ಭಾರತಕ್ಕೆ ವಿಶ್ವ ಬ್ಯಾಂಕ್ ಹೇಳಿ ಮಾಡಿಸಿದಂತಹ ಹಣಕಾಸು ಮಂತ್ರಿಯಾಗಿ ಇಡೀ ಭಾರತವನ್ನು ಬಡತನ ಕೂಪಕ್ಕೆ ತಳ್ಳುವ ಯಶಸ್ವಿ ಪ್ರಯತ್ನ ಮಾಡಿದ ಸಮಯವದು. ಅಷ್ಟೇ ಯಶಸ್ವಿ ಹೋರಾಟಗಳನ್ನು ಮಾಡಿದ ಐತಿಹಾಸಿಕ ಘಟನೆಗಳು ಇತಿಹಾಸದಲ್ಲಿ ಸೇರಿಹೋಗಿವೆ.

ಶಾಸಕರೆಂದರೆ......

ಅದಕ್ಕೆ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರವೂ ಹೊರತಾಗಿಲ್ಲ. ಅತ್ಯಂತ ಯಶಸ್ವಿ ಹೋರಾಟವನ್ನು ಮಾಡಿದ ಘನತೆ ಬಾಗೇಪಲ್ಲಿ ಕ್ಷೇತ್ರದ ಜನತೆಗೆ ಸಲ್ಲುತ್ತದೆ. ರಾಜಕೀಯ ಪ್ರಚಾರಾಂದೋಲನ, ಜಾಥಾಗಳು, ಜೈಲ್ ಭರೋ ಕಾರ್ಯಕ್ರಮಗಳು, ಧರಣಿ ಸತ್ಯಾಗ್ರಹಗಳು ಪಿಕೇಟಿಂಗ್‌ನಂತಹ ಹಲವಾರು ಹೋರಾಟಗಳನ್ನು ನಿರಂತರವಾಗಿ ತೊಡಗಿಸಿಕೊಂಡ ಬಾಗೇಪಲ್ಲಿ ಕ್ಷೇತ್ರದ ಜನತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಗಳಿಂದ ಬೇಸತ್ತಿ ಹೋಗಿದ್ದ ಸಮಯವದು.

ಒಂದು ಕಡೆ ಸರ್ಕಾರಗಳ ನೀತಿಗಳು ಜನರ ಜೀವನವನ್ನು ವಿನಾಶದ ಅಂಚಿಗೆ ತಳ್ಳುವಂತೆ ಮಾಡಿದ್ದರೆ, ಇನ್ನೊಂದು ಕಡೆ 45 ವರ್ಷಗಳಿಂದ ಕ್ಷೇತ್ರದ ಜನತೆಗೆ ಶಾಸಕರೆನ್ನುವವರು ಮರೀಚಿಕೆಯಾಗಿದ್ದರು.

1991 ರ ಚುನಾವಣೆಯ ಮುನ್ನ ಕೇವಲ 15 ದಿವಸಗಳ ಹಿಂದೆ ಜನತಾದಳವಾಗಿದ್ದ ಸಿ. ವೆಂಕಟರಾಯಪ್ಪ ಎಂಬ ಚಿಕ್ಕ ಬಳ್ಳಾಪುರದ ಶಿಕ್ಷಣ ವ್ಯಾಪಾರಸ್ಥರು ಕಾಂಗ್ರೆಸ್ ಟಿಕೆಟ್‌ನೊಂದಿಗೆ ಕಾಂಗ್ರೆಸ್ ಆಗಿ ಪರಿವರ್ತನೆಗೊಂಡು ಬಾಗೇಪಲ್ಲಿ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. ಲಕ್ಷಾಂತರ ರೂಪಾಯಿಗಳ ಹಣದ ಹೊಳೆ, ಸಾವಿರಾರು ಲೀಟರ್‌ನಷ್ಟು ಸಾರಾಯಿಯನ್ನು ಕಾಲುವೆಗಳ ರೂಪದಲ್ಲಿ ಹರಿಸಿ, ಅತ್ಯಲ್ಪ ಮತಗಳ ಅಂತರದಲ್ಲಿ ಗೆದ್ದು ಬಂದರು. ಶಾಸಕರೆಂದರೆ ಜನರಿಗೆ ಸಿಗುವಂತವರಲ್ಲ ಎಂಬುದನ್ನು ಸಾಧಿಸಿ ತೋರಿಸಿದರು. ವರ್ಷಕ್ಕೊಂದು ಬಾರಿ ಬಾಗೇಪಲ್ಲಿಯಲ್ಲಿ ಮಾತ್ರ ಕಾಣಸಿಗುತ್ತಿದ್ದರು. ಸಾಮಾನ್ಯ ಜನರು ಶಾಸಕರನ್ನು ಹುಡುಕಿಕೊಂಡು ಅವರ ಮನೆಗೆ ಹೋದರೆ ಮನೆಯೊಳಗೆ ಹೋಗಲು ಅನುಮತಿ ಚೀಟಿ ಸಿಕ್ಕರೆ ಮಾತ್ರ ಅವರನ್ನು ನೋಡಬಹುದಾಗಿತ್ತು. ಅಂತಹ ಶಾಸಕರು ಅವರು.

ಜನಸಾಮಾನ್ಯರಿಗೆ ಸಿಗದ ಶಾಸಕರು ಒಂದು ಕಡೆಯಾದರೆ, ಇಡೀ ಕ್ಷೇತ್ರ ಹಲವಾರು ಸಮಸ್ಯೆಗಳಲ್ಲಿ ಸಿಲುಕಿಕೊಂಡಿತ್ತು. ಸಂಪೂರ್ಣ ಕೆಟ್ಟು ಹೋದ ರಸ್ತೆಗಳು, ಕುಡಿಯುವ ನೀರಿಲ್ಲದ ಹಳ್ಳಿಗಳು ಭ್ರಷ್ಟಾಚಾರ ತುಂಬಿ ತುಳುಕುವ ಕಛೇರಿಗಳು, ಹಲವಾರು ಹಳ್ಳಿಗಳಿಗೆ ರಸ್ತೆಯ ಸಂಪರ್ಕವೇ ಇಲ್ಲದೇ ಕೊರಗುತ್ತಿದ್ದವು. ಡಾಕ್ಟರ್‌ಗಳೇ ಇಲ್ಲದ ಆಸ್ಪತ್ರೆಗಳು, ಉಪಾಧ್ಯಾಯರಿಲ್ಲದ ಶಾಲೆಗಳು, ಬಸ್ ಸೌಕರ್ಯವಿಲ್ಲದ ಹಲವಾರು ಹಳ್ಳಿಗಳು ಸುಮಾರು 20 ವರ್ಷದ ಹಿಂದಿನ ಬೇಡಿಕೆಗೆ ತಕ್ಕಂತೆ ಹಾಕಿದ ವಿದ್ಯುತ್ ತಂತಿಗಳ ಕಾರ್ಯನಿರ್ವಹಣೆಯಿಂದ ಬೇಸತ್ತ ರೈತರು ಭೂಮಿ, ಮನೆ, ನಿವೇಶನ, ಹಸಿರು ಕಾರ್ಡ್ ಒಂದಲ್ಲ ಎರಡಲ್ಲ ಇನ್ನೂ ಹಲವಾರು ಸೌಲಭ್ಯಗಳಿಂದ ವಂಚಿತರಾದ, ಮಧ್ಯವರ್ತಿಗಳಿಂದ ಬೇಸತ್ತ ಜನರಲ್ಲಿ ಕಾಂಗ್ರೆಸ್ ನ ಮೇಲೆ ಸಂಪೂರ್ಣ ಅತೃಪ್ತಿ ಅಸಮಾಧಾನ ಮೇರೆ ಮೀರಿ ಹೋಗಿತ್ತು. ವರ್ಷಕ್ಕೊಂದು ಬಾರಿ ಮಾತ್ರ ಕಾಣಸಿಗುವ ಶಾಸಕರು, ವಿಧಾನಸಭೆಯಲ್ಲಿ ಅವರ ಭಾಗವಹಿಸುವ ರೀತಿ, ಜನರ ಪರ ದನಿ ಎತ್ತದಿರುವ ರೀತಿ, ಇವೆಲ್ಲವೂ ಕ್ಷೇತ್ರದ ಜನತಗೆ ಅಸಮಾಧಾನವನ್ನು ತಂದಿತ್ತು. ಜಾತಿಯ ಆಧಾರದಲ್ಲಿ ಮತಗಳ ಒಡೆಯುವುದಕ್ಕೆ ಎಲ್ಲಾ ಹುನ್ನಾರ ನಡೆದಿತ್ತು. ಜನರ ನಡುವೆ ಅತೃಪ್ತಿ ಹೆಪ್ಪುಗಟ್ಟಿತ್ತು.

ಇದರ ಜೊತೆಗೆ ಕರ್ನಾಟಕದಲ್ಲಿ 5 ವರ್ಷದಲ್ಲಿ 3 ಜನ ಕಾಂಗ್ರೆಸ್ಸಿನ ಮುಖ್ಯಮಂತ್ರಿಗಳನ್ನು ಕಂಡೆವು. ಕೇವಲ ಅಧಿಕಾರಕ್ಕಾಗಿ ಕಿತ್ತಾಡಿದ್ದು ಬಿಟ್ಟರೆ, ಜನರಿಗಾಗಿ ಜನರ ಪರ ಕೆಲಸ ಮಾಡಿದ್ದು ಕಡಿಮೆ. ಜನರ ಆದಾಯ ಕುಸಿಯಿತು. ಜನರ ಕೊಳ್ಳುವ ಶಕ್ತಿ ಸಂಪೂರ್ಣ ಕುಗ್ಗಿಹೋಯಿತು. ಶ್ರೀ ಸಾಮಾನ್ಯರು ಕೊಳ್ಳುವ ಪ್ರತಿಯೊಂದು ವಸ್ತುವಿನ ಬೆಲೆ ಗಗನಕ್ಕೇರಿತ್ತು. ಇವೆಲ್ಲಾ ಸರ್ಕಾರದ ತಪ್ಪು ಆರ್ಥಿಕ ನೀತಿಗಳ ಫಲ ಎಂದು ಜನರಲ್ಲಿ ಅರಿವು ಮೂಡಿಸುವ ಪ್ರಾಮಾಣಿಕ ಪ್ರಯತ್ನ ನಡೆಸಿದ್ದ ಬಾಗೇಪಲ್ಲಿ ಕ್ಷೇತ್ರದಲ್ಲಿ ಅಂದಿನ ಎಲ್ಲಾ ರಾಜಕೀಯ ಪಕ್ಷಗಳಿಗಿಂತ ಸಿಪಿಐ(ಎಂ) ಮುಂಚೂಣಿಯಲ್ಲಿತ್ತು. ಯಶಸ್ವಿ ಹೋರಾಟಗಳನ್ನು ಮಾಡಿದ ಏಕೈಕ ಪಕ್ಷ ಎಂಬುದಲ್ಲದೇ, ನಿರಂತರವಾಗಿ ಜನರ ಹಲವಾರು ದಿನನಿತ್ಯದ ಸಮಸ್ಯೆಗಳಿಗೆ ಸ್ಪಂದಿಸಿದ ಪಕ್ಷ ಸಿಪಿಐ(ಎಂ) ಮಾತ್ರ. ಪೋಲೀಸ್ ಠಾಣೆಯ ಸಮಸ್ಯೆ ಆಗಬಹುದು, ತಾಲ್ಲೂಕು ಕಛೇರಿಯ ಸಮಸ್ಯೆಗಳಾಗಬಹುದು, ಅಥವಾ ಇನ್ಯಾವುದೇ ಸಮಸ್ಯೆಗಳಾಗಬಹುದು ಅವುಗಳಿಗೆ ನಿರಂತರವಾಗಿ ಸ್ಪಂದಿಸಿದ ಕಾರಣ ಜನರ ಒಲವು ನಿಜವಾಗಿಯೂ ಸಿಪಿಐ(ಎಂ) ಪರವಾಗಿತ್ತೆಂದು 1994 ರ ವಿಧಾನಸಭೆ ಚುನಾವಣೆಗಳು ನಿರೂಪಿಸಿದವು.

ಹಾದಿ ಸುಗಮವಾಗಿರಲಿಲ್ಲ

ಅಷ್ಟು ಮಾತ್ರಕ್ಕೆ ಸಿಪಿಐ(ಎಂ) ನ ಚುನಾವಣೆಯ ಹಾದಿ ಸುಗಮವಾಗಿತ್ತು ಎಂದು ಹೇಳಲಿಕ್ಕಾಗುವುದಿಲ್ಲ. ಅಷ್ಟು ಸುಲಭವಾಗಿರಲಿಲ್ಲ. 1991 ಮತ್ತು ಅದರ ಹಿಂದಿನ ವಿಧಾನ ಸಭೆ ಚುನಾವಣೆಗಳಲ್ಲಿ ಜನತಾದಳದೊಂದಿಗೆ, ಸ್ಥಾನ ಹೊಂದಾಣಿಕೆಯಾಗಿತ್ತು. ಆದರೆ 1994 ರ ಚುನಾವಣೆಗಳಲ್ಲಿ ಜನತಾದಳದ ದುರಹಂಕಾರದಿಂದ ಸ್ಥಾನ ಹೊಂದಾಣಿಕೆ ಸಾಧ್ಯವಾಗಲಿಲ್ಲ. ಆದರೆ ಹಿಂದಿನ ಚುನಾವಣೆಗಳಲ್ಲಿ ಎರಡು ಬಾರಿ ಜನತಾದಳದೊಂದಿಗೆ ಸ್ಥಾನ ಹೊಂದಾಣಿಕೆ ಆದಾಗ ಜನತಾದಳದ ಕಾರ್ಯಕರ್ತರು ಕಾಂಗ್ರೆಸ್ಸಿನ ಪರವಾಗಿ ಕೆಲಸ ಮಾಡಿದ್ದರು. ಇದರಿಂದ ಎರಡು ಬಾರಿಯೂ ಅತ್ಯಲ್ಪ ಮತಗಳ ಅಂತರದಿಂದ ಸೋಲಬೇಕಾಯಿತು. ಆದರೆ 1994 ರಲ್ಲಿ ಹೊಂದಾಣಿಕೆ ಏರ್ಪಡದ ಕಾರಣ ಜನತಾದಳದ ಅಭ್ಯರ್ಥಿಯೂ ಕಣದಲ್ಲಿದ್ದರಿಂದ ಅವರ ಮತಗಳು ಕಾಂಗ್ರೆಸ್ಸಿಗೆ ಹೋಗಲು ಸಾಧ್ಯವಾಗದೇ ಹೋಯಿತು. ತತ್ಪರಿಣಾಮವಾಗಿ ಕೇವಲ ಸಿಪಿಐ(ಎಂ) ಹೋರಾಟದಿಂದಲೇ ಅತ್ಯುತ್ತಮ ಓಟು ಪಡೆಯಲು ಸಾಧ್ಯವಾಯಿತು. ಕಾಂಗ್ರೆಸ್ಸಿಗೆ ಸಿಪಿಐ(ಎಂ) ಮಾತ್ರ ಬದಲಿಯಾಗಿರುತ್ತೆ ಎಂದು ಜನ ಗುರ್ತಿಸಿದರು.

ಕಾಂಗ್ರೆಸ್ ಪಕ್ಷ ಒಬ್ಬ ಹಳೆಯ ತಲೆಮಾರಿನ ಉತ್ತಮ ವ್ಯಕ್ತಿಗೆ ಟಿಕೆಟ್ ನೀಡಿತ್ತು. ಆದರೆ ಕಾಂಗ್ರೆಸ್ಸಿನ ಲೆಕ್ಕಾಚಾರಕ್ಕೆ ಜನ ಸ್ಪಂದಿಸಲಿಲ್ಲ. ಪುಲಗಲ್ ಪದ್ಮನಾಭರಾವ್ ಎಂಬ ಮುದಿ ರಾಯರನ್ನು ಗೆಲ್ಲಿಸಲು ದೆಹಲಿಯ ನರಸಿಂಹರಾಯರೇ ಬರಬೇಕಾಗಿ ಬಂದಿತ್ತು. ಆದರೆ ಹಗರಣಗಳ ರಾಜ ನರಸಿಂಹರಾಯರನ್ನು ಕಂಡರೆ ಜನ ದೂರ ಸಿಡಿಯುತ್ತಿದ್ದರು ಎನ್ನುವುದನ್ನು 1994 ರ ಚುನಾವಣೆಗಳು ನಿರೂಪಿಸಿದವು. ಲಕ್ಷಾಂತರ ರೂಪಾಯಿಗಳನ್ನು ನೀರಿನಂತೆ ಚೆಲ್ಲಿದರು. ಕಾಲುವೆಗಳ ರೂಪದಲ್ಲಿ ಸಾರಾಯಿ ಹರಿಸಿದರು, ಪದ್ಮನಾಭ ರಾಯರ ಒಳ್ಳೆಯತನವನ್ನು ರಾಜಕೀಯಕ್ಕೆ ಬಳಸಿಕೊಳ್ಳಬೇಕೆನ್ನುವ ಕಾಂಗ್ರೆಸ್ಸಿನ ಕುತಂತ್ರದ ಬಗ್ಗೆ ಜನರಿಗೆ ಅರಿವಿತ್ತು.

ಸಿಪಿಐ(ಎಂ) ಜನರಿಗೆ ಇಲ್ಲ ಸಲ್ಲದ ಆಸೆ ಆಮಿಷಗಳನ್ನು ಒಡ್ಡಿ ಅವರಿಂದ ಅಧಿಕಾರ ಪಡೆಯಲಿಲ್ಲ. ತೀರಿಸಲಾರದ ಹಲವಾರು ವಾಗ್ದಾನಗಳನ್ನು ಕೊಟ್ಟು ಅಧಿಕಾರ ಪಡೆಯಲಿಲ್ಲ. ಹಣದ ಹೊಳೆ ಹರಿಸಿ ಜನರಿಂದ ಅಧಿಕಾರ ಪಡೆಯಲಿಲ್ಲ. ಜಾತಿ ಮತಗಳ ಆಧಾರದಲ್ಲಿ ಮತ ಪಡೆದು ಅಧಿಕಾರ ಪಡೆಯಲಿಲ್ಲ. ಯಾವುದೇ ಸಂಕುಚಿತ ಭಾವನೆಗಳನ್ನು ಹರಿಸಿ ಅಧಿಕಾರ ಪಡೆಯಲಿಲ್ಲ. ಪಕ್ಷದ ನೀತಿ ಧೋರಣೆಗಳ ಆಧಾರದಲ್ಲಿ ಮತ ಕೇಳಿ ಪಡೆದದ್ದು ಕಳೆದ ಚುನಾವಣೆಯ ಮೊದಲು ಒಂದೇ ಒಂದು ಹುಸಿ ವಾಗ್ದಾನ ಮಾಡಿರಲಿಲ್ಲ. ದುಡಿಯುವ ಜನತೆಯ ಪರವಾಗಿ ವಿಧಾನ ಸೌಧದಲ್ಲಿಯೂ ದನಿ ಎತ್ತಿ ಹೋರಾಟ ಮಾಡಲು ಅವಕಾಶ ಕೊಡಿ ಎಂದು ಕೇಳಿದ್ದೆವು. ಅದರಂತೆ ಇಂದು ಇಡೀ ಕರ್ನಾಟಕದ ದುಡಿಯುವ ಜನತೆಯ ಪರವಾಗಿ ದನಿ ಎತ್ತುವ ಏಕೈಕ ಶಾಸಕರು ಎಂದು ಗುರ್ತಿಸಲ್ಪಟ್ಟಿದ್ದಾರೆ. 45 ವರ್ಷಗಳ ಕಾಂಗ್ರೆಸ್ ಆಡಳಿತಕ್ಕಿಂತ, ಅಭಿವೃದ್ಧಿಗಿಂತ ಕೇವಲ 5 ವರ್ಷದಲ್ಲಿ ಸಾಧಿಸಿರುವ ಅಭಿವೃದ್ಧಿ ಅತ್ಯುನ್ನತ ಎಂಬುದು ಜನರ ಬಾಯಿಂದಲೇ ಕೇಳಬಹುದಾಗಿದೆ. ಇಂದು ಮತ್ತೆ ಚುನಾವಣೆ ಬಂದಿದೆ. 45 ವರ್ಷಗಳಲ್ಲಿ ಕಾಂಗ್ರೆಸ್ಸಿನ ಶಾಸಕರು ಏನೇನು ಮಾಡಿದ್ದಾರೆ ಎಂದು ಹೇಳಲಿಕ್ಕೆ ಕಾಂಗ್ರೆಸ್ಸಿನ ಹತ್ತಿರ ಏನೂ ಇಲ್ಲ. 5 ವರ್ಷದಿಂದ ಏನೇನು ಆಗಿಲ್ಲ ಎಂದು ಹೇಳುವುದಕ್ಕೆ ಕಾಂಗ್ರೆಸ್ಸಿಗೂ ಸಾಧ್ಯವಿಲ್ಲದ ಪರಿಸ್ಥಿತಿ ಕ್ಷೇತ್ರದಲ್ಲಿ ನಿರ್ಮಾಣವಾಗಿದೆ. ○



ಕಳೆದ ಚುನಾವಣೆಯ ಮೊದಲು ಒಂದೇ ಒಂದು ಹುಸಿ ವಾಗ್ದಾನ ಮಾಡಿರಲಿಲ್ಲ. ದುಡಿಯುವ ಜನತೆಯ ಪರವಾಗಿ ವಿಧಾನ ಸೌಧದಲ್ಲಿಯೂ ದನಿ ಎತ್ತಿ ಹೋರಾಟ ಮಾಡಲು ಅವಕಾಶ ಕೊಡಿ ಎಂದು ಕೇಳಿದ್ದೆವು. ಅದರಂತೆ ಇಂದು ಇಡೀ ಕರ್ನಾಟಕದ ದುಡಿಯುವ ಜನತೆಯ ಪರವಾಗಿ ದನಿ ಎತ್ತುವ ಏಕೈಕ ಶಾಸಕರು ಎಂದು ಗುರ್ತಿಸಲ್ಪಟ್ಟಿದ್ದಾರೆ.

ಇ.ಎಂ.ಎಸ್. ಭವನ ನಿಧಿ



ಹಿಂದಿನ ಮೊತ್ತ ರೂ. 14,09,567.50

ಎಸ್.ಎಫ್.ಐ ದ.ಕ ಮತ್ತು ಉಡುಪಿ ಜಿಲ್ಲಾ ಸಮಿತಿ
250-00
ಸ್ಟೀವನ್ ವಾಜ್ ಸಂಗ್ರಹ
ಪ್ರಿಯದರ್ಶಿನಿ
75-00
ಎಸ್.ಎಫ್.ಐ. ಬಿಜಾಪುರ ಜಿಲ್ಲಾ ಸಮಿತಿ
50-00
ಎಸ್.ಎಫ್.ಐ. ದಾವಣಗೆರೆ ತಾಲ್ಲೂಕು ಸಮಿತಿ
50-00
ಸಿ.ಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ
2000-00
ಬಿಇಎಂಎಲ್ ಸಂಗಾತಿಗಳು ಸಂಗ್ರಹ
ವರ್ತೂರು ವಲಯ ಸಮಿತಿ ಮೂಲಕ-
ಸಿಪಿಐ(ಎಂ) ಉತ್ತರ ಕನ್ನಡ ಜಿಲ್ಲಾ ಸಮಿತಿ
ಕ್ಯಾಂಕೋ ಟೈಲ್ಸ್ ಕಾಸರಕೋಡು ಕಾರ್ಮಿಕ ಕಾರ್ಮಿಕರಿಂದ 1690-00

ಕಾಂ. ವಿಮಲ - ರಾಜ್ಯ ಸಮಿತಿ ಸದಸ್ಯರು ಸಂಗ್ರಹ 1700-00
ಗೇಲ್ಸ್ ಮತ್ತು ಪಿನ್ಯಾನ್ಸ್ ಎಂಪ್ಲಾಯಿಸ್ ಯೂನಿಯನ್
2300-00
ವೈಟ್ ಫೀಲ್ಡ್- ಬೆಂಗಳೂರು
ಸಿಪಿಐ(ಎಂ) ಬೆಂಗಳೂರು - ಕುಂಬಳಗೋಡು
850-00
ವಲಯ ಸಮಿತಿ
ಸಿಪಿಐ(ಎಂ) ತುಮಕೂರು ಜಿಲ್ಲಾ ಪ್ರಾದೇಶಿಕ ಸಮಿತಿ 300-00
2430-00
ಸಿಪಿಐ(ಎಂ) ಬಳ್ಳಾರಿ ತಾಲ್ಲೂಕು ಸಮಿತಿ
200-00
ಎಂ.ಎಸ್. ಪ್ರಸನ್ನಕುಮಾರ್
250-00
ಗೋಪಿನಾಥ್
100-00
ಗೌರಮ್ಮ
100-00
ಕೋದಂಡರಾಮನ್
100-00
ಸನ್ನಿ ಸ್ಟೋರ್ಸ್
615-00
ಉದಯನಗರ್ ಶಾಖೆ
2561-00
ಇಂದಿರಾ ನಗರ ಶಾಖೆ
500-00
ಶ್ರೀನಿವಾಸ ನಾಯರ್
ವಿಜಿನಪುರ ಸಂಗ್ರಹ
50-00
ಮೈಕೆಲ್
50-00
ಚಕ್ರಪಾಣಿ
51-00
ಶ್ರೀಧರನ್

50-00
ಕೃಷ್ಣಮೂರ್ತಿ
100-00
ಕೃಷ್ಣಕುಟ್ಟಿ
30-00
ರಘುನಾಥನ್
100-00
ವಿಳವನಾಥನ್
50-00
ರವಿಂದ್ರನ್
101-00
ಸಿ.ಪಿ.ಉನ್ನಿ
50-00
ಪಿ.ಎಚ್. ಭಕ್ಷ್
25-00
ಟಿ.ಪಿ. ಭಾಸ್ಕರನ್
25-00
ವಿ.ಗೋಪಾಲನ್
25-00
ರಾಧಕೃಷ್ಣ
50-00
ಅಚ್ಯುತನ್
50-00
ಜಯರಾಜನ್
501-00
ಅರ್ಜುನ್
250-00
ಸದಾನಂದನ್
51-00
ವಿಜಯನ್
30-00
ಕುಂಜನ್ ನಾಯರ್
30.00
ವಿಜಯಕುಮಾರ್

ಒಟ್ಟು ರೂ. 14,27,357.50

ವಿದೇಶಿ ಬ.ಕ.ಗಳೊಂದಿಗೆ 'ಸ್ವದೇಶಿ' ಬಿಜೆಪಿ ಶಾಮೀಲು

ಹಿಮಾಚಲ ಪ್ರದೇಶದಿಂದ ದಮನದ ಇನ್ನೊಂದು ಹೊಲಸು ಮುಖ

ಹಿಮಾಚಲ ಪ್ರದೇಶದ ನಾತ್ಪಾ-ಝಾಕ್ರಿ ವಿದ್ಯುತ್ ನಿಗಮ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿದೇಶಿ ಬಹುರಾಷ್ಟ್ರೀಯ ಕಂಪನಿ(ಬ.ಕ)ಯೊಂದಿಗೆ ಮಾಡಿಕೊಂಡಿರುವ ಒಂದು ಜಂಟಿ ಉದ್ಯಮ-ಒಂದು ದೊಡ್ಡ ಜಲವಿದ್ಯುತ್ ಯೋಜನೆ. ಜೂನ್ 25 ರಂದು ಮಂಗ್ಲಾರ್ ಎಂಬ ಈ ಪ್ರಾಜೆಕ್ಟ್‌ನ ಸೈಟಿನಲ್ಲಿ ಕಾರ್ಮಿಕರ ಮೇಲೆ ಗೋಲೀಬಾರು ನಡೆದು ಒಬ್ಬರು ಸ್ಥಳದಲ್ಲೇ ಸತ್ತಿದ್ದಾರೆ, ಎಂಟು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಗೋಲೀಬಾರು ಮಾಡಿದವರು ರಾಜ್ಯದ ಪೋಲೀಸರಲ್ಲ, ಬಹುರಾಷ್ಟ್ರೀಯ ಕಂಪನಿಯ 'ಭದ್ರತಾ ದಳ' ದವರು - ವಾಸ್ತವವಾಗಿ ಅವರ ಬಾಡಿಗೆ ಗೂಂಡಾಗಳು. ಇದಕ್ಕೆ ಹಿಮಾಚಲ ಪ್ರದೇಶದ ಬಿಜೆಪಿ ಸರಕಾರ, ಪೋಲೀಸರ ಸಕಲ ಸಹಕಾರ! ಹೇಗಿದೆ 'ಸ್ವದೇಶಿ' - ವಿದೇಶಿ ಸೌಹಾರ್ದದ ಈ ಹೊಲಸು ಮುಖ?

ಈ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡುತ್ತಿರುವ 2000 ಕಾರ್ಮಿಕರಲ್ಲಿ 200 ಮಂದಿ ಅಲ್ಲಿನ ಪರಿಸ್ಥಿತಿಗಳಿಂದಾಗಿ ಈಗಾಗಲೇ ಪ್ರಾಣ ಕಳಕೊಂಡಿದ್ದಾರೆ. ಆದ್ದರಿಂದ ತಮ್ಮ ನ್ಯಾಯ ಬೇಡಿಕೆಗಳ ಈಡೇರಿಕೆಗಾಗಿ ಸಿಐಟಿಯು ನೇತೃತ್ವದಲ್ಲಿ ಒಂದು ಸಂಘ ಕಟ್ಟಿಕೊಂಡು ಅವರು ಹಲವು ತಿಂಗಳುಗಳಿಂದ ಚಳುವಳಿ ನಡೆಸುತ್ತಿದ್ದಾರೆ.

ಅತ್ತ ರೈತರದ್ದೂ ಹಲವಾರು ದೂರುಗಳಿವೆ. ಈ ಯೋಜನೆಗಾಗಿ ಅವರಿಂದ ವಶಪಡಿಸಿಕೊಂಡ ಜಮೀನುಗಳಿಗೆ ಸರಿಯಾದ ಪರಿಹಾರವನ್ನು ನೀಡಿಲ್ಲ, ಕೆಲವೆಡೆ ಬೇಕಾಬಿಟ್ಟಿ ವರ್ತನೆ ನಡೆದಿದೆ. ಇದರಿಂದಾಗಿ ರೈತರೂ ಕಿಸಾನ್ ಸಭಾ ನೇತೃತ್ವದಲ್ಲಿ ಕಾರ್ಮಿಕರ ಜತೆ ಹೋರಾಡುತ್ತಿದ್ದಾರೆ.

ಫೆಬ್ರವರಿಯಲ್ಲಿ ಕಾರ್ಮಿಕರು ಮುಷ್ಕರ ನಡೆಸಿದಾಗಲೂ, ನಂತರ ಮಾರ್ಚ್ 12 ರಂದು ರೈತರು ತಮಗೆ ಪರಿಹಾರ ಬೇಕೆಂದು ಚಳುವಳಿ ನಡೆಸಿದಾಗಲೂ ಜಿಲ್ಲಾ ಆಡಳಿತ ದಮನ ಚಕ್ರವನ್ನೇ ಹರಿಯಬಿಟ್ಟಿತು. ಪೋಲೀಸರ ದಬ್ಬಾಳಿಕೆಯನ್ನು ಪ್ರತಿಭಟಿಸಿ ಮಾರ್ಚ್ 16 ರಂದು ಹಿಮಾಚಲ ಪ್ರದೇಶದಾದ್ಯಂತ ಮತ ಪ್ರದರ್ಶನಗಳು ನಡೆದವು. ಮತ್ತೆ ಜೂನ್ 14 ರಂದು 'ನಾತ್ಪಾ-ಝಾಕ್ರಿ ಜಲವಿದ್ಯುತ್ ಯೋಜನೆಯನ್ನು ಉಳಿಸಿ' ದಿನಾಚರಣೆ ನಡೆಸಲಾಯಿತು. ರೈತರು ತಮ್ಮ ಜಮೀನು ಕಳಕೊಂಡು, ಕಾರ್ಮಿಕರು ಅತ್ಯಂತ ದುರ್ಗಮ ಪರಿಸ್ಥಿತಿಗಳಲ್ಲಿ ಶ್ರಮಪಟ್ಟು ಈ ಯೋಜನೆ ನಿರ್ಮಿಸುತ್ತಿದ್ದಾರೆ, ಈ ಕಂಪನಿಯ ಅಧಿಕಾರಿಗಳು, ಬಹುರಾಷ್ಟ್ರೀಯ ಕಂಪನಿಗಳು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂಬ ಸಂಗತಿಯತ್ತ ಗಮನ ಸೆಳೆದರು.

ಪ್ರತಿಯಾಗಿ ಆಡಳಿತದವರು ದಮನ ಹೆಚ್ಚಿಸಿದರು. ಕ್ಯಾಂಟೀನನ್ನು ಮುಚ್ಚಿ ಕಾರ್ಮಿಕರನ್ನು ಉಪವಾಸ ಕೆಡವಿದರು. 1300 ಕಾರ್ಮಿಕರ ಕೂಲಿಯನ್ನು ಕೊಡಲಿಲ್ಲ. 562 ಕಾರ್ಮಿಕರನ್ನು ರಿಟ್ರೆಂಚ್ ಮಾಡಿದರು. ಸಾಲದ್ದಕ್ಕೆ ಮುಂಬೈಯಿಂದ ಖಾಸಗೀ ಭದ್ರತಾ ಏಜೆನ್ಸಿಯ ಹೆಸರಲ್ಲಿ ಗೂಂಡಾಗಳನ್ನು ಕರೆಸಿದರು! ಇದಕ್ಕೆಲ್ಲಾ ಬಿಜೆಪಿ ಆಡಳಿತದ ಸಂಪೂರ್ಣ ರಕ್ಷೆ!

ಈ ಹಿನ್ನೆಲೆಯಲ್ಲಿ ಜೂನ್ 25 ರ ದುಷ್ಟ ಘಟನೆ ನಡೆಯಿತು. ಗನ್ನುಗಳನ್ನು ಕೈಯಲ್ಲಿ ಹಿಡಕೊಂಡ 26 ಮಂದಿ ಕಂಪನಿಯ ವಾಹನದಲ್ಲಿ ಮಂಗ್ಲಾರ್ ಪ್ರಾಜೆಕ್ಟ್ ಸೈಟಿಗೆ ಬಂದರು. ಜತೆಗೆ ಝಾಕ್ರಿಯ ಪೋಲೀಸ್ ಅಧಿಕಾರಿಯೂ ಇದ್ದರು. ಕಾರ್ಮಿಕರು ಈ 'ಭದ್ರತಾ' ಏಜೆನ್ಸಿಯ ಜನಗಳ ಪ್ರವೇಶವನ್ನು ಪ್ರಶ್ನಿಸಿದರು. ಅಷ್ಟಕ್ಕೇ ಈ 'ಭದ್ರತಾ' ಗೂಂಡಾಗಳು ಗೋಲೀಬಾರು ನಡೆಸಿಯೇ ಬಿಟ್ಟರು. ದೇವದತ್ತ ಎಂಬ ಕಾರ್ಮಿಕನ ತಲೆಗೆ ಗುರಿಯಿಟ್ಟು ಕೊಲ್ಲಲಾಯಿತು. ಎರಡು ಗಂಟೆಗಳ ಕಾಲ ಗೋಲೀಬಾರು ನಡೆದರೂ ಅಲ್ಲಿದ್ದ ಪೋಲೀಸರು ಹಾಗೂ ಪೋಲೀಸ್ ಅಧಿಕಾರಿ ಮೂಕಪ್ರೇಕ್ಷಕರಾಗಿದ್ದರು. ಗೋಲೀಬಾರು ನಡೆಸಿದ ನಂತರ ಅದೇಕೋ ಈ 'ಭದ್ರತಾ' ಮಂದಿ ಪಲಾಯನದ ಪ್ರಯತ್ನ ನಡೆಸಿದರು. ಅಂತಹ ಪ್ರಯತ್ನದಲ್ಲಿ ಒಬ್ಬ 'ಭದ್ರತಾ' ಮನುಷ್ಯ ಕಾಲುಜಾರಿ ಕಣಿವೆಗೆ ಬಿದ್ದು ಸತ್ತ. ಈಗ ಪೋಲೀಸರು ಆತನ ಕೊಲೆಯ ಆಪಾದನೆಯನ್ನು ರಾಜ್ಯ ಸಿಐಟಿಯು ಅಧ್ಯಕ್ಷ ರಾಕೇಶ್ ಸಿಂಘಾ ಮತ್ತಿತರ ಮೇಲೆ ಹಾಕಿದ್ದಾರೆ.

ಇದಕ್ಕೆ ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆ ವ್ಯಕ್ತಗೊಂಡಿದೆ. ನ್ಯಾಯಾಂಗ ತನಿಖೆಯ ಬೇಡಿಕೆ ಮುಂದಿಡಲಾಗಿದೆ. ಜುಲೈ 8 ರಂದು ಸಿಐಟಿಯು ರಾಜ್ಯವ್ಯಾಪಿ ಮುಷ್ಕರ ನಡೆಸಿದೆ.

ಈ ಘಟನೆ ಹಲವು ಪ್ರಶ್ನೆಗಳನ್ನೆಬ್ಬಿಸಿದೆ. ಬಿಜೆಪಿ ಸರಕಾರ ಎಷ್ಟು ಸರ್ವಾಧಿಕಾರ ಶಾಹಿಯಾಗಿದೆ ಎಂಬುದಕ್ಕೆ ಇನ್ನೊಂದು ಉದಾಹರಣೆ. ಬಿಜೆಪಿ ಆಡಳಿತದಲ್ಲಿ ಇದು ಎರಡನೇ ಗೋಲೀಬಾರು. ಈ ಹಿಂದೆ ಮೂವರು ಸೇಬು ಬೆಳೆಗಾರರನ್ನು ಈ ಸರಕಾರ ಗುಂಡಿಕ್ಕಿ ಕೊಂದಿತ್ತು. ಬಹುರಾಷ್ಟ್ರೀಯ ಕಂಪನಿಗಳ ನಿಜಸ್ವರೂಪವೂ ಇಲ್ಲಿ ಬಯಲಾಗಿದೆ. ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಅವರು ಮುಗ್ಧ ಕಾರ್ಮಿಕರನ್ನು ಕೊಲ್ಲಲೂ ಹಿಂಜರಿಯುವುದಿಲ್ಲ ಎಂಬುದು ಬಯಲಿಗೆ ಬಂದಿದೆ.

(ಐ.ಎನ್.ಎನ್)

ಚುನಾವಣೆಯ ಮೇಲೆ ಕಣ್ಣಿಟ್ಟ ಮತ್ತೊಂದು ಕ್ರಮ ಹೊಸ ಕೃಷಿ ವಿಮಾ ಯೋಜನೆ

ಉಸ್ತುವಾರಿ ವಾಜಪೇಯಿ ಸರಕಾರ ಮತ್ತೊಮ್ಮೆ ವಿಧಿ-ವಿಧಾನಗಳನ್ನು ಉಲ್ಲಂಘಿಸಿ ಹೊಸ ಕೃಷಿ ವಿಮಾ ಯೋಜನೆಯೊಂದನ್ನು ಪ್ರಕಟಿಸಿದೆ. ಇದಕ್ಕೆ ಸರಕಾರ ನೀಡುವ ಸಬ್ಸಿಡಿ 1780 ಕೋಟಿ ರೂ.ಗಳು. ಇಷ್ಟು ದೊಡ್ಡ ಮೊತ್ತಕ್ಕೆ ಬಜೆಟ್ ಮಂಜೂರಾತಿಯೇನೂ ಇಲ್ಲ. ಮುಂಬರುವ ಸರಕಾರ ಮುಂದಿನ ಬೆಳೆಯೊಂದಿಗೆ ಈ ಯೋಜನೆಯನ್ನು ಜಾರಿಗೆ ತರಬೇಕಾಗಿದೆ. ಹೊರೆಯನ್ನು ಮುಂದಿನ ಕೇಂದ್ರ ಸರಕಾರ ಹಾಗೂ 50% ರಷ್ಟು ರಾಜ್ಯ ಸರಕಾರಗಳು ಹೊರಬೇಕಾಗಿದೆ. ಇದು ಕೇವಲ ಚುನಾವಣಾ ಲಾಭ ಗಿಟ್ಟಿಸುತ್ತಿರುವ ಪ್ರಯತ್ನ ಎಂಬುದು ಸ್ಪಷ್ಟ.

ರೈತ ಸಂಘಟನೆಗಳೂ ಬಹಳ ವರ್ಷಗಳಿಂದ ಒಂದು ಸಮಗ್ರ ಬೆಳೆ ವಿಮಾ ಯೋಜನೆಗೆ ಒತ್ತಾಯಿಸುತ್ತಾ ಬಂದಿವೆ. ಇದಕ್ಕೆ 13 ತಿಂಗಳು ಪುರುಸೊತ್ತಿಲ್ಲದ ಸರಕಾರ ಈಗ ರೈತ ಸಂಘಟನೆಗಳೊಡನೆ ಸಮಾಲೋಚನೆಯನ್ನೂ ನಡೆಸದೆ, ಅರ್ಧದಷ್ಟು ಹೊರೆಯನ್ನು ಹೊರಬೇಕಾದ ರಾಜ್ಯ ಸರಕಾರಗಳೊಡನೆಯೂ ಸಮಾಲೋಚಿಸದೆ ತರಾತುರಿಯಿಂದ ಈ ಕ್ರಮವನ್ನು ಪ್ರಕಟಿಸಿದೆ.

ಆದ್ದರಿಂದ ಇದರಲ್ಲಿ ಮಧ್ಯಪ್ರವೇಶಿಸಿ ಈ ಯೋಜನೆಯನ್ನು ಸದ್ಯಕ್ಕೆ ನಿಲ್ಲಿಸಬೇಕು, ಹೊಸ ಕೇಂದ್ರ ಸರಕಾರ ರೈತ ಸಂಘಟನೆಗಳು ಹಾಗೂ ರಾಜ್ಯ ಸರಕಾರಗಳೊಂದಿಗೆ ಸರಿಯಾದ ರೀತಿಯಲ್ಲಿ ಸಮಾಲೋಚನೆ ನಡೆಸಿ ಒಂದು ಸಮಗ್ರವಾದ ಬೆಳೆ ವಿಮಾ ಯೋಜನೆ ರೂಪಿಸುವಂತಾಗಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ರಾಷ್ಟ್ರಪತಿ ಗಳಿಗೆ ಮನವಿ ಮಾಡಿದೆ.

(ಐ.ಎನ್.ಎನ್)

ಎಡರಂಗ ಸರ್ಕಾರದ 22 ವರ್ಷಗಳು

ಪುಟ 5 ರಿಂದ

ವರ್ತಿಸುತ್ತಾರೆ. ಆದರೆ ಸಿಪಿಐ(ಎಂ) ಜನಾದೇಶವೆಂದರೆ, ಬಹುಮತವೆಂದರೆ ಜನರಲ್ಲಿ, ಮತದಾರರಲ್ಲಿ ಬಹುಮತ ಪಡೆಯುವುದು ಈ ಅರ್ಥದಲ್ಲಿ ದೇಶವನ್ನು ಆಳಿದ ಯಾವ ಕೇಂದ್ರ ಸರ್ಕಾರವೂ ಆಳಲು ಜನಾದೇಶ ಪಡೆದಿರುವುದಿಲ್ಲ ಶೇ 30-35 ರಷ್ಟು ಮತಗಳನ್ನು ಪಡೆದಿದ್ದರು ವಿಧಾನಸಭೆ/ಲೋಕಸಭೆಗಳಲ್ಲಿ ಮೂರನೇ ಎರಡರಷ್ಟು ಸ್ಥಾನವನ್ನು ಪಡೆದು ತಾವೇ ಆಳಲು ಹಕ್ಕು ಪಡೆದವರು ಎಂದು ಬೀಗಲು ಅವಕಾಶ ಮಾಡಿಕೊಡುವ ಚುನಾವಣಾ ಪದ್ಧತಿ ನಮ್ಮದು. ಆದರೆ ನಮ್ಮ ಪಕ್ಷ ನಿಜವಾಗಿ ಜನರಲ್ಲಿ ಬಹುಮತ ಪಡೆದವರು ಆಳಬೇಕು ಎಂಬ ಉದ್ದೇಶದಿಂದ ನೀತಿಗಳಲ್ಲಿ ಹೆಚ್ಚು ಸಮಾನತೆಯುಳ್ಳ ಪಕ್ಷಗಳನ್ನು ಸೇರಿಸಿದ ರಂಗ ರಚಿಸಿಕೊಂಡು ಸರ್ಕಾರ ಮಾಡಿದೆ.

ಎಡರಂಗ 1977 ರಲ್ಲಿ ಚುನಾವಣೆಗೆ ಸ್ಪರ್ಧಿಸಿದಾಗ ಅದರಲ್ಲಿ ಆರು ಪಕ್ಷಗಳಿದ್ದವು. ಆದರೆ ಈ ರಂಗಕ್ಕೆ ಸಿಪಿಐ(ಎಂ) ಒಂದೇ ಪಕ್ಷಕ್ಕೆ ಬಹುಮತವಿದ್ದರೂ ಕೂಡ ಈ ರಂಗ ವಿಸ್ತಾರವಾಗುತ್ತಾ ಮುನ್ನಡೆದಿದೆ. ಈಗ ಆರಂಭದಲ್ಲಿನ ನಮ್ಮ ರಂಗದಲ್ಲಿಲ್ಲದೆ ಕಾಂಗ್ರೆಸ್ಸಿನ ಜೊತೆಗೂಡಿ ನಮ್ಮನ್ನು ತೀವ್ರವಾಗಿ ವಿರೋಧಿಸುತ್ತಿದ್ದ ಸಿಪಿಐ ಕೂಡ ಸೇರಿಕೊಂಡು ಹತ್ತು ಪಕ್ಷಗಳಿವೆ. ಅಂದರೆ 1977 ರಿಂದ ಇಲ್ಲಿಯವರೆಗೆ ಸಿಪಿಐ(ಎಂ) ಪಕ್ಷಕ್ಕಿರುವ ಮಂತ್ರಿ ಪದವಿಗಳ ಸಂಖ್ಯೆ ಹೆಚ್ಚಿಲ್ಲ ಬದಲಾಗಿ ಕುಗ್ಗಿವೆ.

ಜನಸಮುದಾಯದಲ್ಲಿ ಹೆಚ್ಚು ಹೆಚ್ಚು ಐಕ್ಯತೆಯನ್ನು ತರಲು ಹಗಲಿರುಳೂ ಶ್ರಮಿಸುವ ಸಿಪಿಐ(ಎಂ) ಎಡರಂಗವನ್ನು ಜನರಲ್ಲಿ ಐಕ್ಯತೆಯನ್ನು ತರುವ ಒಂದು ಸಾಧನವನ್ನಾಗಿ ಮಾಡಿಕೊಂಡಿದೆ. ಹೀಗಾಗಿ 6 ಪಕ್ಷಗಳಿದ್ದ ಎಡರಂಗ 10 ಪಕ್ಷಗಳ ರಂಗವಾಯಿತು ಎಂದರೆ ಆ ಪಕ್ಷಗಳ ಹಿಂದಿದ್ದ ಜನಸಮುದಾಯ ಎಡರಂಗದ ಬೆಂಬಲಿಗ ಸಮುದಾಯದೊಡನೆ ಸೇರಿ ಜನರ ಐಕ್ಯತೆ ಹೆಚ್ಚಾಯಿತು ಎಂದು ಪರಿಗಣಿಸುತ್ತೇವೆ.

ಸಮ್ಮಿಶ್ರ ಸರ್ಕಾರವನ್ನು ರಚಿಸಿಕೊಂಡಿರುವುದು ಎಡರಂಗದ ಸ್ಥಿರತೆಗೂ ಅಂದರೆ 22 ವರ್ಷಗಳ ನಿರಂತರ ಗೆಲುವಿಗೂ ಸಹಕಾರಿಯಾಗಿದೆ. ದೇಶದ ರಾಜಕಾರಣದಲ್ಲಿ ಯಾವುದೇ ಬಿರುಗಾಳಿ ಬೀಸಿದರೂ ಪ.ಬಂಗಾಳ ಎಡರಂಗ ದೃಢವಾಗಲು ಅದರ ಜನಪರ ಧೋರಣೆಯೊಂದಿಗೆ ಜನರ ಹೆಚ್ಚು ಹೆಚ್ಚು ಐಕ್ಯತೆಯನ್ನು ಸಾಧಿಸುವಎಡರಂಗ ಸಮ್ಮಿಶ್ರ ಸರ್ಕಾರವೂ ಮುಖ್ಯ. ಶೇ 30-35 ಜನ ಬೆಂಬಲದೊಂದಿಗೆ ಮಾತ್ರ ಸರ್ಕಾರ ನಡೆಸುವ ಪಕ್ಷಗಳು ಕೇವಲ ಕೆಲವೇ ಶೇಕಡಾ ಮತಗಳು ಆಗಾಗ್ಗೆ ಏಳುವ ಬಿರುಗಾಳಿಗಳಲ್ಲಿ ಅತ್ತಿತ್ತ ಸರಿದಾಗ ಗೋತಾ ಹೊಡೆದಿವೆ. ಆದರೆ ಜನರ ಬಹುಮತ ಮೇಲೆ ನಿಂತ ಸರ್ಕಾರವಾದ ಎಡರಂಗ ಈ ಬಿರುಗಾಳಿಯನ್ನು ಸಮರ್ಥವಾಗಿ ಎದುರಿಸಿ 22 ವರ್ಷಗಳ ಕಾಲ ಸ್ಥಿರವಾಗಿ ನಿಂತಿದೆ.

ಪಶ್ಚಿಮ ಬಂಗಾಳ

ಬೇರೆಡೆ ರೈತರು ಕೃಷಿಕೂಲಿಕಾರರಾಗುತ್ತಿದ್ದಾಗ ಇಲ್ಲಿ ಕೃಷಿಕೂಲಿಕಾರರು ರೈತರಾಗಿದ್ದಾರೆ

ಎಡರಂಗ ಸರಕಾರ ಭೂಹೀನರಿಗೆ, ಬಡ ರೈತರಿಗೆ ಹಂಚಿದ ಜಮೀನು ಇತರೆಡೆಗಳಂತೆ ಪಶ್ಚಿಮ ಬಂಗಾಳದಲ್ಲೂ ಅವರ ಒಡೆತನದಲ್ಲಿ ಈಗ ಇಲ್ಲ, ಸಿರಿವಂತ ರೈತರ, ಇತರ ಸಿರಿವಂತ ವಿಭಾಗಗಳ ಪಾಲಾಗಿದೆ ಎಂಬ ಟೀಕೆ ಸಂಪೂರ್ಣ ನಿರಾಧಾರ ಎಂದು ಇತ್ತೀಚಿನ ಒಂದು ಸರ್ವೆಯಿಂದ ದೃಢ ಪಟ್ಟಿದೆ.

ಕೇವಲ ಭೂಮಿ ಕೊಟ್ಟರಷ್ಟೇ ಭೂಹೀನ ಕೃಷಿಕೂಲಿಕಾರರು, ಬಡರೈತರು ಏನು ಮಾಡಲೂ ಸಾಧ್ಯವಾಗುವುದಿಲ್ಲ, ಅವರು ಅದನ್ನು ಮಾರಿಕೊಳ್ಳಬೇಕಾಗುತ್ತದೆ ಎಂಬುದು ನಿಜ. ಆದ್ದರಿಂದಲೇ ಎಡರಂಗ ಸರಕಾರ ಭೂಮಿ ಹಂಚುವುದರೊಂದಿಗೇ ಕೃಷಿ ಲಾಗುವಾಡುಗಳ ಪೂರೈಕೆಯತ್ತವೂ ವಿಶೇಷ ಗಮನ ನೀಡಿತ್ತು. ಅದರ ಫಲ ಈಗ ಕಂಡು ಬಂದಿದೆ. ಜಮೀನು ಪಡೆದ ಬಡ ಪಟ್ಟಾದಾರರಲ್ಲಿ 87% ಅದನ್ನು ನಮ್ಮ ಒಡೆತನದಲ್ಲೇ ಉಳಿಸಿಕೊಂಡು ಅದರಿಂದ ಪ್ರಗತಿ ಹೊಂದಿದ್ದಾರೆ ಎಂದು ಎಡರಂಗ ಸರಕಾರ ಏರ್ಪಡಿಸಿದ್ದ ಒಂದು ಸರ್ವೆಯಿಂದ ದೃಢಪಟ್ಟಿದೆ.

ಈ ಸರ್ವೆಯಿಂದ ಕೆಲವು ಮಹತ್ವದ ಸಂಗತಿಗಳು ಬೆಳಕಿಗೆ ಬಂದಿವೆ. 133575 ಪಟ್ಟಾದಾರರ ಸರ್ವೆ ನಡೆಸಲಾಯಿತು.

- ಇವರಲ್ಲಿ 96% ಮೊದಲ ಬಾರಿ ಯಾವುದೇ ಜಮೀನಿನ ಪಟ್ಟಾ ಪಡೆದವರು, 85% ಮಂದಿ ಭೂಹೀನರಾಗಿದ್ದವರು, ಇತರರು ಅಲ್ಪಸ್ವಲ್ಪ ಜಮೀನು ಪಡೆದಿದ್ದವರು.
- ಇವರಲ್ಲಿ ಸುಮಾರು 75% ಮಂದಿ ಸಾಕಷ್ಟು ಪ್ರಮಾಣದಲ್ಲಿ ಹೊಸ ಹಣ ತೊಡಗಿಸಿ ಈಗಲೂ ಬೇಸಾಯ ಮುಂದುವರೆಸಿದ್ದಾರೆ.
- 85% ಮಂದಿ ಹೇಗೋ ತಮ್ಮ ಜಮೀನಿಗೆ ಒಣ ಸೀಜನ್‌ನಲ್ಲೂ ನೀರಾವರಿ ವ್ಯವಸ್ಥೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇಷ್ಟೇ ಮಂದಿ ರಸಗೊಬ್ಬರ ಅಧಿಕ ಇಳುವರಿ ತಳಿ ಇತ್ಯಾದಿಗಳನ್ನು ಬೆಳಕಿಗೆ ತಂದಿದ್ದಾರೆ.
- 83% ಮಂದಿ ಬ್ಯಾಂಕ್‌ಗಳಿಂದ ಸಾಲ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಅವನ್ನು ಹಿಂತಿರುಗಿಸಲೂ ಶಕ್ತರಾಗಿದ್ದಾರೆ. ಕೇವಲ 16% ಮಂದಿ ಈಗಲೂ ಲೇವಾದೇವಿದಾರರನ್ನು ಅವಲಂಬಿಸಿದ್ದಾರೆ.
- 87% ಮಂದಿ ಪಾರಂಪರಿಕ ಬೆಳೆ ವಿಧಾನದಿಂದ ಮುಂದೆ ಹೋಗಿ ವಿಭಿನ್ನ ಉತ್ಪಾದನಾ ವಿಧಿ-ವಿಧಾನಗಳನ್ನು ಅನುಸರಿಸುತ್ತಾರೆ. ಉದಾಹರಣೆಗೆ, ಕೋಳಿ ಸಹಕಾರಿಗಳು, ಬೀಜ, ಕೃಷಿ ಲಾಗುವಾಡುಗಳ ವಿತರಣಾ ಕೇಂದ್ರಗಳನ್ನು ರಚಿಸುವುದು ಇತ್ಯಾದಿ.
- 74% ಮಕ್ಕಳು ಈಗ ನಿಯಮಿತವಾಗಿ ಆರೋಗ್ಯ ರಕ್ಷಣೆಗೆ ದಾಕು ಹಾಕಿಸಿಕೊಳ್ಳುತ್ತಿದ್ದಾರೆ, 63% ಮಕ್ಕಳು ನಿಯಮಿತವಾಗಿ ಶಾಲೆಗೆ ಹೋಗುತ್ತಿದ್ದಾರೆ.

1993 ರಿಂದ 1998 ರ ನಡುವೆ ಇಡೀ ದೇಶದಲ್ಲಿ 1,47,000 ಎಕ್ರೆ ಜಮೀನು ಸರಕಾರದ ವಶಕ್ಕೆ ಬಂತು. ಇದರಲ್ಲಿ 87 ಸಾವಿರ ಎಕ್ರೆ ಪಶ್ಚಿಮ ಬಂಗಾಳವೊಂದರಲ್ಲೇ - ಅಂದರೆ 56%. ಈ ಅವಧಿಯಲ್ಲಿ ದೇಶಾದ್ಯಂತ 2.38 ಲಕ್ಷ ಎಕ್ರೆ ಭೂಹೀನರಲ್ಲಿ, ಬಡ ರೈತರಲ್ಲಿ ಹಂಚಿಕೆಯಾಯ್ತು. ಇದರಲ್ಲೂ ಸಿಂಹಪಾಲು ಪಶ್ಚಿಮ ಬಂಗಾಳದಲ್ಲೇ - 83 ಸಾವಿರ ಎಕ್ರೆ. ಪಟ್ಟಾ ಹಂಚಿಕೆಯಾದ ಕೂಡಲೇ ಅದು ಕಂಪ್ಯೂಟರ್‌ಗಳ ಇಲೆಕ್ಟ್ರಾನಿಕ್ ಕಡತಗಳಲ್ಲಿ ದಾಖಲೆಯಾಗುತ್ತದೆ.

1991 ರಿಂದ 1996 ಜಾಗತೀಕರಣ, ಉದಾರೀಕರಣದ ಬಿರುಗಾಳಿ ಇಡೀ ಜಗತ್ತನ್ನು ಆವರಿಸಿದ ಅವಧಿ. ಎಲ್ಲಾ ಕಡೆ ಸಣ್ಣ ಮತ್ತು ಅತಿಸಣ್ಣ ರೈತರು ತಮ್ಮ ಜಮೀನು ಕಳಕೊಂಡರು, ಕೃಷಿಕಾರ್ಮಿಕರ ಸಂಖ್ಯೆ ಹೆಚ್ಚಾಯಿತು. ಆದರೆ ಪಶ್ಚಿಮ ಬಂಗಾಳದಲ್ಲಿ ತದ್ವಿರುದ್ಧ ಪ್ರವೃತ್ತಿ ಕಂಡು ಬಂತು. ಬಡ ರೈತ ವಿಭಾಗಗಳ ಜಮೀನಿನ ಪಾಲು 72% ಕ್ಕೇರಿತು. ಕೃಷಿ ಕಾರ್ಮಿಕರ ಸಂಖ್ಯೆ ಇಳಿಯಿತು. ಅಂದರೆ ಇತರೆ ರೈತರು ಜಮೀನು ಕಳಕೊಂಡು ಕೃಷಿ ಕೂಲಿಕಾರರಾದರೆ ಇಲ್ಲಿ ಕೃಷಿ ಕೂಲಿಕಾರರು ಜಮೀನು ಪಡೆದು ರೈತರಾದರು.

ಅಂದರೆ ಇಂತಹ ಗಂಭೀರ ಪರಿಸ್ಥಿತಿಯಲ್ಲೂ ಭೂಸುಧಾರಣಾ ಆಂದೋಲನ ಹಲವರು ನಿರೀಕ್ಷಿಸಿದಂತೆ ಸ್ಥಗಿತಗೊಳ್ಳದೆ ಕಿಸಾನ್ ಸಭಾದ ಭಾಗವಹಿಸುವಿಕೆ ಯೊಂದಿಗೆ ಭರದಿಂದ ಪ್ರಗತಿ ಸಾಧಿಸುತ್ತಿದೆ.

○


ಪ.ಬಂಗಾಳದಲ್ಲಿ ಪರ್ಯಾಯ ಬಂಗಾಳೀ ಚಾನೆಲ್ ಆರಂಭಿಸಲು ಪ್ರಯತ್ನ

ಬಹುಪಾಲು ಅವನತಶೀಲ ಪಾಶ್ಚಿಮಾತ್ಯ ಸಂಸ್ಕೃತಿಯನ್ನೇ ಪ್ರತಿನಿಧಿಸುವ ಇಲೆಕ್ಟ್ರಾನಿಕ್ ಮಾಧ್ಯಮದ ಪ್ರಸಾರಗಳಿಗೆ ಪ್ರತಿಯಾಗಿ ಪರ್ಯಾಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಒಂದು ಬಂಗಾಳಿ ಚಾನೆಲ್ ಆರಂಭಿಸಬೇಕೆಂದು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಪ್ರಯತ್ನಿಸುತ್ತಿದೆ. ಇದಕ್ಕಾಗಿ ಅದು ಪ್ರಮುಖ ವ್ಯಕ್ತಿಗಳನ್ನು, ಕಂಪನಿಗಳನ್ನು ಸಂಪರ್ಕಿಸಿ ಅವರ ನೆರವು ಕೇಳಿದೆ.

ಈ ಬಂಗಾಳಿ ಚಾನೆಲ್‌ಗೆ 50 ಕೋಟಿ ರೂಪಾಯಿಗಳು ಬೇಕಾದೀತು ಎಂದು ಎಡರಂಗ ಸರ್ಕಾರದ ಸಾಂಸ್ಕೃತಿಕ ವ್ಯವಹಾರಗಳ ಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಹೇಳಿದ್ದಾರೆ. ಇಂತಹ ಒಂದು ಪರ್ಯಾಯ ಚಾನೆಲ್ ಇಲ್ಲದೆ ನಮ್ಮ ಕಿಶೋರ ವಯಸ್ಸಿನವರ ಹಾಗೂ ಯುವಜನರ ಮನಸ್ಸುಗಳನ್ನು ಭ್ರಷ್ಟಗೊಳಿಸುತ್ತಿರುವ ವಿದೇಶಿ ಚಾನೆಲ್‌ಗಳ ಕಾರ್ಯಕ್ರಮಗಳನ್ನು ಎದುರಿಸಲು ಸಾಧ್ಯವಾಗದು ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ರಾಜ್ಯ ಸರಕಾರ ಯಾವುದೇ ರೀತಿಯಲ್ಲಿ ಇಂತಹ ಒಂದು ಚಾನೆಲ್ ಆರಂಭವಾದಾಗ ಅದರ ಮೇಲೆ ನಿಯಂತ್ರಣ ಇಟ್ಟುಕೊಳ್ಳುವುದಿಲ್ಲ, ಅಥವಾ ಅದರ ಮೇಲೆ ಅಧಿಕಾರ ಹೇರುವುದಿಲ್ಲ. ಅದರ ಬದಲು ಅದಕ್ಕೆ ಬೇಕಾದ ಪರಿಕರಗಳನ್ನು ಒದಗಿಸುವ ಕೆಲಸದ ಮೇಲೆ ಗಮನ ಕೇಂದ್ರೀಕರಿಸುತ್ತದೆ ಎಂದಿದ್ದಾರೆ. ಕಲಾವಿದರು ತಮ್ಮ ರಚನೆಗಳ ಮೂಲಕ ಬಂಗಾಳದ ಸಂಸ್ಕೃತಿಯನ್ನು ಬಿಂಬಿಸಲು ಪೂರ್ಣ ಸ್ವಾತಂತ್ರ್ಯವಿರುತ್ತದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕರ್ನಾಟಕದಲ್ಲೂ ಇಂತಹ ಒಂದು ಪರ್ಯಾಯ ಚಾನೆಲ್‌ನ ಅಗತ್ಯವಿದೆ ಎಂದು ಅನಿಸುತ್ತಿದೆಯಲ್ಲವೇ?

ಇತ್ತೀಚೆಗೆ ಕೇವಲ ಕೆಲವು ತಿಂಗಳುಗಳ ಅಂತರದಲ್ಲಿ ಅಮೆರಿಕದ ಹಲವು ಸ್ಕೂಲುಗಳಲ್ಲಿ ದಂಗುಬಡಿಸುವ ಸಾಮೂಹಿಕ ಕಗ್ಗೊಲೆಗಳು ನಡೆದಿವೆ - ಹಾಡು ಹಗಲಲ್ಲೇ. ಆ ಸ್ಕೂಲಿನ ವಿದ್ಯಾರ್ಥಿಯೊಬ್ಬ ಅಥವಾ ಇಬ್ಬರು ತಮ್ಮ ಸ್ಕೂಲಿನ ಸಹಪಾಠಿಗಳನ್ನು ಏನೂ ಕಾರಣವಿಲ್ಲದೆ ಸಿಕ್ಕಾಪಟ್ಟೆ ಗುಂಡು ಹೊಡೆದು ಕಗ್ಗೊಲೆ ಮಾಡಿದ್ದಾರೆ. ಈ ಘಟನೆಗಳು ಅಮೆರಿಕಾದಲ್ಲಿ ಸಾರ್ವಜನಿಕ ಚರ್ಚೆಗೊಳಗಾಗಿದೆ. ಸಮಾಜವಿಜ್ಞಾನಿಗಳು, ಮನೋಶಾಸ್ತ್ರಜ್ಞರು, ಶಿಕ್ಷಣವೇತ್ತರು, ಹಲವಾರು ಕಾರಣಗಳನ್ನು ಕೊಡುತ್ತಿದ್ದಾರೆ. ಅಮೆರಿಕದಲ್ಲಿ ಒಂದು ವಿಶಿಷ್ಟ 'ಹಿಂಸಾ ಸಂಸ್ಕೃತಿ' ಇದೆ ಎಂಬುದು ಈಗ ಎಲ್ಲರೂ ಒಪ್ಪುವ ವಿಷಯ. ಆದರೆ ಇದರ ಮೂಲ ಎಲ್ಲಿ? ಡ್ರೈವಿಂಗ್ ಲೈಸೆನ್ಸ್‌ಗಿಂತ ಸುಲಭವಾಗಿ ಸಿಗುವ ಗನ್ನುಗಳಲ್ಲೇ? ಟಿ.ವಿ., ಫಿಲಂಗಳು, ವಿಡಿಯೋ ಗೇಮ್ಸ್ - ಎಲ್ಲವನ್ನೂ ಆವರಿಸಿ ತಾಂಡವವಾಡುತ್ತಿರುವ 'ಹಿಂಸೆ'ಯಿಂದಲೇ? ಇದು ಇದ್ದಕ್ಕಿದ್ದಂತೆ ಧುತ್ತೆಂದು ನಿಂತ ಸಮಸ್ಯೆಯೇ? ಅಲ್ಲ ಎಂಬುದು ಅಮೆರಿಕದ ಸಾಮಾಜಿಕ ವ್ಯವಸ್ಥೆ ಬಗ್ಗೆ ಅರಿವಿರುವವರಿಗೆಲ್ಲಾ ಸ್ಪಷ್ಟವಾಗಿರುವ ಸಂಗತಿ. ಹಾಗಾದರೆ ಅಮೆರಿಕನ್ 'ಹಿಂಸಾ ಸಂಸ್ಕೃತಿ' ಯ ಮೂಲ ಎಲ್ಲಿ ಎಂದು ತಿಳಿಹೇಳುವ ಲೇಖನ.


ತಮ್ಮ ಸಹಪಾಠಿಯ ಅಂತಿಮ ಸಂಸ್ಕಾರದ ವೇಳೆ ಶೋಕತಪ್ತ ವಿದ್ಯಾರ್ಥಿಗಳು

ಅಮೆರಿಕನ್ ಸ್ಕೂಲುಗಳಲ್ಲಿ ಕಗ್ಗೊಲೆ

ಅಮೆರಿಕನ್ 'ಹಿಂಸಾ ಸಂಸ್ಕೃತಿ' ಎಲ್ಲಿಂದ ಬಂತು?

ಕೆಲವು ತಿಂಗಳುಗಳ ಹಿಂದಿನ ಕಥೆ. ಅದೊಂದು ಶಾಂತವಾದ ಮಂಗಳವಾರದ ಮುಂಜಾನೆ. ಕೊಲೊರಾಡೋ ಹೈಸ್ಕೂಲ್‌ನಲ್ಲಿ ಎಂದಿನಂತೆ ಸ್ಕೂಲ್‌ಗೆ ಬರುತ್ತಿರುವ ಹದಿಹರೆಯದ ಹುಡುಗ, ಹುಡುಗಿಯರ ಕೇಕೆ, ಮಾತಿನ ವಾತಾವರಣ ತುಂಬಿತ್ತು. ಒಮ್ಮೆಗೆ ಇಬ್ಬರು ಹುಡುಗರು ನುಗ್ಗಿದರು ತಮ್ಮ ಕ್ಲಾಸಿಗೇ. ಸಿಕ್ಕಾಪಟ್ಟೆ ಕಂಡ ಕಂಡಲ್ಲಿ ಗುಂಡು ಹಾರಿಸತೊಡಗಿದರು. ಕ್ಷಣಾರ್ಧದಲ್ಲೇ ನಗುತ್ತಿದ್ದ ಕ್ಲಾಸು ಮಸಣವಾಯಿತು. ಕ್ಷಣಗಳ ಹಿಂದೆ ನಗುತ್ತಾ ಕೇಕೆ ಹಾಕುತ್ತಿದ್ದ 2 ವಿದ್ಯಾರ್ಥಿಗಳು ಮತ್ತು ಅವರ ಶಿಕ್ಷಕ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಕ್ಲಾಸಿನಿಂದ ಹೊರಗೆ ಹೋದ ಈ ಇಬ್ಬರು ಹುಡುಗರು ಸಿಕ್ಕಾಪಟ್ಟೆ ಕಂಡಕಂಡಲ್ಲಿ ಗುಂಡು ಹಾರಿಸಿದರು. ವಿದ್ಯಾರ್ಥಿಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಓಡತೊಡಗಿದರು. ಇಡೀ ಸ್ಕೂಲನ್ನು ಒತ್ತೆಯಾಳುಗಳಂತೆ ಇಟ್ಟುಕೊಂಡಿದ್ದ ಇಬ್ಬರು ವಿದ್ಯಾರ್ಥಿಗಳನ್ನು ಹತೋಟಿಗೆ ತಂದು ಬಂಧಿಸಬೇಕಾದರೆ ಪೋಲೀಸರಿಗೆ ಸಾಕು ಬೇಕಾಯ್ತು.

ಇದು ಎಂದೂ ಒಮ್ಮೆ ನಡೆದ ಕೆಟ್ಟ ಘಟನೆ ಅಲ್ಲ. ಇದಕ್ಕಿಂತ ಮೊದಲು ಹಲವು ಬಾರಿ ನಡೆದ ಘಟನೆ. ಆಮೇಲೂ ಹಲವು ಕಡೆ ಇಂತಹ ಕಗ್ಗೊಲೆ ಪ್ರಯತ್ನ ನಡೆದಿದೆ. ಇದು ಅಮೆರಿಕದ ಜನಮಾನಸವನ್ನು ಬಹಳವಾಗಿ ಕಲಕಿದ ಘಟನೆ.

ಸಮಾಜದ ಮೇಲೆ ಆಕ್ರೋಶ?

ಆದ್ದರಿಂದ ಈ ಬಗ್ಗೆ ಸ್ವಾಭಾವಿಕವಾಗಿಯೇ ಮಾಧ್ಯಮಗಳು ಬರೆದಿವೆ. ಚರ್ಚೆ ನಡೆದಿದೆ. ಎಲ್ಲರೂ ತಮಗೆ ತೋಚಿದ ಹಾಗೆ ಈ ಘಟನೆಯ ವಿಶ್ಲೇಷಣೆ, ಕಾರಣಗಳನ್ನು ಹೇಳುತ್ತಿದ್ದಾರೆ. ಅಮೆರಿಕದಲ್ಲಿ 'ಹಿಂಸಾ ಸಂಸ್ಕೃತಿ'ಯೊಂದು ತಾಂಡವವಾಡುತ್ತಿದೆ ಎಂಬುದು ಎಲ್ಲರೂ ಹೇಳುತ್ತಿರುವ ಹೆಚ್ಚು ಕಡಿಮೆ ಫ್ಯಾಷನ್ ಆಗಿರುವ ಹೇಳಿಕೆ. ಅದರ ಬಗ್ಗೆ ಯಾವುದೇ ಅನುಮಾನವಿಲ್ಲ. ಆದರೆ ಈ 'ಹಿಂಸಾ ಸಂಸ್ಕೃತಿ' ಬಗ್ಗೆ ಭಾಷಣ ಬಿಗಿಯುವ, ವಿಶ್ಲೇಷಣೆಗಳನ್ನು ಉದುರಿಸುವ ಶಿಕ್ಷಣವೇತ್ತರು, ಮನೋಶಾಸ್ತ್ರಜ್ಞರು, ಸಮಾಜ ವಿಜ್ಞಾನಿಗಳು ಸಮಸ್ಯೆಯ ಮೂಲಕ್ಕೆ ಹೋಗುತ್ತಿಲ್ಲ. ಈ ರೋಗದ ಮೂಲ ಕಾರಣ ಹುಡುಕದೆ ಕೊಲೆಗಾರ ಹುಡುಗರ ವರ್ತನೆಗೆ ಮನೋವೈಜ್ಞಾನಿಕ, ಸಮಾಜ ವೈಜ್ಞಾನಿಕ ಕಾರಣಗಳನ್ನು ಕೊಡಲು ಪ್ರಯತ್ನಿಸುತ್ತಿದ್ದಾರೆ. ಈ ಹುಡುಗರು ಒಡೆದ ಕುಟುಂಬಗಳಿಂದ ಬಂದವರಲ್ಲ. ತೀವ್ರ ಆರ್ಥಿಕ ಸಮಸ್ಯೆ ಎದುರಿಸುತ್ತಿರುವ ಬಡ ಕುಟುಂಬಗಳಿಂದ ಬಂದವರಲ್ಲ. ಆ ಸ್ಕೂಲ್ ಸಹ ಹಿಂಸಾತ್ಮಕ ಗ್ಯಾಂಗುಗಳಿಂದ ಕುಪ್ರಸಿದ್ಧವಾದ ನಗರದ ಭಾಗಗಳಲ್ಲಿ ಇರುವಂತಹದೂ ಅಲ್ಲ. ಆದ್ದರಿಂದ ಹುಡುಗರು ತಮ್ಮ ಕುಟುಂಬಗಳಲ್ಲೇ 'ಒಬ್ಬಂಟಿಗ'ರಾಗಿದ್ದರು. ಕುಟುಂಬದ, ಸಮಾಜದ ನಿರ್ಲಕ್ಷ್ಯಕ್ಕೆ ಒಳಗಾದ, ಸಮಾಜದಲ್ಲಿ ನಾವು ಸಫಲರಾಗುವುದಿಲ್ಲ ಎಂಬ ಹತಾಶೆಯ ಹುಡುಗರ ಕ್ರಮ ಎಂದು ಹಲವು 'ತಜ್ಞರು' ಬಣ್ಣಿಸುತ್ತಿದ್ದಾರೆ. ಕುಟುಂಬದ, ಸಮಾಜದ ಗಮನ ಸೆಳೆಯುವ, ಅದರ ಬಗ್ಗೆ ಕೋಪ ವ್ಯಕ್ತಪಡಿಸುವ ಅನಿಸಿಕೆಯ ಕ್ರಮ ಎಂದು ಎಲ್ಲಾ ಬಳಸಲಾಗುತ್ತಿದೆ.

'ಗನ್ನು ಸಂಸ್ಕೃತಿ'

ಇನ್ನೂ ಹಲವು ತಜ್ಞರು ಡ್ರೈವಿಂಗ್ ಲೈಸೆನ್ಸ್‌ಗಿಂತ ಸುಲಭವಾಗಿ ಸಿಗುವ ಗನ್ನು ಲೈಸೆನ್ಸ್, 'ಹಿಂಸಾ ಸಂಸ್ಕೃತಿ'ಯ ಮೂಲ ಎನ್ನುತ್ತಾರೆ. ವಿಡಿಯೋ ಗೇಮ್‌ಗಳಲ್ಲಿ, ಕಾರ್ಟೂನ್ ಫಿಲಂಗಳಲ್ಲಿ, ಸಿನಿಮಾಗಳಲ್ಲಿ, ಟಿ.ವಿ. ಸೀರಿಯಲ್ಲುಗಳಲ್ಲಿ, ಸುದ್ದಿಗಳಲ್ಲೂ, ಎಲ್ಲಾ ಮಾಧ್ಯಮಗಳಲ್ಲೂ ಜಾಹೀರಾತುಗಳಲ್ಲೂ ತಾಂಡವವಾಡುತ್ತಿರುವ ಸರ್ವವ್ಯಾಪಿ ಹಿಂಸೆ. ಅದರಲ್ಲೂ ವ್ಯಾಪಕವಾಗಿ ಎಲ್ಲಾ ದೃಶ್ಯಮಾಧ್ಯಮಗಳಲ್ಲೂ ವೈಭವೀಕೃತವಾಗುತ್ತಿರುವ ಹಿಂಸೆ ಈ 'ಹಿಂಸಾ ಸಂಸ್ಕೃತಿ'ಯನ್ನು ಬಾಲ್ಯದಿಂದ ಅಮೆರಿಕದ ನರನಾಡಿಗಳಲ್ಲಿ ಅದನ್ನು ತುಂಬುತ್ತದೆ. ಅದೆ 'ಹಿಂಸಾ ಸಂಸ್ಕೃತಿ'ಯ ಮೂಲ ಎಂದು ಹಲವು ಸಮಾಜ ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ.

ಬಲಪಂಥೀಯ ಗ್ಯಾಂಗ್‌ಗಳು

ಇದು ಯಾವುದು ಮೂಲ ಕಾರಣ ಅಲ್ಲ. ಹೊರಗೆ ಕಾಣುವ ರೋಗದ ಭಯಾನಕ ಲಕ್ಷಣಗಳು ಅಷ್ಟೇ ಎನ್ನುತ್ತಾರೆ ಅಮೆರಿಕನ್ ಕಮ್ಯುನಿಸ್ಟ್ ಪಕ್ಷದ ಇಲಿಯೊನೊಯ್ ಪ್ರಾಂತೀಯ ಅಧ್ಯಕ್ಷ ಸ್ಕಾಪ್ ಮಾರ್ಷಲ್. ಕೊಲೊರಾಡೋದಲ್ಲಿ ಕಗ್ಗೊಲೆಗೈದ ಇಬ್ಬರು ಹುಡುಗರು ಅಮೆರಿಕನ್ನರಲ್ಲಿ ವ್ಯಾಪಕವಾಗಿ ಬೆಳೆಯುತ್ತಿರುವ ಬಲಪಂಥೀಯ 'ಸಶಸ್ತ್ರ ಗ್ಯಾಂಗ್' ಗಳಿಗೆ ಸದಸ್ಯರಾಗಿದ್ದವರು ಎಂದು ಈ ಎಲ್ಲಾ ತಜ್ಞರು ಮರೆತುಬಿಡುತ್ತಾರೆ ಅಥವಾ ಮರೆ ಮಾಡ ಬಯಸುತ್ತಾರೆ. ಗುಂಡು ಹಾರಿಸುವಾಗ ಅವರು ಆ 'ಗ್ಯಾಂಗ್'ನ ಘೋಷಣೆಗಳನ್ನು ಕೂಗಿದರಂತೆ. ಅವರು ಆ ಗ್ಯಾಂಗಿಗೆ ಸೇರಿದವರು ಎಂಬುದು ಗುಟ್ಟೇನು ಆಗಿರಲಿಲ್ಲ. ಅಮೆರಿಕಾದ್ಯಂತ ಇಂತಹ ನೂರಾರು ಬಲಪಂಥೀಯ ಸಶಸ್ತ್ರ ಗ್ಯಾಂಗ್‌ಗಳಿವೆ. ಅವು ಹೈಸ್ಕೂಲ್ ಹುಡುಗರನ್ನು ಸದಸ್ಯರಾಗಿ ಸೇರಿಸಿಕೊಳ್ಳುತ್ತಿವೆ. KKK(ಕೂ ಕ್ಲುಕ್ಸ್ ಕ್ಲಾನ್) ಎಂಬುದು ಹಲವು ದಶಕಗಳಿಂದ ಕೆಲಸ ಮಾಡುತ್ತಿರುವ ಫ್ಯಾಸಿಸ್ಟ್-ರೀತಿಯ ಸಂಘಟನೆ. 'ಮಿಚಿಗನ್ ಮಿಲಿಶಿಯಾ' ಎಂಬುದು ನಾಲ್ಕು ವರ್ಷಗಳ ಹಿಂದೆ ಒಕ್ಲೊಹಾಮಾ ಬಾಂಬ್ ದಾಳಿ ನಡೆಸಿದ ಸಂಘಟನೆ. ಇನ್ನೂ ಹಲವು ಬಿಳಿ ಜನಾಂಗವಾದಿ ಸಂಘಟನೆಗಳು ಇವೆ. 'ಕ್ರಿಶ್ಚಿಯನ್ ಕೋಲಿಶನ್' ಎಂಬ ಕ್ರಿಶ್ಚಿಯನ್ ಮೂಲಭೂತವಾದಿ ಗುಂಪು ಸಹ ವೇಗವಾಗಿ ಬೆಳೆಯುತ್ತಿದೆ.

ಬಂಡವಾಳ ತನ್ನ ಅಧಿಪತ್ಯ (ಅದು ದೇಶದಲ್ಲಾಗಲೀ, ವಿದೇಶದಲ್ಲಾಗಲಿ) ಉಳಿಸಿಕೊಳ್ಳಬೇಕಾದರೆ ಅದು ಬಲಪ್ರಯೋಗ ಮಾಡಲೇಬೇಕು. ಹಿಂಸೆ ಬಳಸಲೇ ಬೇಕು. ಆಳವಾಗಿ ಹರಡಬೇಕು.ಇದು ಅಮೇರಿಕದ ಸಮಾಜದ ಆಳುವ ವರ್ಗದ 'ಹಿಂಸಾ ಸಂಸ್ಕೃತಿ'. ಅದನ್ನು ಆಳುವ ವರ್ಗ ಇಡೀ ಸಮಾಜದ ಮೇಲೆ ಹೊರಿಸಲು ಯತ್ನಿಸು ತ್ತವೆ. ಆಮೇಲೆ ಅವರನ್ನೇ ಅದಕ್ಕಾಗಿ ದೂಷಿಸುತ್ತಾರೆ. ಇರಾಕ್, ಯುಗೋಸ್ಲಾವಿಯಗಳ ಮೇಲೆ ತಿಂಗಳುಗಟ್ಟಲೆ ಅಕಾರಣವಾಗಿ ಹಿಂಸಾತ್ಮಕ ಬಾಂಬ್ ದಾಳಿ ನಡೆಸಿದ ಕ್ಲಿಂಟನ್ 'ಹಿಂಸಾ ಸಂಸ್ಕೃತಿ'ಯ ಬಗ್ಗೆ ಕಣ್ಣೀರು ಹಾಕುವಾಗ ಅದಕ್ಕಿಂತ ಅಪಹಾಸ್ಯದ ವಿಷಯ ಇನ್ನೇನಾದರೂ ಇದ್ದೀತೆ?

ಇವೆಲ್ಲಾ ಯುವಜನರ ಅತೃಪ್ತಿ ಬಳಸಿ ಅವರನ್ನು ಅನರ್ಥಕಾರಿ ಹಿಂಸೆಯತ್ತ ಸೆಳೆಯುತ್ತಿವೆ. ಇವಕ್ಕೆಲ್ಲ ದೊಡ್ಡ ಕಂಪನಿಗಳು, ರಿಪಬ್ಲಿಕನ್ ಪಕ್ಷದ ಪರೋಕ್ಷ ಬೆಂಬಲ, ಕುಮ್ಮಕ್ಕು ಇದೆ. ಇವುಗಳಲ್ಲಿ ಹಲವು ಮಹಿಳೆಯರ 'ಗರ್ಭಪಾತ ಹಕ್ಕಿ'ಗೆ ವಿರೋಧಿ. ಅದಕ್ಕಾಗಿ 'ಗರ್ಭಪಾತ'ನಡೆಸುವ ಆಸ್ಪತ್ರೆಗಳು, ವಾರ್ಡುಗಳ ಮೇಲೆ ಧಾಳಿ ನಡೆಸುತ್ತಾರೆ. ಇನ್ನೂ ಕೆಲವರು ಬಿಳಿಯರಲ್ಲದವರ ಮೇಲೆ ಜನಾಂಗೀಯ ವಿಷಕಾರಿಕೊಳ್ಳುತ್ತಾರೆ. ಇತರ ಅಲ್ಪ ಸಂಖ್ಯಾತರು, ವಲಸೆಗಾರರ ಮೇಲೆ ಕತ್ತಿ ಮಸೆಯುತ್ತಾರೆ. ಅಂತಹ ಮಹಿಳೆಯರನ್ನು ಬೆದರಿಸಿದ್ದಾರೆ. ಕೊಲೆಯೂ ಮಾಡಿದ್ದಾರೆ. ಇವೆಲ್ಲಾ ಅವರು ಮಾಡುವುದು 'ಉತ್ತಮ ಕುಟುಂಬ ಮೌಲ್ಯಗಳನ್ನು ಸ್ಥಾಪಿಸುವ' ಘೋಷಣೆಯ ಆಧಾರದ ಮೇಲೆ!

'ಕೌಬಾಯ್' ರೇಗನ್ ವರ್ಷಗಳು

ಅಮೆರಿಕದ ಸಾಮಾಜಿಕ-ಆರ್ಥಿಕ ವ್ಯವಸ್ಥೆಯಲ್ಲಿ ಈ 'ಹಿಂಸಾ ಸಂಸ್ಕೃತಿ' ಯಾವಾಗಲೂ ಇತ್ತು. ಆದರೂ ಅದು ತಾರಕಕ್ಕೇರಿದ್ದು 'ಗ್ರೇಟ್ ಕೌಬಾಯ್' ರೇಗನರ ಅಧ್ಯಕ್ಷ ಕಾಲದಲ್ಲಿ, 80 ರ ದಶಕದ ಆರಂಭದಲ್ಲಿ. ಅಮೆರಿಕದ ಸಮಾಜದಲ್ಲಿದ್ದ ಎಲ್ಲಾ ಹಿಂದುಳಿದ, ಪ್ರತಿಗಾಮಿ ಸಂಗತಿಗಳ, ಶಕ್ತಿಗಳ ರಕ್ಷಕ ಈತ. ಆತ ತನ್ನ ಅಧ್ಯಕ್ಷಗಿರಿ ಆರಂಭಿಸಿದ್ದೇ ವಿಮಾನ ನಿಲ್ದಾಣ ಕಾರ್ಮಿಕರ ಮುಷ್ಕರವನ್ನು ಮುರಿಯುವ ಮೂಲಕ. ಅದಕ್ಕಾಗಿ ಆತ ಕಾರ್ಮಿಕರ ವಿರುದ್ಧ ಭಾರಿ ಹಿಂಸಾಚಾರ ಬಳಸಿದ. ಸಾವಿರಾರು ವಿಮಾನ ನಿಲ್ದಾಣ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿದ. ದೊಡ್ಡ ಪ್ರಮಾಣದಲ್ಲಿ ಏರಲು ಆರಂಭಿಸಿದ್ದ ಅಪರಾಧಗಳನ್ನು ತಡೆಯುವ ಸಾಮಾಜಿಕ ಆರ್ಥಿಕ ಕ್ರಮಗಳ ಬದಲು, ಅದಕ್ಕೆ ಪ್ರತಿಯಾಗಿ ಪೋಲೀಸರ ದೌರ್ಜನ್ಯ, ಪೋಲೀಸರಿಗೆ ಬೇಕಾಬಿಟ್ಟಿ ಅಧಿಕಾರಗಳನ್ನು ಕೊಟ್ಟಿದ್ದು ರೇಗನ್ ಕಾಲದಲ್ಲೇ! ಅಲ್ಪಸಂಖ್ಯಾತರಾದ ಕರಿಯರಿಗೆ 60 ರ ದಶಕದ ಭಾರಿ ಹೋರಾಟದಲ್ಲಿ ಗಳಿಸಿದ ಮೀಸಲಾತಿಯ ಮೇಲೆ ಆತ ಭಾರೀ ಧಾಳಿ ಆರಂಭಿಸಿದ. ಬಡವರಿಗೆ, ನಿರ್ಗತಿಕರಿಗೆ, ವಲಸೆಗಾರರಿಗೆ ಸಹಾಯ ಕೊಡುವ ಸಾಮಾಜಿಕ ಕಲ್ಯಾಣದಲ್ಲಿ ಭಾರಿ ಕಡಿತ ಮಾಡಿದ. ಇವೆಲ್ಲಾ 'ಹಿಂಸಾಚಾರ' ಅಲ್ಲವೆ?

ಆದರೆ ಆತನಿಗೆ 'ಮಹಾನ್ ಕೌಬಾಯ್' ಪಟ್ಟ ಕಟ್ಟಿದ್ದು ಆತ ಸೋವಿಯತ್ ಒಕ್ಕೂಟದ ಬಗ್ಗೆ ಅನುಸರಿಸಿದ ಧೋರಣೆಯಿಂದ. ಸೋವಿಯತ್ ಒಕ್ಕೂಟವನ್ನು ಸಾರ್ವಜನಿಕವಾಗಿ ಪದೇ ಪದೆ 'ಕೇಡಿಗಳ ಸಾಮ್ರಾಜ್ಯ' ಎಂದು ಕರೆದು, ಶೀತಲ ಸಮರವನ್ನು ಹೊಸ ಹಿಂಸಾತ್ಮಕ ನೆಲೆಗಳಿಗೆ ತಂದ ಮಹಾನುಭಾವ. ಎರಡನೇ ದರ್ಜೆಯ ನಟನಾಗಿದ್ದ ರೇಗನ್‌ನಿಂದ ಈ 'ಹಿಂಸಾ ಸಂಸ್ಕೃತಿ' ಆರಂಭವಾಯ್ತೆಂದೆ? ಅಲ್ಲ, ಖಂಡಿತ ಅಲ್ಲ. ಆಳವಾದ ಬಿಕ್ಕಟ್ಟಿಗೆ ಒಳಗಾದ ಬಂಡವಾಳಶಾಹಿ ವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಅಗತ್ಯವಾದದ್ದು ಈ 'ಹಿಂಸಾ ಸಂಸ್ಕೃತಿ'

ಬಂಡವಾಳ ತನ್ನ ಅಧಿಪತ್ಯ (ಅದು ದೇಶದಲ್ಲಾಗಲೀ, ವಿದೇಶದಲ್ಲಾಗಲಿ) ಉಳಿಸಿಕೊಳ್ಳಬೇಕಾದರೆ ಅದು ಬಲಪ್ರಯೋಗ ಮಾಡಲೇಬೇಕು. ಹಿಂಸೆ ಬಳಸಲೇ ಬೇಕು. ಆಳವಾಗಿ ಹರಡಬೇಕು. ಈ ಮೇಲೆ ಹೇಳಿದ 'ತಜ್ಞರು' ಈ ಹಿಂಸಾ-ಸಂಸ್ಕೃತಿ ಇಡೀ ಸಮಾಜದ್ದು ಎನ್ನುವಂತೆ ಮಾಡುತ್ತಾರೆ. ಅಲ್ಲ. ಇದು ಅಮೇರಿಕದ ಸಮಾಜದ ಆಳುವ ವರ್ಗದ 'ಹಿಂಸಾ ಸಂಸ್ಕೃತಿ'. ಅದನ್ನು ಆಳುವ ವರ್ಗ ಇಡೀ ಸಮಾಜದ ಮೇಲೆ ಹೊರಿಸಲು ಯತ್ನಿಸುತ್ತವೆ. ಆಮೇಲೆ ಅವರನ್ನೇ ಅದಕ್ಕಾಗಿ ದೂಷಿಸುತ್ತಾರೆ. ಇರಾಕ್, ಯುಗೋಸ್ಲಾವಿಯಗಳ ಮೇಲೆ ತಿಂಗಳುಗಟ್ಟಲೆ ಅಕಾರಣವಾಗಿ ಹಿಂಸಾತ್ಮಕ ಬಾಂಬ್ ದಾಳಿ ನಡೆಸಿದ ಕ್ಲಿಂಟನ್ 'ಹಿಂಸಾ ಸಂಸ್ಕೃತಿ'ಯ ಬಗ್ಗೆ ಕಣ್ಣೀರು ಹಾಕುವಾಗ ಅದಕ್ಕಿಂತ ಅಪಹಾಸ್ಯದ ವಿಷಯ ಇನ್ನೇನಾದರೂ ಇದ್ದೀತೆ? ದೇಶದೊಳಗೂ ಬಲಪಂಥೀಯ ಗ್ಯಾಂಗ್‌ಗಳನ್ನು ಶಾಂತಿಯುತ ಪರಿಸರ ಚಳುವಳಿ, ಟ್ರೇಡ್ ಯೂನಿಯನ್‌ನ ಹೋರಾಟಗಳ ವಿರುದ್ಧ ಬಳಸಲಾಗುತ್ತದೆ.

ಈ ರೋಗಕ್ಕೆ ಮದ್ದು ಏನು?

ಈ 'ಹಿಂಸಾ ಸಂಸ್ಕೃತಿ'ಗೆ ಕಾರಣವಾದ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯುವುದು ಗನ್ನುಗಳ ಲಭ್ಯತೆ ಮೇಲೆ ತೀವ್ರ ನಿರ್ಬಂಧ ಹೇರುವುದು; ಮಾಧ್ಯಮಗಳಲ್ಲಿ ಹಿಂಸೆಯ ಮೇಲೆ ಕಡಿವಾಣ ಹಾಕುವುದು ಇವೆಲ್ಲಾ ಖಂಡಿತಬೇಕು. ವರ್ಗಸಮರ, ಟ್ರೇಡ್ ಯೂನಿಯನ್ ಹೋರಾಟಗಳ, ಅಲ್ಪಸಂಖ್ಯಾತ ವಲಸೆಗಾರರ ಮೇಲೆ ದಾಳಿಗೆ ಪ್ರತಿರೋಧ, ಸಾಮ್ರಾಜ್ಯಶಾಹಿಯುದ್ಧಗಳಿಗೆ ವಿರೋಧಕ್ಕೆ ಜನರನ್ನು ವ್ಯಾಪಕವಾಗಿ ಅಣಿನೆರೆಸುವುದೇ ಈ 'ಹಿಂಸಾಸಂಸ್ಕೃತಿ' ಗೆ ದುಡಿಯುವ ಜನರು ಹಾಕುವ ಸವಾಲು.

ಬಿಜೆಪಿಯ ಚುನಾವಣಾ ನಿಧಿಗೆ ಉಸ್ತುವಾರಿ ಸರಕಾರದ 'ಉದಾರ' ಕೊಡುಗೆಗಳು!

ಸಾರ್ವಜನಿಕ ಖಜಾನೆಯ ಶತ-ಶತಕೋಟಿ ರೂಪಾಯಿಗಳ ಲೂಟಿಯ 'ವ್ಯವಹಾರ'ಗಳು!

ಬಿಜೆಪಿ ನೇತೃತ್ವದ ಸರಕಾರ ಏಪ್ರಿಲ್‌ನಲ್ಲಿ ಲೋಕಸಭೆಯಲ್ಲಿ ವಿಶ್ವಾಸಮತ ಕಳಕೊಂಡಾಗ ಬಿಜೆಪಿ ಆಳ್ವಿಕೆ ಮುಂದುವರಿಸಲು ಬಂದಿರುವ ಈ ಬೆದರಿಕೆಯನ್ನೇ ಒಂದು 'ಅವಕಾಶ'ವಾಗಿ ಬಳಸಿ ಬಿಜೆಪಿ ಚುನಾವಣಾ ಗೆಲುವಿನ ಸಾಧ್ಯತೆ ಗಳನ್ನು ಹೆಚ್ಚಿಸಿ ಎಂದು ಆಗ ಹತಾಶರಾಗಿದ್ದ ತಮ್ಮ ಹಿಂಬಾಲಕರಿಗೆ ಎಲ್.ಕೆ.ಅಡ್ವಾಣಿ ಉಪದೇಶ ನೀಡಿದ್ದರು. ಚುನಾವಣಾ ಗೆಲುವು ಸಿಗುತ್ತದೋ ಇಲ್ಲವೋ ಅವರ ಉಸ್ತುವಾರಿ ಸರಕಾರ ಬಿಜೆಪಿಯ ಚುನಾವಣಾ ನಿಧಿಗಂತೂ ಕೋಟಿಗಟ್ಟಲೆ ರೂಪಾಯಿಗಳನ್ನು ಸುರಿಯಲಾರಂಭಿಸಿದೆ. ಲೋಕಸಭೆಯಲ್ಲಿನ ಸ್ಥಿತಿಯನ್ನು 'ಚೆನ್ನಾಗಿ ಬಳಸಿ' ಕೊಳ್ಳಲಾಗುತ್ತಿದೆ. ಆತುರಾತುರದಲ್ಲಿ ಹಲವಾರು 'ವ್ಯವಹಾರ'ಗಳನ್ನು ಕುದುರಿಸುತ್ತಿದೆ.


ತಮ್ಮವರೇ ಆದ ಜಗಮೋಹನ್‌ರನ್ನು ಸಂಪರ್ಕ ಖಾತೆಯಿಂದ ಹೊರಗೆಸೆದು ಖಾಸಗಿ ಸೆಲ್ಯುಲರ್ ಕಂಪನಿಗಳಿಗೆ 4000 ಕೋಟಿ ರೂಪಾಯಿಗಳ ಭಕ್ಷೀಸು ನೀಡಿದ್ದು ಈಗಾಗಲೇ ಜಗಜ್ಜಾಹೀರಾಗಿದೆ. ಎನ್.ಟಿ.ಪಿ.ಸಿ.ಯ ವಿದ್ಯುತ್ ಯೋಜನೆಯ 6000 ಕೋಟಿ ರೂಪಾಯಿಗಳ ವ್ಯವಹಾರವನ್ನೂ ಕುದುರಿಸಲಾಗಿದೆಯಂತೆ. ತೈಲ ವಲಯದಲ್ಲೂ ಸಾರ್ವಜನಿಕ ವಲಯದ ಕಂಪನಿಗಳ ಒಡೆತನದಲ್ಲಿ ತೈಲ ಪೈಪ್‌ಲೈನ್‌ಗಳನ್ನು ಖಾಸಗೀಯವರಿಗೆ, ವಿದೇಶಿಯವರಿಗೆ ವಹಿಸಿಕೊಡುವ ಹುನ್ನಾರ ನಡೆದಿದೆ. ಇದು ಎಷ್ಟು ಸಾವಿರ ಕೋಟಿ ರೂಪಾಯಿಗಳ ವ್ಯವಹಾರವೋ! ಈಗಾಗಲೇ ನಮ್ಮ ಬೆಂಗಳೂರಿನವರೇ ಆದ ವಿಮಾನ ಯಾನ ಖಾತೆಯ ಮಂತ್ರಿಗಳು 350 ಕೋಟಿ ರೂ.ಗಳ ಒಂದು ವ್ಯವಹಾರ ಕುದುರಿಸಲು ತನ್ನೆಲ್ಲಾ ತಂತ್ರಗಳನ್ನು ಬಳಸುತ್ತಿದ್ದಾರಂತೆ.

ಅಡ್ವಾಣಿಯವರ ಉಪದೇಶದಂತೆ ಅವಕಾಶವನ್ನು ಬಳಸಿಕೊಳ್ಳಲು ಭಾರತೀಯ ಸಂವಿಧಾನದ ಅಪಹಾಸ್ಯ ಮಾಡಿ, ಸಾರ್ವಜನಿಕ ಖಜಾನೆಯಿಂದ ಸಹಸ್ರ-ಸಹಸ್ರ ಕೋಟಿ ರೂಪಾಯಿಗಳ ಲೂಟಿ ಮಾಡುವ 'ವ್ಯವಹಾರ'ಗಳನ್ನು ಹಿಂದೆ ಯಾವ ಉಸ್ತುವಾರಿ ಸರ್ಕಾರವೂ ಮಾಡಿರಲಿಲ್ಲ. ನಿಜವಾಗಿಯೂ ಭ್ರಷ್ಟಾಚಾರದ ಇತಿಹಾಸವನ್ನೇ ಇದು ರಚಿಸಿದೆ.

ಕಾರ್ಗಿಲ್ ಹೆಸರಲ್ಲಿ ಕೋಮುವಾದಕ್ಕೆ ದೇಶಭಕ್ತಿಯ ವೇಷ ತೊಡಿಸುವ ಪ್ರಯತ್ನಗಳು

ದಿಲೀಪ್ ಕುಮಾರ್ ಮೇಲೆ ಶಿವಸೇನೆಯ ಇನ್ನೊಂದು ಹಲ್ಲೆ

ನಮ್ಮ ಹಲವಾರು ವೀರ ಸೈನಿಕರ ಅಮೂಲ್ಯ ಜೀವಗಳ ಬಲಿ ತೆಗೆದುಕೊಂಡ ಕಾರ್ಗಿಲ್ ಸಂಘರ್ಷ ನಿಲ್ಲುತ್ತಿದೆ. ಜನ ಸಮಾಧಾನದ ನಿಟ್ಟುಸಿರು ಬಿಡುತ್ತಿದ್ದಾರೆ-ನಮ್ಮೆರಡು ದೇಶಗಳ ನಡುವೆ ಯುದ್ಧದ ಬೆದರಿಕೆ ನಿವಾರಣೆಯಾಗಿದೆ ಎಂದು. ಈ ಪರಿಸ್ಥಿತಿ ಏಕೆ ಏರ್ಪಟ್ಟಿತು ಎಂಬ ಜಿಜ್ಞಾಸೆ ಈಗ ಆರಂಭವಾಗಿದೆ. ಆದರೆ ಈ ನಡುವೆ ಈ ಗಂಭೀರ ರಾಷ್ಟ್ರೀಯ ಪರಿಸ್ಥಿತಿಗೆ ಸಂಕುಚಿತ ಕೋಮು ಬಣ್ಣ ಬಳಿಯುವ ಕಾವಿಪಡೆಗಳ ಹೊಲಸು ಪ್ರಯತ್ನ ನಿಜವಾದ ದೇಶ ಪ್ರೇಮಿಗಳಲ್ಲಿ ಇನ್ನೊಂದು ರೀತಿಯ ಆತಂಕ ಹುಟ್ಟಿಸಿದೆ.



ಭಾರತ ಒಂದು 'ಹಿಂದೂ ರಾಷ್ಟ್ರ' ಎಂದು ಬಗೆಯುವವರಿಗೆ ಕೋಮುಭಾವನೆಯೇ ದೇಶಭಕ್ತಿಯಾಗಿ ಕಂಡರೆ ಆಶ್ಚರ್ಯವಿಲ್ಲ. ಆದ್ದರಿಂದಲೇ ಶಿವಸೇನೆ ಮತ್ತಿತರ ಕಾವಿಪಡೆಗಳ ಮಂದಿ ಹಿಂದೆ ಭಾರತ-ಪಾಕಿಸ್ತಾನ ಕ್ರಿಕೆಟ್ ಪಂದ್ಯಗಳು ನಡೆಯದಂತೆ ಪ್ರಯತ್ನಿಸಿದರು. ಪ್ರಖ್ಯಾತ ಕಲಾವಿದ ಎಂ.ಎಫ್. ಹುಸೇನ್ ಹಾಗೂ ಹಿರಿಯ ಚಲನಚಿತ್ರ ನಟ ದಿಲೀಪ್ ಕುಮಾರ್‌ರವರಿಗೆ ಹಿಂಸೆ, ಕಿರುಕಳ ನೀಡಿದರು. ದೇಶಾದ್ಯಂತ ಪ್ರಜ್ಞಾಶೀಲರ ಪ್ರತಿರೋಧ ವ್ಯಕ್ತಗೊಂಡಾಗ ಅವರು ಹಿಂದೆ ಸರಿಯ ಬೇಕಾಯಿತು. ಕಾರ್ಗಿಲ್ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಶಿವಸೇನೆ ಮತ್ತು ಇತರ ಕಾವಿಪಡೆಗಳ ಮಂದಿ ಮತ್ತೆ ತಮ್ಮ ದುಷ್ಟ ಪ್ರಯತ್ನ ನಡೆಸಿದ್ದಾರೆ.

ದಿಲೀಪ್ ಕುಮಾರ್‌ರವರಿಗೆ ಪಾಕಿಸ್ತಾನ ಸರಕಾರ ಈ ಹಿಂದೆ ನೀಡಿರುವ ನಿಶಾನ್-ಎ-ಪಾಕಿಸ್ತಾನ್ ಎಂಬ ಬಿರುದನ್ನು ಅವರೀಗ ಹಿಂದಿರುಗಿಸಿ ಆ ಮೂಲಕ ತಮ್ಮ ದೇಶಪ್ರೇಮವನ್ನು ಸಾಬೀತುಪಡಿಸಬೇಕೆಂಬುದು ಶಿವಸೇನೆಯ ವಾದ, ವಾದವಷ್ಟೇ ಅಲ್ಲ, ಕಟ್ಟಪ್ಪಣೆ, ಆ ಅಪ್ಪಣೆ ಪಾಲಿಸುವಂತೆ ಮಾಡಲು ಎಂದಿನಂತೆ ಹಿಂಸಾತ್ಮಕ ಒತ್ತಡ.

ದಿಲೀಪ್ ಕುಮಾರ್‌ರವರು ಭಾರತದ ಸಾಂಸ್ಕೃತಿಕ ಜೀವನಕ್ಕೆ ನೀಡಿದ ಕೊಡುಗೆ ಅಪಾರ. ಪಾಕಿಸ್ತಾನ ಸರ್ಕಾರ ಈ ಉಪಖಂಡದ ಸಾಂಸ್ಕೃತಿಕ ರಂಗದಲ್ಲಿ ಅವರ ಸಾಧನೆಗಳಿಗಾಗಿ ಈ ಬಿರುದನ್ನು ನೀಡಿದಾಗ ಭಾರತ ಸರ್ಕಾರದ ಒಪ್ಪಿಗೆ ಪಡೆದ ನಂತರವೇ ಅದನ್ನು ಸ್ವೀಕರಿಸಿದ್ದರು. ಇಂತಹ ಒಬ್ಬ ವ್ಯಕ್ತಿಯ ದೇಶಪ್ರೇಮವನ್ನು ಆತ ಮುಸ್ಲಿಮನೆಂಬ ಒಂದೇ ಕಾರಣಕ್ಕಾಗಿ ಸಂದೇಹಿಸುವುದು ದುಷ್ಟತನದ ದ್ಯೋತಕ. ಕಾವಿ ಪಡೆಗಳು ಈ ದುಷ್ಟತನವನ್ನೇ ಮತ್ತೊಮ್ಮೆ ಪ್ರದರ್ಶಿಸಿವೆ, ಈ ಮೂಲಕ ಕಾರ್ಗಿಲ್ ಪರಿಸ್ಥಿತಿಯನ್ನು ತಮ್ಮ ಸಂಕುಚಿತ ಸ್ವಾರ್ಥ ರಾಜಕೀಯಕ್ಕೆ ಬಳಸಿಕೊಳ್ಳುವ ಪ್ರಯತ್ನ ನಡೆಸಿವೆ.

ಇದನ್ನು ಹಲವು ಪ್ರಗತಿಪರ ಶಕ್ತಿಗಳು ಸಹಜವಾಗಿಯೇ ಬಲವಾಗಿ ಖಂಡಿಸಿವೆ. ಆದರೆ ದಿಲೀಪ್‌ಕುಮಾರರು ದಶಕಗಳ ಕಾಲ ಯಾವ ರಂಗದಲ್ಲಿ ಶ್ರಮಿಸಿದ್ದಾರೋ ಆ ರಂಗದಲ್ಲಿ ಅವರಿಗೆ ಇಂತಹ ಸಂದರ್ಭದಲ್ಲಿ ನಿರೀಕ್ಷಿತ ಬೆಂಬಲ ಸಿಕ್ಕಿಲ್ಲ ಎಂಬುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ ಎಂದು ಪ್ರಖ್ಯಾತ ಚಿತ್ರ ನಿರ್ದೇಶಕ ಮೃಣಾಲ್ ಸೆನ್ ಹಾಗೂ ಪ್ರಖ್ಯಾತ ನಟಿ ಶಬಾನಾ ಅಜ್ಮಿ ಖೇದ ವ್ಯಕ್ತಪಡಿಸುವಂತಹ ಪರಿಸ್ಥಿತಿ ಬಂದಿದೆ. ಕಾವಿ ಪಡೆಗಳ ಬಚ್ಚಿಟ್ಟ ಅಜೆಂಡಾ ಕಳೆದ 13 ತಿಂಗಳ ಅದರ ಆಡಳಿತದಲ್ಲಿ ನಮ್ಮ ಸಾಂಸ್ಕೃತಿಕ ರಂಗದ ಮೇಲೆ ಎಂತಹ ದುಷ್ಪರಿಣಾಮ ಬೀರಿ... ಎಂಬುದಕ್ಕೆ ಇನ್ನೊಂದು ಉದಾಹರಣೆಯಲ್ಲವೇ?

ದಿಲೀಪ್‌ಕುಮಾರ್ ನೇರವಾಗಿ ಪ್ರಧಾನಮಂ... ಗಳನ್ನೇ ಭೇಟಿಯಾಗಿ ಪ್ರಶಸ್ತಿಯನ್ನು ಹಿಂದಿರುಗಿಸಬೇ... ಎಂದು ಕೇಳಿದರು. 'ಶಿವಸೇನೆ ನಿಮ್ಮಂತಹ ಹಿರಿ... ನಾಗರೀಕರ ದೇಶಪ್ರೇಮವನ್ನು ಶಂಕಿಸಬಾರದಿತ್ತು" ಎಂ... ಹೇಳಿ "ಪ್ರಶಸ್ತಿಯನ್ನು ಹಿಂದಿರುಗಿಸಬೇಕೆ ಬೇಡವೆ... ಎಂಬುದನ್ನು ನೀವೇ ನಿರ್ಧರಿಸಿ, ಸರಕಾರದ ಆಕ್ಷೇಪ... ಈ ಬಗ್ಗೆ ಏನೂ ಇಲ್ಲ" ಎಂದಷ್ಟೇ ಸಲ... ನೀಡಿದರಂತೆ.ವಾಸ್ತವವಾಗಿ ಪ್ರಧಾನ ಮಂತ್ರಿಗಳ... ಶಿವಸೇನೆಯ ಇಂತಹ ಕುರುಡು ದೇಶಭಕ್ತಿಯ... ಪ್ರದರ್ಶನವನ್ನು ನಿಸ್ಸಂಧಿಗ್ದವಾಗಿ ಖಂಡಿಸಬೇಕಿತ್ತು. ಆದ... ಅಂತಹ ಧೈರ್ಯವನ್ನು ಬಿಜೆಪಿಯ ಪ್ರಧಾನ ಮಂತ್ರಿಯಿಂ... ನಿರೀಕ್ಷಿಸಲು ಸಾಧ್ಯವೇ?

ಅವರ ಸರಕಾರದ ಪೋಲೀಸರ ವ್ಯಾಪ್ತಿಯಲ್ಲಿರು... ದಿಲ್ಲಿಯಲ್ಲಿ ದಿಲೀಪ್‌ಕುಮಾರ್‌ರು ತಂಗಿದ್ದ ಹೋಟೆಲ... ಎದುರು ಶಿವಸೇನೆ ಕಾರ್ಯಕರ್ತರು ಅಶ್ಲೀಲ ದಾಂಧ... ನಡೆಸಿದರೂ ಸುಮ್ಮನಿದ್ದ ದಿಲ್ಲಿ ಪೋಲೀಸರು ಈ ಫ್ಯಾಸಿ... ಮನೋಭಾವವನ್ನು ಪ್ರತಿಭಟಿಸಿದ ಸಹಮತ... ಕಲಾವಿದರು, ಎಸ್.ಎಫ್.ಐ, ಡಿವೈಎಫ್‌ಐ ನವರನ್... ಬಂಧಿಸಿದ್ದಾರೆ.

ದಿಲೀಪ್ ಕುಮಾರ್ ಪ್ರಶಸ್ತಿಯನ್ನ... ಹಿಂದಿರುಗಿಸದಿರಲು, ಶಿವಸೇನೆಯ 'ಕಟ್ಟಪ್ಪಣೆ'ಯನ್... ತಿರಸ್ಕರಿಸಲು ನಿರ್ಧರಿಸಿದರು. ರಾಷ್ಟ್ರೀಯ ಆತಂಕ... ಪ್ರಶ್ನೆಗಳನ್ನೆಲ್ಲಾ ಈ ರೀತಿ ತಮ್ಮ ಕೋಮುವಾದೀ ಗುರಿಗ... ಸಾಧನೆಗೆ ದುರುಪಯೋಗ ಪಡಿಸಿಕೊಳ್ಳುವ ಈ... ಕೋಮುವಾದಿ ಶಕ್ತಿಗಳ ಪ್ರಯತ್ನಗಳಿಗೆ ದೇಶ... ಪ್ರಜಾಪ್ರಭುತ್ವವಾದೀ, ಪ್ರಜ್ಞಾಶೀಲ ಜನತೆ ಸರಿಯಾ... ಉತ್ತರ ನೀಡಬೇಕಾಗಿದೆ.

ಕೋಮುವಾದೀ ಆಶಯಕ್ಕಾಗಿ 'ಸರ್ಫರೋಷ್'?

ಕಾರ್ಗಿಲ್ ಕಾರ್ಯಾಚರಣೆ ನಡೆಯುತ್ತಿರುವ ಸನ್ನಿವೇಶದಲ್ಲಿ ಮುಂಬಯಿನ ಒಂದು ಚಿತ್ರಮಂದಿರದಲ್ಲಿ ಇತ್ತೀಚಿನ ಸೂಪರ್ ಹಿಟ್ ಆಮೀರ್-ಸೋನಾಲಿ ಜೋಡಿ-ಮೋಡಿಯ ಖ್ಯಾತ 'ಸರ್ಫರೋಶ್' ಸಿನಿಮಾನವನ್ನು ಸೆಕೆಂಡ್ ರೀಲೀಸ್ ಮಾಡಿ, ಅದರಿಂದ ಬರುವ ಹಣವನ್ನು ಕಾರ್ಗಿಲ್ ನಿಧಿಗೆ ಸಂದಾಯಿಸಲಾಗುವುದೆಂದು ಚಿತ್ರಮಂದಿರದ ಮಾಲೀಕರು ಪ್ರಕಟಿಸಿ, ದೇಶಭಕ್ತಿ ಪ್ರದರ್ಶಿಸಿದ್ದಾರೆಂದು ಪ್ರಚಾರದಲ್ಲಿದ್ದಾರೆ. ಅದನ್ನು ಇತರೆ ಚಿತ್ರಮಂದಿರಗಳ ಮಾಲೀಕರು ಅನುಸರಿಸಿ, ದೇಶಭಕ್ತಿಯನ್ನು ಪ್ರದರ್ಶಿಸಬೇಕೆಂದು ಇತರರನೇಕರು ವಾದಿಸಲಾರಂಭಿಸಿದ್ದಾರೆ. ಮುಂಬಯಿ ಚಿತ್ರಮಂದಿರದ ಮಾಲೀಕರ ಈ ದೇಶಭಕ್ತಿ ಪ್ರದರ್ಶನದ ಆಹ್ವಾನಕ್ಕೆ ಮುಂಬಯಿ ನಗರದ ಯುವಕ-ಯುವತಿಯರು ತುದಿಗಾಲಲ್ಲಿ ನಿಂತು, ದಿನದಿಂದ ದಿನಕ್ಕೆ ಮತ್ತೆ-ಮತ್ತೆ ಒನ್ಸ್‌ಮೋರ್ ಎಂದು ಕಿರುಚಾಡುತ್ತಾ 5-6 ಬಾರಿ, ಕೆಲವರಂತೂ 10-12 ಬಾರಿ ಚಿತ್ರವನ್ನು ನೋಡಿ, ಮುಂದೆಯು ನೋಡುತ್ತೇವೆ ಎಂಬ ವಿಶ್ವಾಸ ವ್ಯಕ್ತಪಡಿಸುತ್ತಿದ್ದಾರೆ.

ಮಧ್ಯಮ ವರ್ಗದ ಮನೆ - ಮನೆಗಳ ಡ್ರಾಯಿಂಗ್ ಹಾಲ್‌ನಲ್ಲಿರುವ ಟಿ.ವಿ.ಗಳಲ್ಲಿ ಬಿತ್ತರಿಸಲಾಗುತ್ತಿರುವ 'ಸರ್ಫರೋಷ್' ಸಿನಿಮಾದ, ಕ್ಲಿಪಿಂಗ್ಸ್ ನಲ್ಲಿ 'ಜೋ ಹಾಲ್ ದಿಲ್ ಪೆ...., ಓ ಹಾಲ್ ದಿಲ್ ಪೇ ಇದರ್ ಹೋರಾಹಾಪ್ಪೆ" ಹಾಡನಾಡುತ್ತಾ ಮಳೆಯಲ್ಲಿ ತೋಯ್ದ ಸೋನಾಲಿ ಅಷ್ಟೇ ತೊಯ್ದ ಆಮೀರ್‌ನೊಂದಿಗೆ ಮರಸುತ್ತಿ ಹಾಡುವ ಹಾಡಿನ, ಗುಂಗಿನಲ್ಲಿ ಮುಂಬಯಿನ ಯುವಕ-ಯುವತಿಯರು 'ಜೋ ಹಾಲ್ ದಿಲ್ ಪೆ..... ಓ ಹಾಲ್ ಕಾರ್ಗಿಲ್ ಮೇ ಹೋರಹಾಪ್ಪೆ' ಎನ್ನುತ್ತಾ ಮತ್ತೆ ಮತ್ತೆ ನೋಡುತ್ತಿದ್ದಾರೆಯೇ ಎಂಬ ಅಂಶ ಕೆಲವರನ್ನು ಕಾಡುವುದು ಸಹಜ.

ಛಾಯಾಗ್ರಹಣ, ಮೈ ಕುಣಿಸುವ ನೃತ್ಯ, ಮೃದುಸ್ವರದ ಹಾಡಿನೊಂದಿಗೆ, ಸೋನಾಲಿಯ ಅರೆ-ಬರೆ ಪ್ರದರ್ಶನದೊಂದಿಗೆ, ಖ್ಯಾತ ಗಝಲ್‌ನೊಂದಿಗೆ, ಒಂಟೆಗಳು ಓಡುವಾಗ ಬರುವ ದೇಶ ರಕ್ಷಣೆಯ ಉದ್ವೇಗ ಸೃಷ್ಟಿಸುವ ಹಾಡು, ನಾಸಿರುದ್ದೀನ್ ಶಾಹನ ಡೈಲಾಗ್ ಗಳು ಮಹಾರಾಷ್ಟ್ರ-ಆಂಧ್ರ ಗಡಿಯ ನಕ್ಸಲ್‌ವಾದಿಗಳ ಆಕ್ರೋಶ, ಅಮೀರ್ ಹೊಡೆದಾಡುವ, ದೇಶದ್ರೋಹಿಗಳನ್ನು ಹೊಡೆದುರುಳಿಸುವ ಪರಿ, ರಾಜಸ್ತಾನದ ಮಿರ್ಚಿಸೇಠ್‌ನ ಸ್ಮೈಲ್‌ಗಳಲ್ಲಿನ ಅನೇಕ ಆಕರ್ಷಕ ಅಂಶಗಳಿಂದ ದೇಶಾದ್ಯಂತ ವಿದ್ಯಾರ್ಥಿ-ಯುವಜನರನ್ನು 'ಸರ್ಫರೋಷ್' ತನ್ನೆಡೆಗೆ ಸೆಳೆದಿದೆ.

ಈ ಅಂಶಗಳು ಇರುವಾಗಲೇ, ಇಡೀ ಸಿನಿಮಾವನ್ನು ನೋಡುವಾಗ, ಗಡಿಯಾಚೆಯಿಂದ ದೇಶದೊಳಗೆ ಅಶಾಂತಿ ಸೃಷ್ಟಿಸುವ ಉದ್ದೇಶದಿಂದ ಅಕ್ರಮವಾಗಿ ಶಸ್ತ್ರಾಸ್ತ್ರ ಸರಬರಾಜು ಹಾಗೂ ಗಾಂಜಾ-ಅಫೀಮು ಸ್ಮಗಲಿಂಗ್ ವಿರುದ್ಧ ಹೋರಾಡುವ-ದೇಶಾಭಿಮಾನ ಪ್ರದರ್ಶನದ ಚಿತ್ರವೆಂದು ಅಭಿಪ್ರಾಯ ಮೂಡುತ್ತದೆ. ದೇಶದ್ರೋಹಿಗಳ ವಿರುದ್ಧ ಸಾಕ್ಷಿ ಹೇಳಲು ಮುಂದಾದ ತಂದೆ ಉಗ್ರಗಾಮಿಗಳಿಂದಾಗಿ ವಿಕಲಾಂಗನಾಗಿ, ಮೂಗನಾಗುವುದು, ಅಣ್ಣನ ಸಾವು, ಸಾಮಾನ್ಯ ವಿದ್ಯಾರ್ಥಿಯಾದ ಅಮೀರ್ ಖಾನ್‌ನನ್ನು ಒಬ್ಬ ಐಪಿಎಸ್ ಅಧಿಕಾರಿಯಾಗುವಂತೆ ಪ್ರೇರೇಪಿಸಿ, ಅವನನ್ನು ಐಜಿಪಿಯನ್ನಾಗಿಸುತ್ತದೆ. ಐಜಿಪಿ ಯಾದನಂತರ ಮಹಾರಾಷ್ಟ್ರ-ಆಂಧ್ರ ಗಡಿಯಲ್ಲಿನ ಮಹಾರಾಷ್ಟ್ರದ ಚಂದ್ರಾಪುರದಲ್ಲಿನ ನಕ್ಸಲೀಯರು ಮದುವೆ ಪಾರ್ಟಿಯೊಂದನ್ನು ಕಾಡಿನಲ್ಲಿ ಅಡ್ಡಗಟ್ಟಿ ಅತ್ಯಾಧುನಿಕ ಶಸ್ತ್ರಾಸ್ತ್ರ ಉಪಯೋಗಿಸಿ, ನಡೆಸುವ ನರಮೇಧದ ತನಿಖೆ ಜವಾಬ್ದಾರಿ ಹೊತ್ತು, ಶಸ್ತ್ರಾಸ್ತ್ರಗಳ ಮೂಲ ಹುಡುಕುತ್ತಾ ಹೋಗುವ ಪರಿಯನ್ನೇ ಇಡೀ ಸಿನಿಮಾದಲ್ಲಿ ಹಿಡಿದಿಡಲು ನಿರ್ದೇಶಕರು ಪ್ರಯತ್ನಿಸಿದ್ದಾರೆ.

ಶಸ್ತ್ರಾಸ್ತ್ರಗಳ ಸರಬರಾಜಿನ ಮೂಲ ಹುಡುಕಿ ಮುಂಬೈನ ಭೂಗತ ದೊರೆಗಳನ್ನು ಬೆನ್ನಟ್ಟಿ ಹೋಗುವ ಅಮೀರ್ (ಐಜಿಪಿ ರಾತೋಡ್) ಭಾರತ-ಪಾಕ್ ಗಡಿಯಲ್ಲಿನ ರಾಜಸ್ಥಾನದ ಜೈಸಲಮೇರ್, ಅಲ್ಲಿನ ಮೆಣಸಿನ ಕಾಯಿ ವ್ಯಾಪಾರಿ 'ಮಿರ್ಚಿಸೇಠ್' ಇದರ ಮೂಲವೆಂದು ತಿಳಿದುಕೊಳ್ಳುತ್ತಾನೆ. ಶಸ್ತ್ರಾಸ್ತ್ರಗಳನ್ನು ಗಡಿಯೊಳಗೆ ತರಲು ತರಬೇತಿಗೊಳಿಸಿದ ಒಂಟೆಗಳು ಪಾಕ್‌ನಿಂದ ಭಾರತದೊಳಗೆ ಶಸ್ತ್ರಾಸ್ತ್ರಗಳನ್ನು ಮನುಷ್ಯರ ಸಹಾಯವಿಲ್ಲದೆಯೇ ತಮ್ಮಷ್ಟಕ್ಕೇ ತಾವೆ ಹೊತ್ತು ತರುವ ಅಂಶ, ಅನಂತರ ಮಿರ್ಚಿ ಸೇಠ್ ಅವುಗಳನ್ನು ಮುಂಬಯಿನ ಭೂಗತದೊರೆಗಳಿಗೆ, ಅಲ್ಲಿಂದ ದೇಶದ ವಿವಿಧೆಡೆ ನಡೆಯುತ್ತಿರುವ ಪ್ರತ್ಯೇಕತಾವಾದಿ ಚಳುವಳಿ ಹಾಗೂ ಉಗ್ರಗಾಮಿಗಳಿಗೆ ಶಸ್ತ್ರಾಸ್ತ್ರ ಸರಬರಾಜಾಗುತ್ತಿರುವ ಜಾಲವನ್ನು ಪತ್ತೆ ಹಚ್ಚುತ್ತಾನೆ.


ಈ ಚಿತ್ರ ವಸ್ತುವಿನಲ್ಲಿ ರೋಮಾಂಚಕತೆ ತುಂಬಲು ಭಾರತ-ಪಾಕ್ ನಡುವಿನ ವೈಷಮ್ಯವನ್ನು ವಿಜೃಂಭಿಸಲು ಚಿತ್ರ ಕಥೆಯ ರಚನಕಾರರು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಿದ್ದಾರೆ. ಅದರೊಟ್ಟಿಗೆ ಕೋಮುವಾದಿಗಳು ಹಬ್ಬಿಸುತ್ತಿರುವ ಗುಮಾನಿ ಸುಳ್ಳನ್ನು ಬಳಸಿ, ಅದನ್ನು ಸಮರ್ಥಿಸುವ ಪ್ರಯತ್ನದ ಭಾಗವಾಗಿ, ಕೆಲವು ಡೈಲಾಗ್‌ಗಳು ಸನ್ನಿವೇಶಗಳನ್ನು ಸೃಷ್ಟಿಸಲಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮುಂಬಯಿನ ಭೂಗತ ದೊರೆಗಳನ್ನು ಬೆನ್ನಟ್ಟಿ ಹೋಗುವಾಗ ಮುಸ್ಲಿಂ ಭೂಗತ ದೊರೆಯೊಬ್ಬ ದೇಶಭಕ್ತ, ಪ್ರಾಮಾಣಿಕ ಪೋಲೀಸ್ ಇನ್ಸ್‌ಪೆಕ್ಟರ್ ಕೈಯಿಂದ, ಕೈತಪ್ಪಿ ಹೋದನೆಂಬ ಏಕಮಾತ್ರ ಕಾರಣಕ್ಕೆ ಇನ್ಸ್‌ಪೆಕ್ಟರ್ ಪಾಕ್ ಪರನೆಂಬ ಹಣೆಪಟ್ಟಿ ಕಟ್ಟಿ, 'ಅಕ್ರಮ ಶಸ್ತ್ರಾಸ್ತ್ರ ಸರಬರಾಜು' ತನಿಖಾ ತಂಡದಿಂದ ಬಿಡುಗಡೆಗೊಳಿಸುವುದು, ಅವನು ತಾನಾಗಿಯೇ ಈ ಕೆಲಸದಲ್ಲಿ ತೊಡಗಲು, ಸಹಾಯ ಮಾಡಲು ಮುಂದಾದಾಗ 'ಸಿನಿಮಾದ ಹೀರೋ ಐಜಿಪಿ ರಾತೋಡ್' ಹೊಡೆಯುವ 'ನಮ್ಮ ಮನೆಯ ರಕ್ಷಣೆಗೆ ಹೊರಗಿನವರ ಸಹಾಯಬೇಡ, ಅದರಲ್ಲೂ ದೇಶದ್ರೋಹಿ ಸಲೀಂನ ಸಹಾಯ ಪಡೆಯಲಾರೆ" ಎಂದು ಡೈಲಾಗ್ ಭಾರತದ ಮುಸ್ಲಿಂರೆಲ್ಲಾ ದೇಶ ದ್ರೋಹಿಗಳು-ಪಾಕ್ ಪರರು ಎಂಬ ಕೋಮುವಾದಿ ಪೊಳ್ಳು ಪ್ರಚಾರಕ್ಕೆ ಭಾವಾವೇಶದ ದೃಢೀಕರಣ ನೀಡಿದಂತಾಗುತ್ತದೆ.

ಕೆ.ಎನ್.ಉಮೇಶ್

ಆದರೂ ಕೊನೆಯಲ್ಲಿ ಸಲೀಂನ ಸಹಾಯದಿಂದಲೇ, ಆತನ ಚಾತುರ್ಯದಿಂದಲೇ ಶಸ್ತ್ರಾಸ್ತ್ರ ಸರಬರಾಜಿನ ಜಾಲದ ಮೂಲ ತಿಳಿಯುವುದೆಂಬ ಅಂಶವನ್ನು ಗೌಣಗೊಳಿಸಲಾಗಿದೆ.

ಇಷ್ಟು ಮಾತ್ರವಲ್ಲದೆ ಇಡೀ ಚಿತ್ರಕ್ಕೆ ಮೆರಗು ನೀಡುವ ಗಝಲ್ ಹಾಡುಗಳನ್ನು ಹಾಡುತ್ತಾ, ಚಿತ್ರದುದ್ದಕ್ಕೂ ಒಬ್ಬ ಕಲಾವಿದನೆಂಬ ಚಿತ್ರಣ ನೀಡುತ್ತಾ, ದೇಶದುದ್ದಕ್ಕೂ ಅವನ ಅಸಂಖ್ಯಾತ ಅಭಿಮಾನಿಗಳಲ್ಲಿ ಸ್ನೇಹ-ಪ್ರೀತಿ-ಭ್ರಾತೃತ್ವ ಸಾರುವ ಪಾಕಿಸ್ತಾನದ ಗಝಲ್ ಗಾಯಕ(ನಸೀರುದ್ದೀನ್ ಶಾ)ನನ್ನು ಕ್ಲೈಮಾಕ್ಸ್ ಘಟ್ಟದಲ್ಲಿ ವಿಲನ್ ಮಾಡಿ, ಅಕ್ರಮ ಶಸ್ತ್ರಾಸ್ತ್ರ ಸರಬರಾಜಿಗೆ ಅವನೇ ಮೂಲವೆಂದು, ಅವನ ಬಾಯಿಂದ ಭಾರತ ವಿರೋಧಿ ಮಾತುಗಳನ್ನು ಉದುರಿಸುವ ಸನ್ನಿವೇಶವಂತೂ ಯಾವುದೇ ಅಮಾಯಕ ವೀಕ್ಷಕನನ್ನು ಭಾವಾವೇಶದಿಂದ ವ್ಯಾಘ್ರನಾಗಿಸಿ, ಕಲಾವಿದನ ವಿರುದ್ಧ ಸಿಡಿದೇಳಿಸುವಂತ ಮನಸ್ಥಿತಿಯನ್ನುಂಟು ಮಾಡುವುದರಲ್ಲಿ ಎರಡು ಮಾತಿಲ್ಲ. ಅದಕ್ಕೆ ಪೂರಕವಾಗಿಯೇ ಗಜಲ್‌ಗಳ ಹಾಗೂ ಗಾಯಕನ ಪರಮ ಅಭಿಮಾನಿಯಾದ ಚಿತ್ರದ ನಾಯಕ 'ಐಜಿಪಿ ರಾತೋಡ್' ಅವನ ವಿರುದ್ಧ ಎರಗುವ ಸನ್ನಿವೇ... ಭಾವನಾತ್ಮಕವಾಗಿ, ಪಾಕಿಸ್ತಾನ ವಿರೋಧಿ, ಪಾ... ಗಾಯಕರ- ವಿರೋಧಿ ಭಾವನೆ ಇಲ್ಲದ ಅಮಾಯ... ಪ್ರಜೆಗಳಲ್ಲಿ ಮೂಡಿಸಿದರೆ, ಈಗಾಗಲೇ ಆ ರೀತಿಯ... ಭಾವನೆಯುಳ್ಳ ಜನರಲ್ಲಿ ಪಾಕ್ ವಿರೋಧಿ ಭಾವ... ಯನ್ನು ಮತ್ತಷ್ಟು ಕೆರಳಿಸದಿರಲಾರದು. ಇದರೊಟ್ಟಿ... ಭಾರತ-ಪಾಕ್ ಸಾಂಸ್ಕೃತಿಕ ವಿನಿಮಯದ ಹೆಸರಿನ... ನಡೆಯುವ ಗೋಷ್ಠಿಗೆ ಬರು... ಪಾಕ್ ಅಧಿಕಾರಿ ಐಎಸ್... ಏಜೆಂಟನನ್ನಾಗಿ ಚಿತ್ರಿಸು... ಪರಿ ಇತ್ತೀಚೆಗೆ ಶಿವಸೇನೆ-ಸಂಘ ಪರಿವಾರದ ಜ... ಎತ್ತಿದ್ದ ಪ್ರಶ್ನೆಯಾದ ಪಾಕ್ ಕಲಾವಿದರನ್... ಆಹ್ವಾನಿಸಬಾರದು, ಸಾಂಸ್ಕೃತಿಕ ವಿನಿಮಯ... ಕಾರ್ಯಕ್ರಮ ಹಮ್ಮಿಕೊಳ್ಳಬಾರದೆಂಬ ಅಂಶವನ್... ಪುಷ್ಟೀಕರಿಸಿ, ಅಂತಹ ಭಾವನೆಯನ್... ಜನಸಾಮಾನ್ಯರಲ್ಲಿ ಬಿತ್ತರಿಸಲು ಪ್ರಯತ್ನಿಸುತ್ತಿದೆ ಎಂದ... ತಪ್ಪಾಗಲಾರದು. ಹಿಂದೂವಾದ ಮಿರ್ಚಿ ಸೇಠ ಹಾಗ... ಇತರರು ಭಾರತದವರಾಗಿಯೇ ಶಸ್ತ್ರಾಸ್ತ್ರ ಅಕ್ರ... ಸರಬರಾಜಿಗೆ ಪಾಕಿಸ್ತಾನಕ್ಕೆ ಸಹಾಯ ಮಾಡುವುದ... ಮುಖ್ಯವಾಗಿ ಗುರಿಪಡಿಸದೆ, ಒಬ್ಬ ಕಲಾವಿದ ಹಿ... ಮಾಡಿದ, ಒಬ್ಬ ಮುಸ್ಲಿಂ ಇನ್ಸ್‌ಪೆಕ್ಟರ್ ಎ... ಪ್ರಾಮಾಣಿಕನಾದರೂ ಅವನನ್ನು ದೇಶದ್ರೋಹಿ ಎಂ... ಗುರಿಪಡಿಸುವ ಈ 'ಸರ್ಫರೋಷ್' ಸಿನಿಮಾ ತಿಳಿಸು... ದೇಶಾಭಿಮಾನದ ಪರಿಯ ಬೇರು ಎಲ್ಲಿದೆ ಎಂ... ಪ್ರಶ್ನಿಸಿ ತಾರ್ಕಿಕವಾಗಿ ನೋಡುವ ಅಗತ್ಯತೆ, ದೇಶ... ಐಕ್ಯತೆ-ಸಮಗ್ರತೆ ಹಾಗೂ ಕೋಮುಸೌಹಾರ್ದತೆ... ಹಿತದೃಷ್ಟಿಯಿಂದ ಅಗತ್ಯವಾಗಿದೆ.

ಕಾರ್ಗಿಲ್ ನಿಧಿ ಸಂಗ್ರಹಕ್ಕೆ 'ಸರ್ಫರೋಷ್' ಮಾತ್ರವೇ ಏಕೆ? ಭಾರತ-ಪಾಕ್ ಯುದ್ಧದಲ್ಲಿ ಮಡಿದ ಸಾವಿರಾರು ಯೋಧರ ದುಃಖ ದುಮ್ಮಾನ ತ್ಯಾಗದ ಪರಿಯನ್ನು ವಿವರಿಸುವ 'ಬಾರ್ಡರ್' ಚಿತ್ರ ಅಥವಾ ಯೇ ದೇಶ್‌ಕಿ ಧರ್ತಿ..... ಎಂಬ ಖ್ಯಾತ ಹಾಡುಗಳನ್ನೊಳಗೊಂಡ ದೇಶಭಕ್ತಿಯ ಜನಸಾಮಾನ್ಯರ ಜೀವನ ಚಿತ್ರಿಸುವ ಐವತ್ತರ ದಶಕದ ಅನೇಕ ಸಿನಿಮಾಗಳು ಈ ಮುಂಬೈ ಚಿತ್ರಮಂದಿರದ ಮಾಲಿಕರ ಕಣ್ಣಿಗೆ ಏಕೆ ಬಿದ್ದಿಲ್ಲ?



Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12 18ನೇ [illegible] 2236462
ಮುದ್ರಣ: ಹಸು ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ